ಇರುತ್ತದೆ. ಪ್ಲಾನಿಂಗ್ ಕಮಿಷನ್ ಹೇಳಿದಂತೆ ಸರ್ಕಾರದವರು ಒಪ್ಪಲೇಬೇಕೆಂಬ ಪ್ರಶ್ನೆ ಏಕೆ ಬರಬೇಕು ? ನಾವು ಇದನ್ನು ಪುಷ್ಟಿಕೊಟ್ಟು ಕೆಲಸ ಮಾಡುವಂತೆ ಮಾಡಿದರೆ, ಮಂತ್ರಿಯವರು ಏಕೆ ಇದ್ದಾರೆ, ಸೆಕ್ರೆಟರಿಯವರು ಏಕೆ ಇದ್ದಾರೆ ? ನಾವು ನಿಜವಾಗಿ ಯೋಚನೆ ಮಾಡುವುದಾದರೆ, ಇಂಥ ಸಂಸ್ಥೆಗಳು ನಿಜವಾದ ಅಡ್ವೈಸ್ ಕೊಟ್ಟಿದ್ದನ್ನು ಸರ್ಕಾರದವರು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗದೆ ತೊಂದರೆಯಾಗಿದೆಯೇ ಹೊರತು ಕಮಿಶನ್ ಇಲ್ಲದಿರುವುದರಿಂದಲ್ಲ, ಬೋರ್ಡು ಇಲ್ಲದಿರುವುದರಿಂದಲ್ಲ. ನಮ್ಮ ಸಂಸ್ಥಾನದಲ್ಲಿ ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಾಣ ಮಾಡಬೇಕೆಂದು ಈ ಮನೆಯಲ್ಲೂ ಮೇಲ್ಮನೆಯಲ್ಲೂ ಆಗಿಂದಾಗ್ಯೆ ಪ್ರಸ್ತಾಪ ಬರುತ್ತಿದೆ. ಕಾವೇರಿ ವ್ಯಾಲಿ ಮತ್ತು ಕೃಷ್ಣಾ ವ್ಯಾಲಿಯ ಬಗ್ಗೆ ಕೆಲಸ ಜರೂರಾಗಿ ನಡೆಯಬೇಕೆಂದು ಬಹಳ ತೀವ್ರವಾಗಿ ವಾದ ಮಾಡುತ್ತಿದ್ದಾರೆ. ಕಾವೇರಿ ನದಿ ವ್ಯಾಲಿಯಲ್ಲಿರತಕ್ಕ ಜಲಾಶಯಗಳನ್ನು ಬೇಗ ಬೇಗ ಕಾರ್ಯಗತ ಮಾಡಬೇಕೆಂದು ಸಭೆಯವರು ಒಂದು ಚಿಕ್ಕ ಸಮಿತಿಯನ್ನು ಮಾಡಿದ್ದರು. ಈ ಸಮಿತಿಯು ಕೆಲಸಕಾರ್ಯಗಳನ್ನು ಮಾಡಿ ತೀವ್ರವಾಗಿ ಕೆಲವು ಸಲಹೆಗಳನ್ನು ಕೊಟ್ಟರು. ಆ ಸಲಹೆಗಳ ಪ್ರಕಾರ ಮೇಜರ್ ಪ್ರೊಜೆಕ್ಟುಗಳಿಗೆ ಎಷ್ಟು ರಿಸೋರ್ಸಸ್ ಹಾಕುವುದಕ್ಕೆ ಸಾಧ್ಯವಿದೆ ಎಂಬ ಸಲಹೆಗಳನ್ನು ಕೊಟ್ಟರು. ಅವರು ನಾನಾ ಶಾಖೆಗಳಲ್ಲಿ ಖರ್ಚನ್ನು ಕಡಿಮೆ ಮಾಡಿ 8-10 ಕೋಟಿ ರೂಪಾಯಿಯ ಉಳಿತಾಯ ಮಾಡಬಹುದು ಮತ್ತು ಅದನ್ನು ದೊಡ್ಡ ದೊಡ್ಡ ಜಲಾಶಯಗಳಿಗೆ ಉಪಯೋಗಿಸಲು ಸಾಧ್ಯವಿದೆ ಎಂದು ಪ್ರತಿಯೊಂದು ಪೋರ್ಟ್‌ಫೋಲಿಯೋದ ಮಂತ್ರಿಯವರ ಮುಂದೆಯೂ ಚರ್ಚೆ ಮಾಡಿ, ಅದನ್ನು ತೋರಿಸಿಕೊಟ್ಟಿದ್ದಾರೆ. ಅದರಲ್ಲಿ 7 ಕೋಟಿ ರೂಪಾಯಿ ಉಳಿತಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದಾರೆ. ಮೂರು-ಮೂರುವರೆ ಕೋಟಿ ಹೊರಗಡೆಯಿಂದ ಎಲ್ಲಾ ತೆಗೆದುಕೊಂಡು ಮೂರು ಕೋಟಿ ಮಾತ್ರ ಉಳಿತಾಯ ಮಾಡುವುದಕ್ಕೆ ಸಾಧ್ಯವೆಂದು ಹೇಳಿದರು. ಇವರು ಮೂರು ಕೋಟಿ ರೂಪಾಯಿ ಸಾಲ ಪಡೆಯಲು ನಮ್ಮದು ಏನೂ ಅಭ್ಯಂತರವಿಲ್ಲ. ಆದರೆ ನಾವು ಮತ್ತು ಸಂಬಂಧಪಟ್ಟ ಎಲ್ಲಾ ಮಂತ್ರಿಯವರೂ ಸೇರಿ, ಉಭಯತ್ರರೂ ಒಪ್ಪಿದಂತಹ ತೀರ್ಮಾನವನ್ನು, ಮತ್ತೆ ಮಂತ್ರಿಯವರು ಸಭೆ ಸೇರಿದಾಗ ಅದನ್ನು ಏಕೆ ಬದಲಾವಣೆ ಮಾಡಿದರು ? ಇದರಲ್ಲಿ ಸರ್ಕಾರದವರಿಗೆ ತೀವ್ರವಾದ ಒಂದು ಗಮನವಿಲ್ಲ, ಆಸಕ್ತಿ ಇಲ್ಲವೆಂದು ಕಾಣುತ್ತದೆ. ನಮ್ಮ ಮುಂದೆ ತೀರ್ಮಾನವನ್ನು ಒಪ್ಪಿಕೊಂಡು, ಹಿಂದುಗಡೆಯಿಂದ ಬದಲಾಯಿಸಿದ್ದೇವೆಂದರೆ, ಇದು ಯಾವ ನ್ಯಾಯ ಮತ್ತು ಸರ್ಕಾರ ಈ ರೀತಿ ಕೆಲಸ ಮಾಡುವುದು ನ್ಯಾಯವಲ್ಲ, ಮತ್ತು ಯೋಗ್ಯವಲ್ಲವೆಂದು ಹೇಳುತ್ತೇನೆ. ಮತ್ತು ಈಗ ಬಂದಿರತಕ್ಕ ಅಡ್ಡಿ ಏನೆಂದರೆ, ಒಂದು ಕಡೆ ಮದ್ರಾಸಿನವರು, ಮತ್ತೊಂದು ಕಡೆ ಕೇರಳದವರು — ನಮಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಡಚಣೆ ತಂದಿದ್ದಾರೆಂದು ಕೇಂದ್ರಸರ್ಕಾರದ ಮುಂದೆ ದೂರು ಕೊಟ್ಟಿದ್ದಾರೆ. ಇಷ್ಟು ಮಾಡಿದರೂ ನಾವು ನಮ್ಮ ನೀರನ್ನು ಉಪಯೋಗಿಸಿಕೊಳ್ಳುವುದು ದೊಡ್ಡ ಕಷ್ಟವಾಗಿದೆ. ಅದರಲ್ಲಿಯೂ ಕಾವೇರಿ ವ್ಯಾಲಿಯಲ್ಲಿರುವ ಜಲಾಶಯವನ್ನು 1974ನೇ ಇಸವಿಯೊಳಗೆ ಪೂರೈಸಬೇಕು. ಒಂದು ಕಡೆ ಮದ್ರಾಸ್ ಸರ್ಕಾರದವರು ಅಡಚಣೆ ಮಾಡುತ್ತಾ ಇರಬೇಕಾದರೆ, ನಮ್ಮಲ್ಲಿರುವ ಯಾವ್ಯಾವ ಬಾಬಿನಿಂದ ಉಳಿಸುವುದಕ್ಕೆ ಸಾಧ್ಯ, ಮತ್ತು ಯಾವ ರೀತಿ ಎಲ್ಲೆಲ್ಲಿಂದ ಹಣ ತರಬಹುದು ಎಂಬುದನ್ನು ತೀವ್ರವಾಗಿ ಯೋಚನೆ ಮಾಡಿ ಜಲಾಶಯವನ್ನು ಬೇಗ ಕಟ್ಟುವುದಕ್ಕೆ ಮನಸ್ಸು ಮಾಡದೆ ಬರೀ ಬಾಯಿಯಲ್ಲಿ ಮಾತ್ರ ಹೇಳುತ್ತಿರುವುದು ಬಹಳ ದುರದೃಷ್ಟಕರ ಎಂದು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಈಗಲೇ ಮದ್ರಾಸ್ ಸರ್ಕಾರದವರು ನಮ್ಮ 1924ನೇ ಇಸವಿಯ ಅಗ್ರಿಮೆಂಟ್ ಪ್ರಕಾರ ನಡೆಯಬೇಕೆಂದು ಹಠ ಹಿಡಿದರೆ ನಮ್ಮ ಮೈಸೂರು ದೇಶಕ್ಕೆ ಬಹಳ ಅನ್ಯಾಯವಾಗುತ್ತದೆ. ನಮ್ಮ ಅಭಿಪ್ರಾಯವನ್ನು ಸರ್ಕಾರದವರು ಮನಗಂಡಿದ್ದಾರೆ. 4 ವರ್ಷಗಳಿಂದ ಒಂದೇ ಸಮನೆ ಅನ್ಯಾಯವಾಗುವುದಿಲ್ಲವೆಂದು ಸರ್ಕಾರ ಹೇಳಿ ನಮ್ಮ ಬಾಯಿ ಕಟ್ಟಿದರು. ಅನ್ಯಾಯವಾಗುತ್ತದೆಂದು ಮದ್ರಾಸ್ ಸರ್ಕಾರದವರು ಇದು ಟ್ರಿಬ್ಯೂನಲ್‌ಗೆ ಹೋಗಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಆ ಬಗ್ಗೆ ಕೇಂದ್ರ ಸರ್ಕಾರದಿಂದ ಕಾಗದ ಬಂದಿದೆ. ಕೇಂದ್ರಸರ್ಕಾರದ ಮಂತ್ರಿಗಳಾಗಿರತಕ್ಕ ಮಾನ್ಯ ಶ್ರೀ ಕೆ. ಎಲ್. ರಾವ್ ಅವರು ಒಂದು ಮಾತನ್ನು ತಿಳಿಸಿದ್ದಾರೆ. ನೀವು 10 ದಿವಸದೊಳಗೆ ಉತ್ತರ ಕೊಡದೇ ಇದ್ದರೆ ನಿಮ್ಮ ಕೆಲಸಕಾರ್ಯಗಳನ್ನು ನಿಲ್ಲಿಸಬೇಕಾಗುತ್ತದೆ, ಮದ್ರಾಸ್ ಸರ್ಕಾರದವರು ಕೋರ್ಟಿಗೆ ಹೋಗುತ್ತಾರೆಂದು ತಿಳಿಸಿದ್ದಾರೆ. ಅದಕ್ಕೆ ನೀವು ಏನು ಸಲಹೆ ಕೊಡುತ್ತೀರೆಂದು ಕೇಳುತ್ತೇನೆ. ಆದ್ದರಿಂದ ಒಂದೇ ಸಮನೆ 1924ನೇ ಇಸವಿಯ ಅಗ್ರಿಮೆಂಟನ್ನು ಒಪ್ಪಿಕೊಂಡು ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ನಾವು ಕೇಂದ್ರಸರ್ಕಾರದಲ್ಲಿ ಪ್ರತಿಭಟನೆ ಮಾಡಬೇಕು. ಕೇಂದ್ರಸರ್ಕಾರದ ಮಾನ್ಯ ಶ್ರೀ ಕೆ. ಎಲ್. ರಾವ್ ಅವರಿಗೆ ಈಗ

ಜ್ಞಾನೋದಯವಾಗಿ ಅದರ ಬಗ್ಗೆ ಏನು ಮಾಡೋಣವೆಂಬ ಪರಿಸ್ಥಿತಿಗೆ ಬಂದಿದ್ದಾರೆಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ವ್ಯವಸಾಯ ವಿಚಾರವಾಗಿ ಮಾನ್ಯ ಹಣಕಾಸಿನ ಸಚಿವರು ಅವರ ಭಾಷಣದಲ್ಲಿ ಹೇಳಿದ್ದಾರೆ. ನಾವು ಬಹಳಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದೇವೆ ಎಂಬುದಾಗಿ ಹೇಳಿದ್ದಾರೆ. ನಿಜ. 1960ನೇ ಇಸವಿಯಲ್ಲಿ 3½ ಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳನ್ನು ಬೆಳೆಯುತ್ತಿದ್ದೆವು. ಈಗ ಜಾಸ್ತಿಯಾಗಿದೆಯೆಂದು ಹೇಳಿದ್ದಾರೆ. ನಿಜ. ವ್ಯವಸಾಯದಲ್ಲಿ ನಾವು ಸ್ವಲ್ಪಮಟ್ಟಿಗೆ ಪ್ರಗತಿಹೊಂದಿದ್ದೇವೆಂಬ ವಾಸ್ತವಾಂಶವನ್ನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಸರ್ಕಾರಕ್ಕೆ ಕೊಡುವ ಸಲಹೆಯೇನೆಂದರೆ, ನಾವು ಎಷ್ಟೇ ಹಣ ಖರ್ಚುಮಾಡಿ ಕೃಷ್ಣಾನದಿ ಜಲಾಶಯವನ್ನು ಪೂರ್ತಿಮಾಡಿ ಅದರ ನೀರನ್ನು ಉಪಯೋಗಿಸಿಕೊಂಡರೂ ಕೂಡ, ನಮ್ಮ ದೇಶದಲ್ಲಿ ಸೇಕಡ 25 ಅಥವಾ 28 ರಷ್ಟಕ್ಕಿಂತ ಹೆಚ್ಚಿಗೆ ನೀರಾವರಿ ಈ ಪ್ರಾಜೆಕ್ಟ್‌ಗಳಿಂದ ಆಗುವುದಿಲ್ಲ. ಬಾಕಿ ಸೇಕಡ 75 ಅಥವಾ 72 ರಷ್ಟು ಡ್ರೈ ಕಲ್ಟಿವೇಷನ್ನಿನಿಂದ ಮೈಸೂರು ದೇಶದ ವ್ಯವಸಾಯ ಮುಂದುವರಿಯಬೇಕಾದ ಪರಿಸ್ಥಿತಿಯಲ್ಲಿದೆ. ಸೇಕಡ 75ರಷ್ಟು ಇರತಕ್ಕ ವ್ಯವಸಾಯ ಭೂಮಿ ಏನಿದೆಯೋ ಅದರಲ್ಲಿ ವ್ಯವಸಾಯಗಾರರ ಪರಿಸ್ಥಿತಿಯನ್ನು ಉತ್ತಮಪಡಿಸಬೇಕು. ಭೂಮಿಯೊಳಗೆ ಇರತಕ್ಕ ಜಲವನ್ನು ಎತ್ತಿ ವ್ಯವಸಾಯ ಮಾಡುವುದಕ್ಕೆ ಹಣವನ್ನು ಒದಗಿಸಬೇಕು. ಲಿಫ್ಟ್ ಇರ್ರಿಗೇಷನ್ ಅಥವಾ ವೆಲ್ ಇರ್ರಿಗೇಷನ್ ಮಾಡುವುದಕ್ಕೆ ಪ್ರಯತ್ನಮಾಡಬೇಕು. ಈ ದಿಸೆಯಲ್ಲಿ ನಾವೇನೋ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ನಾವು ಈಗ ಎಷ್ಟೋ ಜನರಿಗೆ ಬಾವಿ ತೋಡುವುದಕ್ಕೆ ಸಾಲ ಕೊಡುತ್ತಿದ್ದೇವೆ. ಅದಕ್ಕೆ ಸಂಬಂಧಪಟ್ಟ ವರದಿಯನ್ನು ನೀವು ಒಳಹೊಕ್ಕು ನೋಡುವುದಾದರೆ 30 ಸಾವಿರ ಜನಗಳಿಗೆ ಬಾವಿ ತೋಡುವುದಕ್ಕೆ ಸಾಲ ಕೊಟ್ಟಿದ್ದರೂ ಅನೇಕ ಕಡೆಗಳಲ್ಲಿ ಬಾವಿಗಳನ್ನು ತೆಗೆಯದೆ ಇರುವುದನ್ನು ನೋಡಬಹುದು. ಆದರೆ ಅವು ತಮ್ಮ ವರದಿಯಲ್ಲಿ ಸಿಗುವುದಿಲ್ಲ. ಅದನ್ನು ತಾವು ಕೂಲಂಕಷವಾಗಿ ಪರಿಶೀಲನೆಮಾಡಿದರೆ ವ್ಯಕ್ತವಾಗುತ್ತದೆ. ವೈಯಕ್ತಿಕವಾಗಿ ಒಬ್ಬ ವ್ಯಕ್ತಿಗೆ 10 ಸಾವಿರ ರೂಪಾಯಿಗಳನ್ನು ಬಾವಿ ತೆಗೆಯುವುದಕ್ಕೆಂದು ಹಣ ಕೊಟ್ಟರೂ ಕೂಡ, ಆ ಬಾವಿಗೆ ಖರ್ಚುಮಾಡುವುದಕ್ಕೆ ಇಷ್ಟು ಹಣ ಇದ್ದರೂ ಕೂಡ ಅವರಿಗೆ ಎಷ್ಟೋ ತೊಂದರೆಗಳು ಬರುತ್ತವೆ. ಅನೇಕ ರೈತರು 10 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದರೂ ಸಹ ಅವರಿಗೆ ನೀರು ತೆಗೆಯುವುದಕ್ಕೆ ಕಷ್ಟವಾಗುತ್ತದೆ. ಅದಕ್ಕಾಗಿ ನನ್ನ ಸಲಹೆಯೇನೆಂದರೆ, ತಾವು ಒಂದು ಹಳ್ಳಿಯನ್ನು ಒಂದು ಯೂನಿಟ್ಟಾಗಿಟ್ಟುಕೊಂಡು ಅಲ್ಲಿ ಭೂಮಿಯೊಳಗಡೇ ಇರುವ ಜಲ ಮತ್ತು ಮಣ್ಣನ್ನು ಸರ್ವೆಮಾಡಿ ಸರ್ಕಾರದವರು ಅದಕ್ಕಾಗಿ ಒಂದು ಲಕ್ಷ ಅಥವಾ 2 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ದೊಡ್ಡ ಕಮ್ಯೂನಿಟಿವೆಲ್ಲನ್ನು ತೆಗೆದರೆ, ಅದರ ಮೂಲಕ 50 ಅಥವಾ 100 ಎಕರೆಗೆ ನೀರಾವರಿ ಯಾಗುವುದಾದರೆ, ನಾವು ಅದಕ್ಕೆ ಬೇಕಾದ ವಿದ್ಯುಚ್ಛಕ್ತಿ ಒದಗಿಸಿ ಸರ್ಕಾರದ ಏಜೆನ್ಸಿ ಮುಖಾಂತರ ಬಾವಿ ತೆಗೆಸಿದರೆ ಸಣ್ಣಪುಟ್ಟ ಹಿಡುವಳಿದಾರರಿಗೆ ಸಾಕಷ್ಟು ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ತೀವ್ರವಾಗಿ ಸರ್ಕಾರದವರು ಯೋಚನೆಮಾಡಬೇಕು. ಈಗ ಯೋಜನೆಗಳು ಮುಂದುವರೆದಂತೆಲ್ಲಾ ಅನೇಕ ಕೆಲಸಕಾರ್ಯಗಳು ಯಶಸ್ವಿಯಾಗಿ ಆಗಬೇಕಾಗಿವೆ. 3ನೇ ಪಂಚವಾರ್ಷಿಕ ಯೋಜನೆ ಮುಗಿದು 4ನೇ ಪಂಚವಾರ್ಷಿಕ ಯೋಜನೆಗೆ ಬಂದಿದ್ದೇವೆ. ಇನ್ನು 4ನೇ ಪಂಚವಾರ್ಷಿಕ ಯೋಜನೆಯಿಂದ 5ನೇ ಪಂಚವಾರ್ಷಿಕ ಯೋಜನೆಗೆ ಹೋಗುತ್ತೇವೆ. ಈ ಯೋಜನೆಗಳು ಮುಂದುವರೆದಂತೆಲ್ಲಾ ಕೊಆಪರೇಟಿವ್ ಸೆಕ್ಟರ್‌ನಲ್ಲಿ ಬಹಳ ಕೆಲಸಗಳು ಆಗಬೇಕಾಗಿವೆ. ಅದು ನಿಜ. ಕಾನ್‌ಸ್ಟಿಟ್ಯೂಷನ್ನಿನಲ್ಲಿ ಏನು ಪ್ರಿನ್ಸಿಪಲ್ಸ್ ಇವೆ, ಮತ್ತು ನಮ್ಮ ಏಮ್ಸ್ ಅಂಡ್ ಆಬ್ಜೆಕ್ಟ್ಸ್ ಏನಿವೆಯೆಂಬುದನ್ನು ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದ 12ನೇ ಪುಟದಲ್ಲಿ ಹೇಳಿದ್ದಾರೆ. ಇದರ ಪ್ರಕಾರ ಆ ಗುರಿಗಳನ್ನು ಅಚೀವ್ ಮಾಡಬೇಕಾದರೆ ನಮ್ಮಲ್ಲಿ ಆಗುವ ಉತ್ಪತ್ತಿ ನ್ಯಾಯವಾದ ರೀತಿಯಲ್ಲಿ ಹಂಚಿಕೆಯಾಗಬೇಕಾಗಿದೆ. ಈ ವ್ಯವಸ್ಥೆ ಕೊಆಪರೇಟಿವ್ ಸೆಕ್ಟರ್‌ನಿಂದ ಆಗಬೇಕೆನ್ನುವುದನ್ನು ಎಲ್ಲರೂ ಒಪ್ಪಿದ್ದಾರೆ. ಆದರೆ ಇದರಲ್ಲಿ ನಾವು ಕೋಟ್ಯಾಂತರ ರೂಪಾಯಿಗಳನ್ನು ಏನು ಬಂಡವಾಳ ಹಾಕಿದ್ದೇವೋ ಅದರಲ್ಲಿ ಅವ್ಯವಹಾರ ನಡೆಯುತ್ತಿದೆ. ಅದು ದಿನೇದಿನೇ ಬೆಳೆಯುತ್ತಿದೆ. ಆದರೂ ನಾವು ಯಾವ ಗುರಿಯನ್ನು ಮುಟ್ಟಬೇಕೆಂದು ಕೆಲಸಮಾಡುತ್ತಿದ್ದೇವೋ ಆ ಗುರಿಗಳನ್ನು ಅಚೀವ್ ಮಾಡುವುದಕ್ಕೆ ನಿಜವಾಗಿ ನಾವು ಪ್ರಯತ್ನ ಮಾಡಿದ್ದೇವೆಯೇ ಎನ್ನುವ ವಿಚಾರದಲ್ಲಿ ನಾವು ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ಇನ್ನು ಈಗ ನಮ್ಮ ಸರ್ಕಾರಕ್ಕೆ ಸಂಬಂಧಪಟ್ಟ ವಿಚಾರವನ್ನು ಉದಾಹರಣೆ ಮುಖಾಂತರ ಕೊಡುತ್ತೇನೆ. ನಾವು ಕೊಆಪರೇಟಿವ್ ಅಗ್ರಿಕಲ್ಚರಲ್ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮುಖಾಂತರ ಸುಮಾರು 37 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವಷ್ಟು ಫರ್ಟಿಲೈಜರುಗಳನ್ನು ತರಿಸಿಕೊಂಡಿದ್ದರೂ, ಅದನ್ನು ಎಲ್ಲರಿಗೂ ಹಂಚಿಕೆ ಮಾಡಿದ್ದಾರೆಯೋ ಎಂದು ಕೇಳಿದರೆ ಏನೂ ಮಾಡಿಲ್ಲ. ಸುಮಾರು

(SRI D. DEVARAJ URS)

3 ತಿಂಗಳುಗಳ ಹಿಂದೆ ರಿಸೋರ್ಸಸ್ ಕಮಿಟಿಯ ಮುಂದೆ ಈ ಪ್ರಶ್ನೆ ಬಂತು. ಅಲ್ಲಿ ಮಾನ್ಯ ಆರ್ಥಿಕ ಸಚಿವರೇ ಚೇರ್‌ಮನ್ ಆಗಿದ್ದರು. ಎಷ್ಟೋ ಕೋಟಿ ರೂಪಾಯಿಗಳಷ್ಟು ಬೆಲೆಬಾಳತಕ್ಕ ಫರ್ಟಿಲೈಜರ್ಸ್ ಇನ್ನೂ ಹಾಗೆಯೇ ಉಳಿದಿವೆ, ಖರ್ಚಾಗಲಿಲ್ಲವೆಂದು ಕೋಆಪರೇಟಿವ್ ಡಿಪಾರ್ಟ್‌ಮೆಂಟಿನವರು ಒಪ್ಪಿಕೊಂಡಿದ್ದಾರೆ. ನಾವು ಈಗ 9 ಕೋಟಿ ರೂಪಾಯಿಗಳಷ್ಟು ಗೊಬ್ಬರವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿದೆ. ಎಲ್ಲರಿಗೂ ಹಂಚಿಕೆ ಮಾಡುತ್ತೇವೆ, ಖರ್ಚುಮಾಡುತ್ತೇವೆಂದು ಅವರು ಹೇಳಿದ್ದಾರೆ. ನಾಲ್ಕಾರು ತಿಂಗಳುಗಳು ಕಳೆದ ಮೇಲೆ ಏಕೆ ಹೀಗೆ ಆಯಿತೆಂದು ನೋಡಿದ್ದಕ್ಕೆ ಕೊ-ಆಪರೇಟಿವ್ ಸೆಕ್ಟರ್ ಮುಖಾಂತರ ಬಂದಿದೆ, ಯಾರೊಬ್ಬರ ದೊಡ್ಡ ಮನುಷ್ಯರ ಏಜೆನ್ಸಿಯಿಂದಲ್ಲ. ಈಗ ಕೋಟಿಗಟ್ಟಲೆ ಹಣ ಮತ್ತು ಅದಕ್ಕೆ ಕೊಡಬೇಕಾದ ಬಡ್ಡಿಯ ಜವಾಬ್ದಾರಿಯನ್ನು ಯಾರ ಮೇಲೆ ಹಾಕುವುದು ? ಅದು ಸರ್ಕಾರೀ ನೌಕರರ ಮೇಲೆ ಬೀಳುವುದಿಲ್ಲವೇ ?

ಶ್ರೀ ಜಿ. ದುಗ್ಗಪ್ಪ.—ಈಗ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಒಂದು ದಿವಸಕ್ಕೆ 8 ಸಾವಿರ ರೂಪಾಯಿಗಳಷ್ಟು ಬಡ್ಡಿಯನ್ನು ಕೊಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನೀವು ನೋಡುತ್ತೇವೆ ಎಂಬು ಹೇಳುವ ಮಾತಲ್ಲ. ಕೊ. ಆಪರೇಟೀವ್ ಸೆಕ್ಟರ್ ಅಭಿವೃದ್ಧಿ ಆಗಬೇಕು ನಿಜ. ಆದರೆ ಸರಕಾರ ಈ ವಿಚಾರದಲ್ಲಿ ಏನು ಮಾಡುತ್ತಿದೆ? ನೀವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೇ ಎಂದು ಕೇಳುವಾಗ ಅಲ್ಲಿ ಬರುತ್ತದೆ ನಿಮ್ಮ ಸೋಲು. ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಶಕ್ತಿ ಸರಕಾರಕ್ಕೆ ಇಲ್ಲ. ಯಾಕೆ ಇಲ್ಲ ಎಂದರೆ ಅವರ ನಾನಾ ದಾಕ್ಷಿಣ್ಯಗಳಿಗೆ ಒಳಗಾಗಿದ್ದಾರೆ. ಸ್ನೇಹದ ದಾಕ್ಷಿಣ್ಯಕ್ಕೋ, ಊಟದ ದಾಕ್ಷಿಣ್ಯಕ್ಕೋ, ಜಾತಿಯ ದಾಕ್ಷಿಣ್ಯಕ್ಕೋ ಇನ್ನು ಯಾವುದೇ ಬೇರೆ ರೀತಿಯ ದಾಕ್ಷಿಣ್ಯಕ್ಕೋ ಅವರು ಒಳಗಾಗುತ್ತಾರೆ. ಇದನ್ನು ಸರಕಾರ ತೀವ್ರತೆಯಿಂದ ಗಮನಿಸಬೇಕು.

ಶ್ರೀ ಹಂಪಿ ಶಿವಣ್ಣ.—ಇನ್ನು ಯಾವ ಯಾವ ರೀತಿ ಇದೆ ಎಂದು ವಿವರಿಸಿದರೆ ಒಳ್ಳೆಯದು. ಯಾಕೆಂದರೆ ತಾವು ಅಲ್ಲಿಯೇ ಇದ್ದವರು ಅದಕ್ಕೋಸ್ಕರ.

ಶ್ರೀ ಡಿ. ದೇವರಾಜ ಅರಸ್.—ಆ ಡಿಪಾರ್ಟ್‌ಮೆಂಟ್ ನನ್ನ ಹತ್ತಿರ ಇರಲಿಲ್ಲ. ಈ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಜವಾಬ್ದಾರಿ ಯಾರು ಎಂದು ಕಂಡುಹಿಡಿದು ಅವರಿಗೆ ಶಿಕ್ಷೆ ಮಾಡುವುದಕ್ಕೆ ತಯಾರು ಇದ್ದರೆ ಆಗ ನಾನು ಮೆಚ್ಚುಗೆಯನ್ನು ಸೂಚಿಸುತ್ತೇನೆ. ಒಂದು ಕಡೆ ಕೊಆಪರೇಟೀವ್ ಸೆಕ್ಟರ್ ಬೆಳೆಸುತ್ತೇವೆ ಎಂದು ಹೇಳಿ ಹಣ ಪೋಲಾಗಿರುವುದನ್ನು ನೋಡಿ ದಾಕ್ಷಿಣ್ಯಕ್ಕೆ ಒಳಗಾಗಿ ನೆಪೋಟಿಜಂ, ಕರಪ್ಷನ್ ಅಥವಾ ಫೇವರಿಟಿಜಂ ಇದಕ್ಕೆ ಬಲಿಯಾಗಿದ್ದಾರೆ. ಇದು ದೇಶದ ದುರದೃಷ್ಟ ಎಂದು ಹೇಳಬಹುದು. ಅವರು ಯಾತಕ್ಕೆ ಇಂತಹ ಒತ್ತಡಕ್ಕೆ ಬಲಿಯಾಗುತ್ತಾರೆ ಎಂದರೆ ಪಟ್ಟಭದ್ರ ಹಿತಗಳನ್ನು ಸರಕಾರದ ಬೆಂಬಲಕ್ಕಾಗಿ ಉಳಿಸಿಕೊಳ್ಳಬೇಕು ಎನ್ನುವ ಮನೋಭಾವ ಇರುವುದರಿಂದ ಹೀಗಾಗುತ್ತದೆ. ಇಂತಹ ಮನೋಭಾವ ಏನಿದೆ ಅದನ್ನು ಖಂಡನೆ ಮಾಡಬೇಕು. ಆ ರೀತಿ ಸರಕಾರ ಅಧಿಕಾರದಲ್ಲಿ ಉಳಿದುಕೊಳ್ಳಬೇಕು ಎಂದು ಮಾಡುವುದು ಸರಿಯಾದದು ಅಲ್ಲ. ಆ ರೀತಿ ಅಧಿಕಾರಕ್ಕೆ ಬರಬೇಕು ಎನ್ನುವುದೇ ಒಂದು ದೊಡ್ಡ ವೀಕ್‌ನೆಸ್. ನಮ್ಮವರು ಈ ರೀತಿ ಇಂಟರಫಿಯರ್ ಆಗಿರುವುದರಿಂದ ಸರಕಾರದ ವ್ಯವಹಾರವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ಅದನ್ನು ಸರಕಾರದವರು ಗಮನಿಸಬೇಕು.

ಇನ್ನೊಂದು ಮುಖ್ಯ ವಿಚಾರ ಇದೆ. ಅದನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಸಭೆಯವರು ತೀವ್ರವಾಗಿ ಗಮನಿಸಬೇಕಾದ ವಿಚಾರ. ಎಲ್ಲಕ್ಕಿಂತಲೂ ಮಾನ್ಯ ಮಂತ್ರಿಗಳು ಏನಿದ್ದಾರೆ ಅವರು ಗಮನಿಸಬೇಕಾಗಿದೆ. ಅದು ಏನೆಂದರೆ ಬೆಂಗಳೂರು ವಾಟರ್ ಸಪ್ಲೈ ವಿಚಾರ. ಬೆಂಗಳೂರು ವಾಟರ್ ಸಪ್ಲೈ ಅಂಡ್ ಸೂಯರೇಜ್ ಬೋರ್ಡ್ ಏನಿದೆ, ಅವರು ಬೆಂಗಳೂರು ಪಟ್ಟಣಕ್ಕೆ ನೀರನ್ನು ಒದಗಿಸುವ ವಿಚಾರದಲ್ಲಿ ಏನು ವ್ಯವಹಾರಗಳನ್ನು ನಡೆಸುತ್ತಾ ಇದ್ದಾರೆ, ಅದರಿಂದ ಬೆಂಗಳೂರು ನಾಗರೀಕರಿಗೆ ಆಗಿರುವ ಅನ್ಯಾಯ ಏನು ಎಂಬುದನ್ನು ಒಂದೆರಡು ಸಂದರ್ಭದಲ್ಲಿ ಶ್ರೀಮಾನ್ ದಯಾನಂದಸಾಗರ್‌ರವರು ಪ್ರಸ್ತಾಪಮಾಡಿಬಿಟ್ಟಿದ್ದಾರೆ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಉತ್ತರ ಕೊಡುವಾಗ ಏನೂ ಅನ್ಯಾಯವಾಗಿಲ್ಲ ಎಂದೋ ಅಥವಾ ಅವರು ಯಾವ ಹೈಯಸ್ಟ್ ಟೆಂಡರನ್ನು ಕೊಡಬೇಕೆಂದು ಮಾಡಿಕೊಂಡಿದ್ದಾರೋ ಅದು ಬೆಂಗಳೂರು ವಾಟರ್ ಸಪ್ಲೈ ಮತ್ತು ಸುಯರೇಜ್ ಬೋರ್ಡಿಗೆ ಸೇರಿರುವುದರಿಂದ, ಅದು

ಅಟಾನಮಸ್ ಬಾಡಿ ಆದಕಾರಣ ನಾವು ಅದರ ಮೇಲೆ ಏನೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿರುವುದು ನಮಗೆ ಗೊತ್ತಾಗಿದೆ. ಮೊದಲನೆಯದಾಗಿ ಬೆಂಗಳೂರು ವಾಟರ್ ಸಪ್ಲೈ ಅಂಡ್ ಸುಯರೇಜ್ ಬೋರ್ಡ್ ಏನಿದೆ ಅದು ಕಾನೂನು ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ಪೂರ್ಣವಾಗಿ ಸರ್ವತಂತ್ರ ಸ್ವತಂತ್ರವಾದ ಸಂಸ್ಥೆ. ಅದು ಅಟಾನಮಸ್ ಬಾಡಿ ಅಲ್ಲ. ಆಕ್ಟ್ ಓದಿದ್ದೇನೆ. ಅದನ್ನು ರೆಫರ್ ಮಾಡುವುದಕ್ಕೆ ಈಗ ಕಾಲಾವಕಾಶ ಇಲ್ಲ. ಇನ್ನೊಂದು ಸಂದರ್ಭದಲ್ಲಿ ಆಕ್ಟ್‌ನಲ್ಲಿ ಏನು ಇದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ ತೋರಿಸುತ್ತೇನೆ. ಸರಕಾರದವರಿಗೆ ಅದರ ಮೇಲೆ ಹತೋಟಿ ಕಾನೂನು ಪ್ರಕಾರ ಇದೆ. ಅವರು ಒಪ್ಪದೆ ಇಂತಹ ದೊಡ್ಡ ಪ್ರಮಾಣದಲ್ಲಿರುವ ಯೋಜನೆ ಕಾರ್ಯಗತಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನಾ ರೀತಿಯಲ್ಲಿ ಹಣವನ್ನು ಒದಗಿಸಬೇಕಾದರೂ ಸರಕಾರದ ಸಹಾಯ ಬೇಕೇಬೇಕಾಗಿದೆ. ಅಂತಹುದರಲ್ಲಿ ಸರಕಾರದವರು ಒಂದೇ ಮಾತಿನಲ್ಲಿ ನಮಗೂ ಈ ಬೋರ್ಡಿನವರಿಗೂ ಏನು ಸಂಬಂಧವಿಲ್ಲ ಅವರು ಸಂಪೂರ್ಣವಾಗಿ ಸ್ವತಂತ್ರರು, ಅವರು ಏನು ಬೇಕಾದರೆ ಮಾಡಬಹುದು ಎಂದು ಏನು ಹೇಳುತ್ತಾರೆ ಅದು ಕಾನೂನಿಗೆ ವಿರುದ್ಧವಾದ ಮಾತು, ಸರಿಯಾದ ಮಾತಲ್ಲ. ಇನ್ನು ಎರಡನೆಯದು ಹೈಯೆಸ್ಟ್ ಟೆಂಡರ್ಸ್ ಒಪ್ಪಬೇಕಾದರೆ ಏನು ಕಾರಣ ಎನ್ನುವ ವಿಚಾರದಲ್ಲಿ, ಅದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಇದರ ಚರಿತ್ರೆ ಹೀಗಿದೆ. ಮೊದಲು ಬೆಂಗಳೂರು ಪಟ್ಟಣಕ್ಕೆ ನೀರು ಒದಗಿಸಬೇಕು ಅಗತ್ಯವಾಗಿದೆ ಎಂದು ಸರಕಾರದವರು ಒಂದು ಪ್ರಯತ್ನ ಮಾಡಿ. ಬೋರ್ಡ್ ಮಾಡಿ, 20 ಕೋಟಿ ರೂಪಾಯಿಯ ಯೋಜನೆಯನ್ನು ತಯಾರು ಮಾಡಿದರು. ಹಿಂದೆ ಪ್ಲಾನಿಂಗ್ ಕಮಿಷನ್‌ನಲ್ಲಿ ಮೆಂಬರ್ ಆಗಿದ್ದಂಥವರು ಪ್ರೊಫೆಸರ್ ಥ್ಯಾಕರ್ ಅವರು ಕೇವಲ 20 ಕೋಟಿ ರೂಪಾಯಿ ಯೋಜನೆಯಿಂದ ಬೆಂಗಳೂರು ಪಟ್ಟಣಕ್ಕೆ ನೀರು ಒದಗಿಸುವುದಕ್ಕೆ ಆಗುವುದಿಲ್ಲ, ದೊಡ್ಡ ಪ್ಲಾನ್ ಹಾಕಿಕೊಂಡರೆ ವರ್ಲ್ಡ್ ಬ್ಯಾಂಕ್‌ನಿಂದ ಹಣವನ್ನು ಕೊಡುತ್ತಾರೆ ಎಂದು ಹೇಳಿದರು. ವರ್ಲ್ಡ್ ಬ್ಯಾಂಕ್‌ನವರು ಬಂದಮೇಲೆ ಅದಕ್ಕೆ ಹಣವನ್ನು ಕೊಡುವುದಕ್ಕೆ ಒಪ್ಪಲಿಲ್ಲ. ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡುವುದಕ್ಕೋಸ್ಕರ 18 ಲಕ್ಷ ರೂಪಾಯಿಗಳನ್ನು ಅವರಿಗೆ ಕೊಟ್ಟಿದ್ದಾರೆ. ಅವರು ಪ್ರಾಜೆಕ್ಟ್ ರಿಪೋರ್ಟ್ ತಯಾರುಮಾಡಿ ಕೊಟ್ಟಿದ್ದಾರೆ. ಆ ರಿಪೋರ್ಟ್ ಪ್ರಕಾರ ನಾವು ಎಸ್ಟಿಮೇಟ್ ಯಾವ ಯಾವ ರೀತಿ ಮಾಡಬೇಕು ಹೇಗೆ ಮಾಡಬೇಕು ಎಂದು ಅಡ್ವೈಸ್ ಮಾಡಿದ್ದಾರೆ. ಆದರ ಮೇಲೆ ಈಗ 22-23 ಕೋಟಿ ರೂಪಾಯಿಗಳ ಮೊದಲನೆ ಹಂತದ ಕೆಲಸಗಳನ್ನು ಈ ಬೋರ್ಡಿನವರು ತೆಗೆದುಕೊಂಡರು. ಅದರ ಬಗ್ಗೆ ಮೊದಲನೆಯದಾಗಿ ಎಂಟು ಕೋಟಿ ರೂಪಾಯಿನ ಪೈಪ್‌ಲೈನ್ ಹಾಕುವುದಕ್ಕೆ ಸಪರೇಟ್ ಎಸ್ಟಿಮೇಟ್ ಮಾಡಿ ಟೆಂಡರ್ ಕರೆದರು. ಈ ಎಸ್ಟಿಮೇಟ್ ಮಾಡಿರುವುದಕ್ಕೆ ಕೇಂದ್ರ ಸರಕಾರದಿಂದ ಒಪ್ಪಿಗೆಪಡೆದುಕೊಂಡಿದ್ದಾರೆ. ಈ ಎಂಟು ಕೋಟಿ ರೂಪಾಯಿಯ ಅಂದಾಜು ಮಾಡುವುದಕ್ಕೆ ಮತ್ತು ಒಪ್ಪಿಗೆಯನ್ನು ಪಡೆದುಕೊಳ್ಳುವುದಕ್ಕೆ ಮುಂಚೆ ಪ್ರಿ-ಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪ್ ಲೈನ್ ಹಾಕಬೇಕೆಂದು ಯೋಚನೆ ಮಾಡಿದ್ದರು. ಕಾವೇರಿ ನದಿಯಿಂದ ಬೆಂಗಳೂರು ಪಟ್ಟಣಕ್ಕೆ ನೀರು ಬರಬೇಕಾದರೆ 65 ಮೈಲಿ ಉದ್ದ ಪೈಪ್ ಲೈನ್ ತರಬೇಕಾಗಿದೆ. ಅದರಲ್ಲಿ 45 ಮೈಲಿಗಳು ಕಾನ್‌ಕ್ರೀಟ್ ಪೈಪ್ಸ್ ಹಾಕುವುದು ಇದೆ ಮತ್ತು 10-12 ಮೈಲಿಗೆ ಕಬ್ಬಿಣದ ಕೊಳಾಯಿಗಳನ್ನು ಹಾಕುವುದು ಇದೆ. ಇದಕ್ಕೆ ಎಂಟು ಕೋಟಿ ರೂಪಾಯಿಗಳ ಅಂದಾಜನ್ನು ತಯಾರು ಮಾಡಿ ಟೆಂಡರನ್ನು ಕರೆದಾಗ ಕೆಲವರು ಟೆಂಡರ್ ಹಾಕಿದರು. ಅವರ ಪೈಕಿ ನಾಲ್ಕು ಜನ (1) ಎನ್.ಪಿ.ಸಿ.ಸಿ. (2) ಇ.ಸಿ.ಸಿ. (3) ಐ.ಪಿ.ಹೆಚ್. ಮತ್ತು ಇನ್ನೊಂದು (4) ಫ್ರೆಂಚ್ ಫರ್ಮ್. ಹೀಗೆ ನಾಲ್ಕು ಜನ ಟೆಂಡರ್ ಹಾಕಿದ್ದಾರೆ. ಒಂದು ಸಂಪೂರ್ಣವಾಗಿ ಪ್ರಿ-ಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪ್ಸ್ ಹಾಕುವುದಕ್ಕೆ ಟೆಂಡರ್ ಬಂದಿದೆ. ಇನ್ನು ಮೂರು ಕಬ್ಬಿಣದ ಕೊಳಾಯಿಗಳನ್ನು ಹಾಕುವುದಕ್ಕೆ ಬಂದಿರತಕ್ಕ ಟೆಂಡರುಗಳು. ಆ ಟೆಂಡರುಗಳು ಯಾವುವೆಂದರೆ :—

ಎನ್.ಪಿ.ಸಿ.ಸಿ.	4 ಕೋಟಿ 96 ಲಕ್ಷ
ಎಸ್.ಎನ್.	5 ಕೋಟಿ 16 ಲಕ್ಷ
ಐ.ಪಿ.ಹೆಚ್.	6 ಕೋಟಿ 30 ಲಕ್ಷ
ಇ.ಸಿ.ಸಿ.	7 ಕೋಟಿ 15 ಲಕ್ಷ

4–30 P.M.

ಟೆಂಡರ್‌ನಲ್ಲಿ ಎರಡು ಭಾಗ ಕೆಲಸ ಇದೆ. ಒಂದು ಕೊಳಾಯಿ ಕೆಲಸ, ಇನ್ನೊಂದು ಸಿವಿಲ್ ವರ್ಕ್ಸ್. ಈ 4 ಫಿಗರ್ಸ್, 4 ಕಂಪೆನಿಯಿಂದ ಬಂದಿರುವುದು ಸಿವಿಲ್ ವರ್ಕ್ಸ್‌ಗೆ ಸಂಬಂಧಪಟ್ಟದ್ದು. ಇಂಡಿಯಾ ದೇಶದಲ್ಲಿ ತಯಾರಾಗತಕ್ಕ ಸ್ಟೀಲ್ ಉಪಯೋಗಿಸಿಕೊಂಡು ಕೊಳಾಯಿ

(ಶ್ರೀ ಡಿ. ದೇವರಾಜ ಅರಸ್)

ಹಾಕುವುದಾದರೆ ಎಷ್ಟು ಖರ್ಚಾಗುತ್ತದೆ? ಟೆಂಡರ್ಸ್ ಹಾಕುವವರು ಅದನ್ನು ಕೊಂಡುಕೊಂಡು ಬರುವುದಿಲ್ಲ. ನಮ್ಮ ವಾಟರ್ ಬೋರ್ಡಿನವರೇ ಅದನ್ನು ಸಪ್ಲೈ ಮಾಡುತ್ತಾರೆ, ಅದಕ್ಕೆ ರೇಟು ವ್ಯತ್ಯಾಸವಾಗುವುದಿಲ್ಲ. ಸ್ಟೀಲ್ ರೇಟ್ ಇಂಡಿಯಾದೇಶದಲ್ಲಿ ಎಲ್ಲಾ ಕಡೆಯಲ್ಲೂ ಒಂದೇ ಇದೆ. ಅದನ್ನು ಬೋರ್ಡಿನವರೇ ಸಪ್ಲೈ ಮಾಡುವುದು ಅಂತ ಟೆಂಡರ್‌ನಲ್ಲೂ ಕೂಡ ಇದೆ. ಅದಕ್ಕೆ ಎಷ್ಟು ಬೆಲೆಯಾಗುತ್ತದೆ ಎಂದರೆ 3 ಕೋಟಿ 68 ಲಕ್ಷ ರೂಪಾಯಿ ಆಗಬಹುದು ಅಂತ ಅಂದಾಜಾಗಿದೆ. ಸಿವಿಲ್ ವರ್ಕ್ಸ್ ಮತ್ತು ಇದು ಎರಡೂ ಸೇರಿಸಿದರೆ ಒಬ್ಬರ ಟೆಂಡರು 8 ಕೋಟಿ 64 ಲಕ್ಷ ರೂಪಾಯಿ. ಮತ್ತೊಬ್ಬರದು 8 ಕೋಟಿ 84 ಲಕ್ಷ ರೂಪಾಯಿ, ಮತ್ತೊಬ್ಬರದು 9 ಕೋಟಿ 98 ಲಕ್ಷ ರೂಪಾಯಿ, ಇನ್ನು ಇ.ಸಿ.ಸಿ. ಅವರದು 10 ಕೋಟಿ 83 ಲಕ್ಷ ರೂಪಾಯಿ. ಇದರಲ್ಲಿ ಏನಾಯಿತು ಅನ್ನುವುದು ವಿಚಾರ. ಇಂಡಿಯಾದೇಶದಲ್ಲಿ ಇಷ್ಟೆಲ್ಲಾ ಕೊಳಾಯಿಗೆ ಸ್ಟೀಲ್ ಸಿಕ್ಕುತ್ತದೆಯೇ ಎಂಬ ಮಾತು ಬಂದು ಇದೆಲ್ಲಾ ಪೂರ್ಣವಾಗುವುದಕ್ಕೆ ಸುಮಾರು 35 ಲಕ್ಷ ಟನ್ ಸ್ಟೀಲ್ ಬೇಕಾಗುತ್ತದೆ, ಇಷ್ಟೊಂದು ಪ್ರಮಾಣದಲ್ಲಿ ನಮ್ಮ ದೇಶದಲ್ಲಿ ಸ್ಟೀಲ್ ದೊರೆಯುವುದು ಕಷ್ಟ, ಆದ್ದರಿಂದ ಏನು ಮಾಡಬೇಕೆಂದಾಗ ನಮ್ಮ ವಾಟರ್ ಬೋರ್ಡಿನವರು ಒಂದು ಅಂದಾಜು ಮಾಡಿದರು. ಇಂಡಿಯಾ ದೇಶದಲ್ಲಿ ದೊರೆಯದಿದ್ದರೆ ರಷ್ಯಾದಿಂದ ಬರತಕ್ಕ ಸ್ಟೀಲ್‌ನ್ನು ಉಪಯೋಗಿಸೋಣ ಅಂತ ಅಂದರು. ರಷ್ಯಾದಿಂದ ಬರತಕ್ಕ ಸ್ಟೀಲ್‌ನ್ನು ಉಪಯೋಗಿಸಬೇಕಾದರೆ ಕಾಸ್ಟ್ ಎಷ್ಟಾಗುತ್ತದೆ ಅಂದಾಗ ನಮ್ಮ ಇಂಡಿಯಾದೇಶದ ಸ್ಟೀಲ್ ಮೆಟ್ರಿಕ್ ಟನ್‌ಗೆ 1,100 ರೂಪಾಯಿ ಇದ್ದರೆ ರಷ್ಯಾ ದೇಶದ್ದು 1,943 ರೂಪಾಯಿ ಆಗುತ್ತದೆ ಎಂದು ಅಂದಾಜು ಆಯಿತು. ಬೆಲೆ ಜಾಸ್ತಿಯಾಯಿತು. ಪ್ರತಿಯೊಂದು ಟೆಂಡರ್‌ನಲ್ಲೂ ಕೂಡ 2 ಕೋಟಿ 88 ಲಕ್ಷ ರೂಪಾಯಿ ಜಾಸ್ತಿಯಾಯಿತು. ಆದ್ದರಿಂದ ಅರ್ಧಭಾಗ ಇಂಡಿಯನ್ ಸ್ಟೀಲ್ ಇನ್ನರ್ಧ ರಷ್ಯನ್ ಸ್ಟೀಲ್ ಹಾಕೋಣ ಅಂತ ಅಂದಾಗ 2 ಕೋಟಿ 80 ಲಕ್ಷ ರೂಪಾಯಿಗೆ ಬದಲಾಗಿ 1 ಕೋಟಿ 99 ಲಕ್ಷ ರೂಪಾಯಿ ಜಾಸ್ತಿಯಾಗುತ್ತದೆ ಅಂತ ಲೆಕ್ಕಾಚಾರ ಆಯಿತು. ಒಟ್ಟು ಮೊತ್ತ ತೆಗೆದುಕೊಂಡಾಗ 12 ಕೋಟಿ 86 ಲಕ್ಷ ರೂಪಾಯಿ ಅಂದಾಜು ಒಬ್ಬರ ಕೆಲಸ, 12 ಕೋಟಿ 70 ಲ ರೂಪಾಯಿ ಅಂದಾಜು ಮತ್ತೊಬ್ಬರದು, 11 ಕೋಟಿ 52 ಲಕ್ಷ ರೂಪಾಯಿ ಅಂದಾಜು ಇನ್ನೊಬ್ಬರದು ಆಯಿತು. ಇ.ಸಿ.ಸಿ. ಅವರದು 13 ಕೋಟಿ 71 ಲಕ್ಷ ರೂಪಾಯಿ ಅಂದಾಜು ಆಯಿತು. ಇ.ಸಿ.ಸಿ. ಅವರು ಏನು ಹೇಳಿದರು ರಷ್ಯನ್ ಸ್ಟೀಲ್ ಉಪಯೋಗ ಮಾಡುವ ಪ್ರಮೇಯವೇ ಬೇಡ, ಇಂಡಿಯನ್ ಸ್ಟೀಲ್ ವಿಚಾರವೂ ಬೇಡ, ಜಕೋಸ್ಲೋವೇಕಿಯಾದಿಂದ ಸ್ಟೀಲ್ ತರುತ್ತೇವೆ ಎಂದು ಹೇಳಿದ್ದಾರೆ.

ಚೇರ್ಮನ್‌ರವರು.—ಈಗ ಮುಖ್ಯವಾಗಿ ವಿಷಯ ಏನು ಎಂಬುದನ್ನು ಹೇಳಿದರೆ ಸಾಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ವಿಷಯ ಏನಿದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಇದನ್ನೆಲ್ಲಾ ಹೇಳಬೇಕಾಗುತ್ತದೆ.

ಚೇರ್ಮನ್‌ರವರು.—ಅದರ ಚರಿತ್ರೆಯನ್ನೆಲ್ಲಾ ಹೇಳುತ್ತಾ ಹೋದರೆ ಬಹಳ ಹೊತ್ತು ಬೇಕಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಇದು ಬೆಂಗಳೂರು ನಗರಕ್ಕೆ ನೀರನ್ನು ಸರಬರಾಯಿ ಮಾಡಬೇಕಾಗಿರುವಂತಹ ಒಂದು ಬಹಳ ಪ್ರಾಮುಖ್ಯವಾದ ವಿಚಾರ, ಎಲ್ಲವನ್ನೂ ವಿವರವಾಗಿ ಹೇಳಲೇಬೇಕಾಗುತ್ತದೆ ಅದಕ್ಕೆ ಅವಕಾಶ ಕೊಡಬೇಕು.

ಚೇರ್ಮನ್‌ರವರು.—ಅರ್ಧಗಂಟೆ ಆಯಿತು.

ಶ್ರೀ ಡಿ. ದೇವರಾಜ ಅರಸ್.—ನನ್ನ ಭಾವನೆ ಏನೆಂದರೆ, ಸುಮ್ಮನೆ ಇಲ್ಲಿ ಏನೋ ಆಗಿದೆ ಅಂತ ಹೇಳುತ್ತಾ ಇದ್ದಾರೆ, ಏನೂ ಆಗಿಲ್ಲ ಅಂತ ಹೇಳುವ ಪರಿಸ್ಥಿತಿ ನಾಳೆ ಬರುತ್ತದೆ, ಅದಕ್ಕೋಸ್ಕರ ಇದನ್ನೆಲ್ಲಾ ಹೇಳುತ್ತಾ ಇದ್ದೇನೆ.

ಚೇರ್ಮನ್‌ರವರು.—ಈ ವಿಷಯದ ಮೇಲೆ 12 ನಿಮಿಷ ಮಾತನಾಡಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಇರತಕ್ಕ ವಿಷಯ ಏನು ಎಂಬುದನ್ನು ಹೇಳಬೇಕಾಗುತ್ತದೆ, ಹೇಳುತ್ತಾ ಇದ್ದೇನೆ. ಒಂದು ಕಡೆ 8 ಕೋಟಿ ರೂಪಾಯಿ ಇದ್ದು ಇನ್ನೊಂದು ಕಡೆ 13 ಕೋಟಿ

ರೂಪಾಯಿ ಇದ್ದರೆ, ಇದನ್ನು ಏಕೆ ಒಪ್ಪಿಕೊಂಡರು ? ಒಟ್ಟಿನಲ್ಲಿ ಒಂದೂವರೆ ಕೋಟಿ ರೂಪಾಯಿ ಜಾಸ್ತಿಯಾಯಿತು ಅಂತ ಅನ್ನುವುದನ್ನು ಹೇಳಬೇಕಾಗಿದೆ. ಎಲ್ಲರೂ ಕಬ್ಬಿಣದ ಕೊಳಾಯಿ ಹಾಕಿದರೂ ಆಗಲೂ ಇ.ಸಿ.ಸಿ. ಯವರದೇ ಜಾಸ್ತಿಯಾಗುತ್ತದೆ ಎಂದು ಹೇಳುತ್ತಾ ಇದ್ದೇನೆ. ಸಿವಿಲ್ ವರ್ಕ್‌ಸ್ಸನಲ್ಲೂ ಕೂಡ ಅವರದೇ ಹೈಯೆಸ್ಟ್, ಬೇರೆಯವರು 4 ಕೋಟಿ 96 ಲಕ್ಷ ರೂಪಾಯಿಗೆ ಮಾಡುತ್ತೇವೆ ಅಂತ ಅಂದರೆ ಇ.ಸಿ.ಸಿ. ಯವರು 7 ಕೋಟಿ 15 ಲಕ್ಷ ರೂಪಾಯಿನಲ್ಲಿ ಮಾಡುತ್ತೇವೆ ಎಂದು ಹೇಳುತ್ತಾರೆ. ಟೆಂಡರ್ ನಮಗೇ ಕೊಡುವುದಾದರೆ ಇದಕ್ಕೆ ಬೇಕಾದ ಸಾಮಾನು ಎಷ್ಟು ಬೇಕೋ, ಎಷ್ಟು ಟನ್ ಸ್ಟೀಲ್ ಬೇಕೋ ಅವನ್ನು ಜಕೋಸ್ಲೋವೇಕಿಯಾದಿಂದ ತಂದು ಕೊಡುತ್ತೇವೆ ಎಂದು ಹೇಳಿದರು. ಅದಕ್ಕೇ ಅವರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದು ಸರಿಯಾದ ಮಾತಲ್ಲ. ಜಕೋಸ್ಲೋವೇಕಿಯಾದಲ್ಲಿ ಯಾವ ಕಂಪೆನಿಯಲ್ಲಿ ತರಿಸಿಕೊಳ್ಳುತ್ತೇವೆ ಅಂತ ಹೇಳುತ್ತಾರೆ, ಅವರ ಮುಖೇನ ತರಿಸಿಕೊಂಡರೆ ಮಾತ್ರ ಮಾಡುತ್ತಾರೆಯಂತೆ ಮತ್ತು ಅವರು ಹೇಳಿದ ರೇಟ್‌ನಂತೆ ತರಿಸಿಕೊಳ್ಳಬೇಕು, ಮತ್ತು ವಾಟರ್ ಬೋರ್ಡಿನವರು ಜನವರಿ ಫಸ್ಟ್‌ನೊಳಗೆ ಲೆಟರ್ ಆಫ್ ಇಂಟೆಂಟ್ ಕೊಡಬೇಕು, 1970ನೇ ಇಸವಿಯಲ್ಲಿ ಸಂಪೂರ್ಣವಾಗಿ ತೆಗೆದುಕೊಳ್ಳುತ್ತೇವೆ ಅಂತ ಕನ್‌ಫರ್ಮೇಷನ್ ಕೊಡಬೇಕು, ಇಷ್ಟು ಕಂಡೀಷನ್ ಹಾಕಿದ್ದಾರೆ.

ಚೇರ್ಮನ್‌ರವರು.—ತಾವು ಮಾತನಾಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ, 50 ನಿಮಿಷಕ್ಕೂ ಹೆಚ್ಚಾಗಿ ಮಾತನಾಡಿದ್ದೀರಿ. ಈ ವಿಷಯವನ್ನು ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಹುದು. ಒಂದುವೇಳೆ ತಾವು ಮಾತನಾಡಲೇಬೇಕೆಂದರೆ ಮತ್ತೊಬ್ಬರ ಟೈಂನಲ್ಲಿ ಕಡಿಮೆ ಮಾಡಿಕೊಳ್ಳುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲಾ ಪಕ್ಷಗಳ ಹಿತವನ್ನೂ ರಕ್ಷಣೆ ಮಾಡಲಿಕ್ಕೆ ಹೊರಟಿರುವ ತಾವು ನಿನ್ನೆದಿವಸ ನಮ್ಮ ಪಕ್ಷಕ್ಕೆ 10 ನಿಮಿಷ ಕೊಟ್ಟಿದ್ದೀರಿ ? ಇವತ್ತು ಇದುವರೆಗೂ 10-15 ನಿಮಿಷ ಮಾತ್ರ ಮತ್ತೊಬ್ಬ ಸದಸ್ಯರಿಗೆ ಕೊಟ್ಟಿದ್ದೀರಿ. ಈಗ ನಮ್ಮ ಪಕ್ಷದ ನಾಯಕರು ಮಾತನಾಡಬೇಕಾದರೆ ಪದೇ ಪದೇ ಅವರಿಗೆ ಈ ರೀತಿ ಮಾತನಾಡಿ, ಕಾಲ ಇಲ್ಲ ಅಂತ ಏಕೆ ಹೇಳುತ್ತೀರೋ ಗೊತ್ತಾಗುವುದಿಲ್ಲ. ಅವರಿಗೆ ಎಷ್ಟು ಕಾಲ ಬೇಕೋ ಅದನ್ನು ಕೊಡಬೇಕು. ನಿನ್ನೆ ದಿವಸ ಎಷ್ಟು ಕೊಡಬೇಕಾಗಿತ್ತೋ ಅವನ್ನೆಲ್ಲಾ ಕೊಡಿ.

[MR. SPEAKER in the Chair]

MR. SPEAKER.—The position is, The Hon'ble members partly took 1 hour 52 minutes till yesterday. The time available to his party is one hour and 38 minutes. Mr. Dayananda Sagar took about 25 minutes. Whatever time is taken by Mr. Urs will be debited it against the time allotted to his party. It is left to the hon'ble Member to do whatever he likes and the Chair has nothing to do with it.

SRI H. SIDDAVEERAPPA.— You are rationing time as you are rationing sugar. It is your discretion to give reasonable time. You cannot divide it by rule of arithmetics. This system is not healthy. You please discontinue it.

MR. SPEAKER.—We shall consider it later on. In the meantime, the hon'ble Member may proceed.

ಶ್ರೀ ಡಿ. ದೇವರಾಜ ಅರಸ್.—ಇದರ ಮೇಲೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅಧ್ಯಕ್ಷರಾದ ತಮಗೆ ಡಿಸ್ಕ್ರಿಷನ್ ಇದೆ, ಕಾಲಹರಣ ಮಾಡುತ್ತಾ ಇದ್ದರೆ ಮುಗಿಸಿ, ಕುಳಿತುಕೊಳ್ಳಿ ಎಂದು ಹೇಳಬಹುದು. ಈ ವಿಷಯ ಬಹಳ ಪ್ರಾಮುಖ್ಯವಾದದ್ದು. ಬೆಂಗಳೂರು ಪಟ್ಟಣದ ನಾಗರೀಕರು ಒಂದು ಸಾವಿರ ಗ್ಯಾಲನ್‌ಗೆ ಎರಡು ರೂಪಾಯಿನಂತೆ ಕೊಡಬೇಕೆಂದು ಅಂದಾಜು ಮಾಡಿದ್ದು ಹೋಗಿ ಆ ಎಸ್ಟಿಮೇಟು ಒಂದು ಸಾವಿರ ಗ್ಯಾಲನ್‌ಗೆ 4 ರೂಪಾಯಿ ಆಗುತ್ತದೆ. ಎಂಟೂವರೆ ಕೋಟಿಯ ಟೆಂಡರನ್ನು ಒಪ್ಪದೆ ಹದಿಮೂರೂವರೆ ಕೋಟಿ ರೂಪಾಯಿಗಳ ಟೆಂಡರನ್ನು ಒಪ್ಪಿದರೆ 5 ಕೋಟಿ ಜಾಸ್ತಿಯಾಗುವುದು. ಆ ಸಾಲ ಕೊಡುವವರು ಯಾರು ? ಅದನ್ನು ಬ್ಯಾಂಕಿನಿಂದ ಅಥವ ಎಲ್. ಐ. ಸಿ. ನಿಂದ ತರಬಹುದು. ಸುಮಾರು 25 ವರ್ಷಗಳಲ್ಲಿ ಅದನ್ನು ತೀರಿಸಲು ಬೋರ್ಡಿನವರು ಅಂದಾಜು ಮಾಡಿದ್ದಾರೆ. ಇದರಿಂದ ಬಡ್ಡಿ

(ಶ್ರೀ ಡಿ. ದೇವರಾಜ ಅರಸ್)

ಬೇರೆ ಬೀಳುವುದು, ಸಾಲ ಹೆಚ್ಚುವುದು. 5 ಕೋಟಿಗೆ ಬಡ್ಡಿ ಎಷ್ಟು? ಅದನ್ನು ಲೆಕ್ಕಹಾಕಿದರೆ ಒಂದು ಸಾವಿರ ಗ್ಯಾಲನ್ನಿಗೆ 5 ಚಿಲ್ಲರೆ ರೂಪಾಯಿಯಾಗುವುದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾಡಿ ಸೇಕಡ 150 ರಷ್ಟು ಜಾಸ್ತಿ ನಾಗರಿಕರು ಕೊಡಬೇಕೆಂದರೆ ಇದೇನು ಸಣ್ಣ ಪ್ರಶ್ನೆಯೇ? ಇದರ ಜವಾಬ್ದಾರಿ ಬೋರ್ಡಿಗಿದೆಯೇ ಅಥವಾ ಸರಕಾರಕ್ಕಿದೆಯೇ? ನಮಗೆ ಅಧಿಕಾರವಿಲ್ಲ, ಎಂದು ಸರಕಾರ ಬೋರ್ಡಿನವರ ಮೇಲೆ ಬೇಕಾದರೂ ಹಾಕಬಹುದು, ಹಾಗೆ ಮಾಡಿ ಸರಕಾರ ಜವಾಬ್ದಾರಿ ತಪ್ಪಿಸಿಕೊಳ್ಳಬಹುದು ಎಂದಿದ್ದರೆ ಅದು ಸಾಧ್ಯವಿಲ್ಲ. 5 ಕೋಟಿ ರೂಪಾಯಿ ಹೆಚ್ಚಾಗಿ ಖರ್ಚು ಮಾಡಬೇಕಾದರೆ ಸಾರ್ವಜನಿಕರೇನಿದ್ದಾರೆ ಅವರಿಗೆ ಲೆಕ್ಕ ಕೊಡಬೇಕು. ಆದುದರಿಂದ ಶ್ರಮವಹಿಸಿ ಈ ವಿಚಾರವನ್ನು ನಾನು ಸಭೆಯ ಮುಂದಿಡುತ್ತಿದ್ದೇನೆ, ನನಗೆ ಕಾಲ ಕಳೆಯಬೇಕೆಂಬ ಇಷ್ಟವಿಲ್ಲ, ಸಮರ್ಥನೆ ಮಾಡುವುದಕ್ಕೆ ಇಷ್ಟೊಂದು ಮಾತನಾಡುತ್ತಿದ್ದೇನೆ. ಅದನ್ನು ಕೂಲಂಕಷವಾಗಿ ವಿಚಾರ ಮಾಡಿ, ಸಂಪೂರ್ಣ ಮಾಹಿತಿ ತರಿಸಿಕೊಂಡು ನೋಡಿದ್ದೀರಿ, ಅರ್ಥವಾಗಿದೆಯೋ, ಇಲ್ಲವೋ ಗೊತ್ತಿಲ್ಲ, ನನಗೆ ತಿಳಿದಂತೆ ಸಂಪೂರ್ಣವಾಗಿ ಅವರು ಅರ್ಥ ಮಾಡಿ ಕೊಂಡಿಲ್ಲ. ಟೆಕ್ನಿಕಲ್ ಮ್ಯಾನ್ ಚೀಫ್ ಎಂಜಿನಿಯರು ಹೀಗೆ ಮಾಡುತ್ತಿದ್ದೇವೆ ಎಂದು ಹೇಳ ಬಹುದು, ಅವರಿಗೆ ಗೊತ್ತಿದೆ ಎಂದು ಹೇಳಿದರೆ ಬಿಡುವುದಿಲ್ಲ, ನಿಮ್ಮಿಂದ ದೇಶಕ್ಕೆ 5 ಕೋಟಿ ನಷ್ಟವಾಗುವುದು. ಅಷ್ಟೇ ಅಲ್ಲ, ಅದರಮೇಲೆ ಪ್ರಾಜೆಕ್ಟಿಗೆ ಬರೀ 8 ಕೋಟಿ ಅಲ್ಲ ಖರ್ಚು ಮಾಡು ವುದು, 22 ಕೋಟಿಗೆ ಅಂದಾಜಾಗಿದೆ, ಎರಡನೆಯ ಹಂತದಲ್ಲಿ ಇನ್ನೂ 25 ಕೋಟಿ ಖರ್ಚು ಮಾಡಬೇಕು. ಆದುದರಿಂದ ತಮಗೆ ಗೊತ್ತಿಲ್ಲ, ಜವಾಬ್ದಾರಿ ಇಲ್ಲ ಎಂದು ಹೇಳುವುದಾದರೆ ಅದರಿಂದ ಅನಾಹುತವಾಗುವುದು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಆ ಕಾರಣದಿಂದ ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಬೇಕು. ಮೊನ್ನೆ ಪ್ರಾರಂಭವಾದ ಸಭೆಯಲ್ಲಿ ಈ ವಿಚಾರ ಪ್ರಸ್ತಾಪಿಸಲ್ಪಟ್ಟು ಸರಕಾರದವರು ತರಿಸಿ ನೋಡಿದರಂತೆ, ಕ್ಯಾಬಿನೆಟ್ಟಿನಲ್ಲಿ ಚರ್ಚೆ ಮಾಡಿದರಂತೆ, ಪುನಃ ಪರಿಶೀಲಿಸಬೇಕೆಂದು ಮತ್ತೆ ಬೋರ್ಡಿಗೆ ಎಸ್ಟಿಮೇಟನ್ನು ಕಳಿಸಿದ್ದಾರೆ. ಬೋರ್ಡಿನವರು ಮೂರು ದಿವಸಗಳ ಹಿಂದೆ ಇರಬಹುದು, ಮತ್ತೆ ಮೀಟ್ ಮಾಡಿದ್ದಾರೆ. ಅವರು ನಾವು ಮಾಡಿರುವುದೇ ಸರಿ, ಎಂಟೂವರೆ ಕೋಟಿ ಎಸ್ಟಿಮೇಟ್ ಒಪ್ಪುವುದಕ್ಕಾಗುವುದಿಲ್ಲ ಎನ್ನುತ್ತಾರೆ. ಎಸ್ಟಿಮೇಟ್ ಮಾಡಿರುವುದು ಬೋರ್ಡಿನವರೇ. ವರ್ಲ್ಡ್ ಬ್ಯಾಂಕಿನ ಸಲಹೆಮೇರೆಗೆ ಎಸ್ಟಿಮೇಟ್ ಮಾಡಿರುವುದು. ಪ್ರಿ-ಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪನ್ನು ಉಪಯೋಗಮಾಡುವುದು ಸೂಕ್ತ, ಇಂದು ಆಧುನಿಕ ಪ್ರಪಂಚದಲ್ಲಿ ಈ ಪೈಪನ್ನು ಬಹಳ ಕಡೆ ಉಪಯೋಗಮಾಡುತ್ತಾರೆ ಎಂದು ಹೇಳುತ್ತಾರೆ. ಇದನ್ನು ಒಪ್ಪಿರುವುದೂ ಬೋರ್ಡಿನವರೇ. ಯಾವ ಚೀಫ್ ಎಂಜಿನಿಯರು ಛೇರ್ಮನ್ ಆಗಿ ಬೋರ್ಡಿನಲ್ಲಿದ್ದಾರೆ ಅವರೇ ಪ್ರಿ-ಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪ್ ವಿಚಾರದಲ್ಲಿ 64ರಲ್ಲಿ ಈ ಪ್ರಾಜೆಕ್ಟ್ ಬಗ್ಗೆ ವರದಿ ಕೊಟ್ಟಿರುವುದರಲ್ಲಿ ಹೀಗೆ ಹೇಳಿದ್ದಾರೆ:

> "Pre-stressed concrete pipes have been largely used in major water supply schemes throughout the world and have proved to be worthy and economical substitute for other materials like steel. Cast iron pipes can be cast near the site of works and transported over relatively short distances. Pre-stressed concrete pipes give years of uninterrupted service in many major water supply schemes and they have proved that concrete pipes are economical, efficient and involve minimum maintenance costs. They are also competitive in relation to steel and C. I. pipes. The problem of joints is one of detail and it is possible to avoid leakage..."

ಸ್ಟೀಲ್ ಪೈಪಿಗೆ ಸಂಬಂಧಪಟ್ಟಂತೆ ಹೆಚ್ಚು ಕಡಮೆ ಇರುವ ಟೆಂಡರುಗಳ ದರದ ವ್ಯತ್ಯಾಸ 2 ಕೋಟಿ ಚಿಲ್ಲರೆ ಇರುವುದಕ್ಕೆ ಇದೇ ರೀತಿ ಕೆಲವು ಕಾರಣ ಇರಬಹುದು. ಯುಗೋಸ್ಲಾವಿಯದಲ್ಲಿ ಒಳ್ಳೆಯ ಸ್ಟೀಲ್ ಪೈಪು ಸಿಕ್ಕುವುದು, ತೊಂದರೆ ಇಲ್ಲ, ದರ ಹೆಚ್ಚು ಕಡಮೆ ಆಗಬಹುದು ಎಂದು ನೆಪ ಹೇಳಬಹುದು. It is not between steel pipe and steel pipe; it is between prestressed concrete pipe and steel pipe. ಪ್ರಿ-ಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪನ್ನು ಹಾಕುವುದರಿಂದ ಎಂಟೂವರೆ ಕೋಟಿ ಖರ್ಚು ಆಗುವುದಾದರೆ ಅದನ್ನು ಬಿಟ್ಟು ಸ್ಟೀಲು ಪೈಪನ್ನು

ಹಾಕಿ ಹದಿಮೂರೂವರೆ ಕೋಟಿ ಏಕೆ ಖರ್ಚು ಮಾಡಬೇಕು ? 5 ಕೋಟಿ ಹೆಚ್ಚಿಗೆ ಹಣವನ್ನೆಲ್ಲಿಂದ ತರುವುದು ? ಅದರ ಜವಾಬ್ದಾರಿ ಹೊರುವವರು ಯಾರು ? ಪ್ರಿ-ಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪು ಬೇಡ ಎಂದು ಹೇಳುವುದೇಕೆ ? ಟೆಕ್ನಿಕಲ್ ಪಾಯಿಂಟ್ ಹೇಳಬಹುದು, ಜಾಯಿಂಟ್ಸ್ ಹಾಕುವುದಕ್ಕಾಗುವುದಿಲ್ಲ ಎಂದೇನಾದರೂ ಹೇಳಬಹುದು. ಹಿಂದೆ ವರ್ಲ್ಡ್ ಬ್ಯಾಂಕಿನವರನ್ನು ಕರೆಸಿ 18 ಲಕ್ಷ ಕೊಟ್ಟು ಸರ್ವೆ ಮಾಡಿಸಿ ವರದಿ ತರಿಸಿ ಒಂದು ಸ್ಥಳದಲ್ಲಿ ಜಲ್ಲಿ ಮತ್ತು ಮರಳು ಸಿಕ್ಕುವುದು, ನಾನಾ ದೃಷ್ಟಿಯಿಂದ ಪ್ರಿ-ಸ್ಟ್ರೆಸ್ಡ್ ಕಾಂಕ್ರೀಟು ಪೈಪು ಹಾಕುವುದು ಉತ್ತಮ ಎಂದು ಹೇಳಿದರು. ಸ್ಟೀಲ್ ಪೈಪು ರಸ್ಟು ಹಿಡಿಯುವುದು, ಕಾನ್‌ಕ್ರೀಟು ಪೈಪು ರಸ್ಟು ಹಿಡಿಯುವುದಿಲ್ಲ ಎಂದು ಹೇಳಿದರು. ಯಾವ ಒಂದು ಫ್ರೆಂಚ್ ಫರ್ಮ್ ಎಂಟೂವರೆ ಕೋಟಿ ರೂಪಾಯಿಗಳಿಗೆ ಹಾಕಿ ಕೊಡುತ್ತೇವೆಂದು ಹೇಳಿದ್ದಾರೋ ಅವರು ಪ್ರಪಂಚದಲ್ಲಿಯೇ ಪ್ರಿಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪುಗಳನ್ನು ತಯಾರು ಮಾಡುವುದರಲ್ಲಿ ನಿಷ್ಣಾತರು. ಗ್ಲೋಬ್ ಟೆಂಡರನ್ನು ಕರೆದಾಗ ಐದು ಕೋಟಿ ರೂಪಾಯಿಗಳಷ್ಟು ಕಡಮೆ ಮಾಡಿ ಹಾಕಿಕೊಡುತ್ತೇವೆಂದು ಹೇಳಿದ್ದಾರೆ. ಬೇರೆಯವರೆಲ್ಲಾ ಒಂದೊಂದು ವರ್ಷ ಗ್ಯಾರಂಟಿ ಕೊಟ್ಟಿದ್ದಾರೆ, ಇ.ಸಿ.ಸಿ. ಯವರು ಹದಿಮೂರೂವರೆ ಕೋಟಿ ರೂಪಾಯಿ ಪ್ರಾಜೆಕ್ಟ್ ಮಾಡಿಕೊಡುತ್ತೇವೆಂದು ಹೇಳಿರುವವರು ಕೊಟ್ಟಿರುವ ಗ್ಯಾರಂಟಿ ಒಂದು ವರ್ಷವಾಗಿರುವಾಗ, ಪ್ರಿಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪುಗಳನ್ನು ಎಂಟೂವರೆ ಕೋಟಿ ರೂಪಾಯಿಗಳಿಗೆ ಹಾಕಿ ಕೊಡುತ್ತೇವೆಂದು ಹೇಳಿರುವ ಫ್ರೆಂಚ್ ಫರ್ಮ್ ಹತ್ತು ವರ್ಷಗಳ ಗ್ಯಾರಂಟಿ ಕೊಟ್ಟಿದೆ. ಆ ರೀತಿಯಾಗಿ ಅವರು ಬರೆದುಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಏನಾದರೂ ಹೆಚ್ಚು ಕಡಮೆಯಾದರೆ ಅನುಕೂಲವಾಗಲಿ ಎಂದು 50–60 ಪೈಪುಗಳನ್ನು ಅವಕ್ಕೆ ಚಾರ್ಜ್ ಮಾಡದೆ, ಹೆಚ್ಚಾಗಿ ಮಾಡಿ ಕೊಡುತ್ತೇವೆಂದು ಕೂಡ ಹೇಳಿದ್ದಾರೆ. ಇಡೀ ಪ್ರಪಂಚವೆಲ್ಲ ಅವರು ಮಾಡಿರತಕ್ಕ ಕೆಲಸಗಳೆಲ್ಲಾ ಚೆನ್ನಾಗಿ ಆಗಿವೆ. ಅವರು ಪ್ರಪಂಚದ 30-35 ಕಡೆ ಪ್ರಿಸ್ಟ್ರೆಸ್ಡ್ ಪೈಪ್ಸ್ ಉಪಯೋಗಿಸಿದ್ದಾರೆ. ನಮ್ಮಲ್ಲಿ 1500 ಅಡಿ ಹೆಡ್‌ಗೆ ನೀರು ಬರಬೇಕಾಗುತ್ತದೆ. ಅದಕ್ಕಿಂತ ಹೆಚ್ಚು ಹೆಚ್ಚು ಹೆಡ್ ಇರುವ ಕಡೆ ಪ್ರಿಸ್ಟ್ರೆಸ್ಡ್ ಪೈಪ್ಸ್ ಹಾಕಿದ್ದು 30-35 ವರ್ಷಗಳಿಂದ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ನಾನಾ ಕಡೆಗಳಿಂದ ಸರ್ಟಿಫಿಕೇಟನ್ನು ಪಡೆದುಕೊಂಡಿರುವ ಫರ್ಮ್ ಹೇಳಬೇಕಾಗಿದ್ದರೆ ಏನು ಕಾರಣದಿಂದ ಪ್ರಿಸ್ಟ್ರೆಸ್ಡ್ ಪೈಪ್ಸ್ ಉಪಯೋಗ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ ? ಐದು ಕೋಟಿ ರೂಪಾಯಿ ಅಷ್ಟು ಸುಲಭವಾದುದಲ್ಲ. ಈ ಮಂಡಲಿಯಲ್ಲಿ ಯಾರು ಇದ್ದಾರೆ ಎಂದರೆ ಚೀಫ್ ಇಂಜಿನಿಯರು ಅದರ ಚೇರ್‌ಮನ್. ಒಬ್ಬ ರಿಟೈರ್ಡ್ ಚೀಫ್ ಇಂಜಿನಿಯರು ಅದರ ಸದಸ್ಯರು. ಇವರಲ್ಲದೆ ಬೇರೆ ನಾಲ್ಕು ಜನರಿದ್ದಾರೆ. ಅವರೆಲ್ಲ ಟೆಕ್ನಿಕಲ್ ಪೀಪಲ್ ಅಲ್ಲದೆ ಇರುವುದರಿಂದ ಚೀಫ್ ಇಂಜಿನಿಯರು ಹೇಳಿದ್ದೇ ಸೂಕ್ತವಾದುದು. ಅದೇ ವೇದ ವಾಕ್ಯ ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಬೋರ್ಡಿನಲ್ಲಿ ಬಂದಿರುವ ಭಿನ್ನಾಭಿಪ್ರಾಯವಾದರೂ ಅದರ ಚೇರ್‌ಮನ್ ಆಗಿರುವ ಚೀಫ್ ಇಂಜಿನಿಯರಿಗೆ ಮತ್ತು ಸದಸ್ಯರಾಗಿರುವ ನಿವೃತ್ತ ಚೀಫ್ ಇಂಜಿನಿಯರ್ ಅವರಿಗೆ. ಬೋರ್ಡ್ ಒಪ್ಪಿದೆಯಾದ್ದರಿಂದ 13 ಕೋಟಿ ರೂಪಾಯಿ ಟೆಂಡರ್ ಕೊಟ್ಟಿರುವವರಿಗೆ ಕೆಲಸವನ್ನು ವಹಿಸುತ್ತೇವೆಂದು ಹೇಳುತ್ತಿದ್ದಾರೆ. ಇನ್ನೊಬ್ಬ ನಿವೃತ್ತ ಇಂಜಿನಿಯರು ಐದು ಕೋಟಿ ರೂಪಾಯಿ ಅಷ್ಟು ಸುಲಭವಾಗಿ ಕೊಡುವುದಕ್ಕೆ ಆಗುವುದಿಲ್ಲ, ಪ್ರಿಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪ್ಸ್ ಬಹಳ ಉತ್ತಮವಾದುದು ಎಂದು ಪ್ರೂವ್ ಆಗಿದೆ, ಫೂಲ್‌ಪ್ರೂಫ್ ಆಗಿ ಅದನ್ನು ತಯಾರು ಮಾಡತಕ್ಕ ಕಂಪೆನಿ ಇದೆ, 13 ಕೋಟಿ ರೂಪಾಯಿ ಟೆಂಡರು ಕೊಟ್ಟಿರುವವರಿಗೆ ಕೆಲಸವನ್ನು ವಹಿಸಿದರೆ ಜನರಿಗೆ ತೊಂದರೆಯಾಗುತ್ತದೆ, ಒಂದು ಸಾವಿರ ಗ್ಯಾಲನ್ ನೀರಿಗೆ ಐದೂವರೆ ರೂಪಾಯಿ ಕೊಡಬೇಕಾಗುತ್ತದೆ ಎಂದು ಹೇಳುತ್ತಿದ್ದಾರೆ. ಅಲ್ಲದೆ ನಮ್ಮದೂ ಬೇಡ, ನಿಮ್ಮದೂ ಬೇಡ, ಇನ್ನೊಂದು ಟೆಕ್ನಿಕಲ್ ಕಮಿಟಿಗೆ ಒಪ್ಪಿಸೋಣ, ನನ್ನ ಅಭಿಪ್ರಾಯ ಸರಿಯೋ, ನಿಮ್ಮ ಅಭಿಪ್ರಾಯ ಸರಿಯೋ ಎಂದು ತಿಳಿದುಕೊಳ್ಳೋಣವೆಂದರೆ, ಆತುರಾತುರವಾಗಿ ಇ.ಸಿ.ಸಿ. ಕಂಪೆನಿಗೇ ಕೊಡುವುದಕ್ಕೆ ಹೊರಟಿದ್ದಾರೆ.

ಶ್ರೀ ಪಿ. ಎಲ್. ಶಿವಪ್ಪ.—ಸರ್ಕಾರಕ್ಕೆ ಖಂಡಿತವಾಗಿ ಎಲ್ಲ ವಿಷಯಗಳೂ ತಿಳಿದೇ ಇವೆ. ಇದುವರೆಗೂ ಮೈಸೂರು ದೇಶದ ರಾಜಕೀಯವನ್ನು ಕಟ್ಟುತಕ್ಕ ಕೆಲಸ ಮಾತ್ರ ಶ್ರೀ ನಿಜಲಿಂಗಪ್ಪನವರಿಗೂ, ಶ್ರೀ ವೀರೇಂದ್ರ ಪಾಟೀಲರಿಗೂ ಇತ್ತು. ಈಗ ಹಿಂದೂಸ್ತಾನದ ರಾಜಕೀಯವನ್ನು ಕಟ್ಟಬೇಕಾಗಿರುವಾಗ ಹತ್ತು ಹನ್ನೆರಡು ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಸಲುವಾಗಿ ಇದೆಲ್ಲವನ್ನೂ ಮಾಡುತ್ತಿದ್ದಾರೆಂದು ಏಕೆ ತಿಳಿದುಕೊಳ್ಳಬಾರದು ?

ಶ್ರೀ ಡಿ. ದೇವರಾಜ ಅರಸ್.—ಸರ್ಕಾರಕ್ಕೆ ಗೊತ್ತಿದೆಯೋ, ಇಲ್ಲವೋ ಎನ್ನುವುದನ್ನು ಅವರು ಹೇಳಬೇಕು. ಆದರೆ ಮಾಡಿದವರ ಪಾಪ ಆಡಿದವರ ಬಾಯಲ್ಲಿ ಎನ್ನುವಂತೆ ಯಾರೋ ಮಾಡುವುದನ್ನು ನಾನು ಏಕೆ ಹೇಳಲಿ ?

(ಶ್ರೀ ಡಿ. ದೇವರಾಜ ಅರಸ್)

ನಮಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಕಾನೂನು ಪ್ರಕಾರ ಗೊತ್ತು ಮಾಡಿಕೊಳ್ಳಲೇ ಬೇಕು. ಅದು ಅವರ ಜವಾಬ್ದಾರಿ. ಟೆಕ್ನಿಕಲ್ ಒಪಿನಿಯನ್ ಇದೆ ಎಂದರೆ ಒಬ್ಬರು ಒಂದುರೀತಿ ಹೇಳಿದ್ದಾರೆ, ಮತ್ತೊಬ್ಬರು ಇನ್ನೊಂದು ರೀತಿ ಹೇಳಿದ್ದಾರೆ. ಆದ್ದರಿಂದ ಟೆಕ್ನಿಕಲ್ ಒಪಿನಿಯನ್ ಎಂದು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ನಾನು ಒಂದೂವರೆ ತಿಂಗಳಿನಿಂದ ಶಾಂತವಾಗಿ ಇದರ ಬಗ್ಗೆ ಎಲ್ಲ ಮಾಹಿತಿಯನ್ನೂ ಪಡೆಯುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ಎಲ್ಲ ಮಾಹಿತಿಯನ್ನೂ ಸಂಪೂರ್ಣವಾಗಿ ವಿಶ್ವಾಸ ಬರುವ ರೀತಿಯಲ್ಲಿ ಒದಿಟ್ಟುಕೊಂಡಿದ್ದೇನೆ. ಒಂದು ಗಂಟೆಯಲ್ಲಿ ಮೂರು ಗಂಟೆ ಕಾಲ ಬೇಕಾದರೂ ಕಮಿಟಿಯ ಮುಂದೆ ಅಥವಾ ಸರ್ಕಾರದ ಮುಂದೆ ವಿಷಯಗಳನ್ನು ಹೇಳಿ ಅವರನ್ನು ಕನ್‌ವಿನ್ಸ್ ಮಾಡುತ್ತೇನೆ. ಅಲ್ಲಿಗೂ ಚೀಫ್ ಇಂಜಿನಿಯರು ಹೇಳಿದಂಥ ಟೆಕ್ನಿಕಲ್ ಒಪಿನಿಯನ್ ಸರಿ ಎಂದು ನಿಮಗೆ ಕನ್‌ವಿನ್ಸ್ ಆದರೆ ಒಪ್ಪಿಕೊಳ್ಳಿ. ಹಾಗಿಲ್ಲದೆ ನಮ್ಮ ಜವಾಬ್ದಾರಿ ಇಲ್ಲ ಎಂದು ಮಾತ್ರ ಹೇಳಬಾರದು. ಫಾರಿನ್ ಎಕ್ಸ್‌ಛೇಂಜ್ ದೊರೆಯುವುದಿಲ್ಲ ಎನ್ನುವ ನೆಪವನ್ನು ಆಗಾಗ ಹೇಳುತ್ತಿದ್ದಾರೆ. ಜೆಕೊಸ್ಲೊವೇಕಿಯಾದಿಂದ ಪೈಪುಗಳನ್ನು ತರಿಸಿ ಕೆಲಸ ಮಾಡಬೇಕಾದರೆ ಏಳೂವರೆ ಕೋಟಿ ರೂಪಾಯಿ ಫಾರಿನ್ ಎಕ್ಸ್‌ಛೇಂಜ್ ಬೇಕಾಗುತ್ತದೆ. ಫ್ರೆಂಚ್ ಫರ್ಮ್‌ನಿಂದ ಕೆಲಸ ಮಾಡಿಸಿದರೆ ಒಂದುವರೆ ಕೋಟಿ ರೂಪಾಯಿ ಫಾರಿನ್ ಎಕ್ಸ್‌ಛೇಂಜ್ ಬರುತ್ತದೆ. ಅದಕ್ಕೆ ಕೂಡ ಒಂದು ಉತ್ತರವನ್ನು ಕೊಡುತ್ತಿದ್ದಾರೆ, ಜೆಕೊಸ್ಲೊವೇಕಿಯಾ ಫರ್ಮ್‌ನಿಂದ ಬರತಕ್ಕುದಾದರೆ ಸಾಫ್ಟ್ ಕರೆನ್ಸಿ ಆಗುತ್ತದೆ- ಫ್ರೆಂಚ್ ಫರ್ಮ್‌ನಿಂದ ಬರತಕ್ಕುದಾದರೆ ಹಾರ್ಡ್‌ಕರೆನ್ಸಿ ಆಗುತ್ತದೆ ಎಂದು ಹೇಳುತ್ತಾರೆ. ಆದರೆ ಫ್ರೆಂಚ್ ಫರ್ಮ್‌ನವರು ಏನು ಹೇಳುತ್ತಾರೆಂದರೆ ಒಂದೂವರೆ ಕೋಟಿ ರೂಪಾಯಿನಷ್ಟು ಫಾರಿನ್ ಎಕ್ಸ್‌ಛೇಂಜ್ ಒದಗಿಸಲು ಆಗದೆ ಇದ್ದರೆ ನಮ್ಮದೇ ಒಂದು ಫರ್ಮ್ ಇಂಡಿಯಾದಲ್ಲಿ ಸ್ಥಾಪನೆ ಮಾಡುತ್ತೇವೆ. ಅದರಿಂದ ಅರ್ಧ ಭಾಗದಷ್ಟು ಕರೆನ್ಸಿಯಲ್ಲಿ ಉಳಿತಾಯವಾಗುತ್ತದೆ, ಆ ಕಂಪೆನಿಯ ಮುಖೇನ ಕೆಲಸ ಮಾಡುತ್ತೇವೆ, ಯಂತ್ರೋಪಕರಣಗಳನ್ನು ತರುತ್ತೇವೆಂದು ಹೇಳಿದ್ದರೂ ಕೂಡ ಅವನ್ನು ಗಮನಕ್ಕೆ ತೆಗೆದುಕೊಳ್ಳದೆ ಇವರ ತೀರ್ಮಾನವನ್ನು ಆತುರವಾಗಿ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿರುವುದರಲ್ಲಿ ಇರುವ ಔಚಿತ್ಯವಾದರೂ ಏನು ಎಂದು ಕೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ, ನನ್ನ ಸಹೋದ್ಯೋಗಿಗಳಾಗಿದ್ದವರಿಗೆಲ್ಲ ವಿನಂತಿ ಮಾಡಿಕೊಳ್ಳುತ್ತೇನೆ, ಏನೆಂದರೆ, ಈ ವಿಷಯದಲ್ಲಿ ಕೂಲಂಕಷವಾಗಿ ನೋಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅವರಿಗೇನಾದರೂ ತಿಳಿಯಲಿಲ್ಲವೆಂದರೆ ನಾನು ಅವರ ಸಹಾಯಕ್ಕೆ ಬರುವವನಿದ್ದೇನೆ. ಮಂತ್ರಿಮಂಡಲಕ್ಕೆ ಬರುತ್ತೇನೆಂದಲ್ಲ, ನನ್ನ ಹತ್ತಿರ ಇರುವ ಮೆಟೀರಿಯಲ್ ಎಲ್ಲವನ್ನೂ ಅವರ ಮುಂದೆ ಇಟ್ಟು ಚರ್ಚೆ ಮಾಡುವವನಿದ್ದೇನೆ. ಯಾವುದೇ ವಿಷಯ ಅರ್ಥವಾಗಲಿಲ್ಲವೆಂದರೆ ಅವನ್ನು ತಿಳಿಸುವುದಕ್ಕೆ ತಯಾರಿದ್ದೇನೆ. ಬಹಳ ವೇಳೆಯಾಗುತ್ತದೆ ಎಂದು ಅನೇಕ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಲಿಲ್ಲ. ಸಾಕಷ್ಟು ಮಾಹಿತಿ ನನ್ನ ಹತ್ತಿರವಿವೆ. ಬೋರ್ಡಿನವರು ತೆಗೆದುಕೊಂಡಿರತಕ್ಕ ತೀರ್ಮಾನವೇನಿದೆ ಅದು ದೇಶಕ್ಕೆ ಅನಾಹುತವನ್ನುಂಟುಮಾಡತಕ್ಕ ತೀರ್ಮಾನವಾಗಿದೆ ಎಂದು ನನಗೆ ನಂಬಿಕೆಯಾಗಿರುವುದರಿಂದ, ಇಡೀ ಮಾನ್ಯ ಸಭೆಗೂ ನಾನು ಹೇಳುವುದನ್ನು ಕೇಳಿ ನಂಬಿಕೆಗೆ ಬಂದಿರಬಹುದು ಎಂದು ನನ್ನ ಭಾವನೆ. ಆದ್ದರಿಂದ ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡಿ ಬೋರ್ಡಿನವರ ತೀರ್ಮಾನ ಸರಿಯಾಗಿದೆಯೇ ; ಇಲ್ಲದೆ ಇದ್ದರೆ ಅದನ್ನು ಬದಲಾಯಿಸಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇಷ್ಟು ಹೇಳಿ, ನಾನು ಮಾತನಾಡಲು ಬಹುಕಾಲ ತೆಗೆದುಕೊಂಡಿದ್ದೇನೆಂದು ದಯವಿಟ್ಟು ತಾವು ಬೇಜಾರು ಮಾಡಿಕೊಳ್ಳಬಾರದು. ಈ ವಿಷಯ ಪರಕಾರ ಕಣ್ಣು ಬಿಟ್ಟು ನೋಡಬೇಕು. ಇಲ್ಲದಿದ್ದರೆ ದ್ವೇಶ ಉದ್ವೇಗಕ್ಕೆ ತುತ್ತಾಗಬೇಕಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟು, ಅಧ್ಯಕ್ಷರು ದೊಡ್ಡ ಮನಸ್ಸು ಮಾಡಿ ಮಾತನಾಡಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ತುಂಬಾ ಕೃತಜ್ಞನಾಗಿದ್ದೇನೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

5-00 P.M.

† **Sri D. B. KALMANKAR** (Aland).—Mr. Speakr Sir, while opposing the Budget that is presented to this House, I wish to submit some obeservations on the Budget.

No doubt, as I have read the Budget there is some novel way of putting things. By way of introduction, a comparative study is made of the various works done by the Government ten years back. It is also tried to be shown how there has been progress in various sectors. It is shown that the *per capita* income has risen from Rs. 285 to Rs. 500. It is also shown that the number of electrified towns and villages has risen from 3,901 to 9,000 in ten years. It is also shown that the output of foodgrains has increased from 3.8 million tonnes to 5 million tonnes. That is to say, we have almost reached self-sufficiency in the output of foodgrains. Then in regard to Primary Educatian, it is stated that the number of Primary Schools has increased from 27,000 to 32,000 and odd. The road mileage of the State has increased from 28,000 and odd to 36,000 and odd. Like that, there is also mention of power generation, etc.

Then it is also stated that we have four really first class Universities in the State. The Speech states.—"Four really first class Universities have been built up in the State." But nothing is stated as to whether the admittedly backward area of erstwhile Hyderabad Karnatak is going to have a University. Many a time it was urged that there is need for a University for these two to three Districts of Hyderabad Karnatak area. Many new Colleges have come up in that area now. There is great need for establishing a University in that area. But there is no mention in the Budget Speech as far as this aspect is concerned.

Then regarding Irrigation, it is said that out of the total cultivable area of 26.2 million acres in the State, the area under irrigation is only about 10 per cent of the cultivable area. When compared to the other States like Kerala, Madras and Andhra, the percentage of land irrigated is very low. It means that we have not been able to make sufficient headway as far as irrigation is concerned. Now in our area of Hyderabad Karnatak, except the Thungabhadra Project, so far there is no irrigation facility worth mentioning. The work in Upper Krishna Project is very slow. And if the Upper Krishna Project is given more funds, I can say without being contradicted, that it will actually become a granary of foodgrains as far as our State is concerned. But I do not know why the Upper Krishna Project is not given top-priority and why more funds are not earmarked for that project. Some time back when we 13 Legislators went to submit a memorandum to the then Chief Minister Sri S. Nijalingappa, representing therein that we want at least Rs. 10 crores in that year's Budget, Sri Nijalingappa himself volunteered to question us why only Rs. 10 crores was asked and suggested that the figure may be enhanced to Rs. 20 crores. On his suggestion, we altered the amount to Rs. 20 crores. But I am sorry to say it has not materialised. Even a sum of Rs. 10 crores has not been given for that Project. It is such an important project that if it is implemented it will go to change the whole economic and politico-social structure of that area. But there is nothing to say that the Upper Krishna Project has been given top-priority as far as irrigation is concerned.

(SRI D. B. KALMANKAR)

Now with regard to the minor irrigation policy also, the present Government appears to be very partial. For example, I have been submitting to this Government for the last two to three years through speeches, starred questions and representations, that in Aland Taluk everything is ready for taking up minor irrigation works now only the works have to be sanctioned. The officers are also stating that it is only the Cabinet that could take a decision on it and that they had done their part. But in spite of representations and representations, nothing is done. There is a project which will cost only Rs. 11 lakhs; it is going to irrigate 1,500 acres; everything is ready. But the Government is hesitant to sanction; it is not included in this Budget. So I am told that this Government has got a partial attitude as far works relating to irrigation are concerned So far as irrigation schemes are concerned, no political considerations should come in the way of their implementation; irrigation projects must be given paramount importance. Here what I find is that the Government is not prepared to take any irrigation works as far as Opposition Members' constituencies are concerned. That being the case, what better results can we expect from this Government? How can we say that the Government is sincere to do good to the people of the State? So that is the position as far as utilisation of irrigation potential is concerned.

I was very much pleased to see something like directive principles introduced in this Budget speech. It has been stated that the following are some of the Government's goals: (1) employment for every able-bodied adult citizen who needs it; (2) self-sufficiency in foodgrains; (3) eradication of the economic and social handicaps that sustain untouchability; (4) completion of Ghataprabha, Malaprabha, Kabini, Hemavathy and Harangi Projects. It is also seen that some of the Articles from the Directive Principles of State Policy in the Constitution are quoted. The Government wants to do something to secure social order and economic justice. With all these objectives in view, I can say that the Government is going from bad to worse.

There is no idea of this Government following socialistic lines. Unemployment is increasing day by day; we can see so many educated people—matriculates coming from villages and asking for employment. Today there are no opportunities for them In regard to engineers and technical men, the Government was telling all these days that it is going to provide employment, some contracts to engineers and qualified persons. But, so far I have failed to see that it is realised to any extent. As seen from the register, in October 1969 the people who were unemployed are 2,13,601 when compared to the figure for 1960 which was 68,654. This shows how the employment problem has become grave. If we go to rural areas, the problem is still more alarming. That is why I submit that if the Government was really committed to socialistic economy the Government could have thought in terms of

bringing down the ceilings on land. As I had suggested if the ceiling was reduced from 18 standard acres to 9 standard acres, probably much more land would have been available to be distributed to protected tenants and tenants of other classes who are working on the lands and the problem of land hunger would have been solved. Regarding the land grant also I can say that only talk is going on. It was stated that we are going to have some committees for each taluk. But when we see the figures of available lands in different districts we see that there are no lands at all to be distributed. So, if you want land hunger to be satisfied, then some drastic step has to be taken by the Government by way of amendment to the land reforms Act. Not only that, we will have to think in terms of deciding a particular date by which the distribution of surplus land will take place among the tenants as per the principle laid down in the Land Reforms Act. It is only then that we can satisfy land hunger and will be able to do social justice to the people. But nothing is done to satisfy the people in the rural areas. It was said that so many banks are coming forward to satisfy rural sector and small entrepenuers and they have already advanced loans to the extent of 10 crores for agriculture and about 3 crores to small entrepeneurs. But, I submit there are many banks which are not taking any interest in fulfilling the demands. In our part there is the State Bank of Hyderabad. This bank is not at all taking any interest to grant loans to dairies, poultry-farming, small agriculturists for purchasing pumpsets, etc. The banks which are at Gulbarga are saying that they have jurisdiction of 15 miles and they cannot go beyond that. Unfortunately there is one bank and that State Bank of Hyderabad is not coming forward to advance loans and that is why the agriculturists are experiencing difficulties. It was claimed that the Government have been able to do this. It is not true This question of banks giving assistance came only after nationalisation of banks. Before that there was no such work by these banks. The credit must go to the Central Government and not to the State Government. The Central Government has done it because it is on the Union List and only after nationalisation something new is given to the people for which the State Government cannot take any pride.

There are some other points on which I wish to dwell. Regarding the old age pension my submission is only 5607 people are benefited and it is stated that the pension will be increased from Rs. 15 to 25. I submit that efforts are not made to cater to the needs of so many other people nor any suitable machinery is set up to find out how many people are there in the rural areas deserving this old age pension so that they may also benefit. I welcome the increase made in the pension but I submit it is not sufficient. Efforts should be made by the Government to see that many more people are benefited by this.

With these observations I conclude my speech.

ಶ್ರೀ ಎಂ. ಕಲ್ಯಾಣರಾವ್ (ಕಾಲಿಗಿ).—ಮಾನ್ಯ ಅಧ್ಯಕ್ಷರೇ ಹತ್ತೊಂಬತ್ತು ನೂರ ಎಪ್ಪತ್ತು ಎಪ್ಪತ್ತೊಂದನೇ ಸಾಲಿನ ಆಯವ್ಯಯ ಪಟ್ಟಿಯನ್ನು ಅರ್ಥಸಚಿವರು ಈ ಮನೆಯ ಮುಂದೆ ಮಂಡಿಸಿ

(ಶ್ರೀ ಎಂ. ಕಲ್ಯಾಣರಾವ್)

ದ್ದಾರೆ. ಅವನ್ನು ನಾನು ಪ್ರಗತಿ ಪರವಾದ ಪಟ್ಟಿಯಾಗಿದೆ ಎಂದು ಭಾವಿಸಿದ್ದೇನೆ. ನಾನು ಈ ಮನೆಗೆ ಸದಸ್ಯನಾಗಿ ಬಂದು ಮೂರು ವರ್ಷಗಳಾಯಿತು. ಇಲ್ಲಿ ಸರ್ಕಾರದವರು ಮಂಡಿಸತಕ್ಕ ನಿರ್ಣಯಗಳನ್ನು ಸಾಮಾನ್ಯವಾಗಿ ಒಂದು ಪಕ್ಷದವರು ಸ್ವಾಗತ ಮಾಡಿದರೆ ಅದನ್ನು ಇನ್ನೊಂದು ಪಕ್ಷದವರು ವಿರೋಧಿಸುತ್ತಿದ್ದಾರೆ. ಈ ಮನೆಯಲ್ಲಿ ಸಚಿವರು ಮಂಡಿಸತಕ್ಕ ಆಯವ್ಯಯ ಪಟ್ಟಿಗಳನ್ನು ನಾವೆಲ್ಲರೂ ಪ್ರಗತಿಪರವಾದವುಗಳು ಎಂದು ಯಾವುವನ್ನು ಸ್ವಾಗತಿಸುತ್ತಿದ್ದೆವೊ ಅವುಗಳು ಕೃತಿಯಲ್ಲಿ ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತ ಬರುತ್ತಿವೆ ಎಂಬುದನ್ನು ನಾನು ಕಳೆದ ಮೂರು ವರ್ಷಗಳಿಂದಲೂ ನೋಡುತ್ತಿದ್ದೇನೆ. ಈ ದಿವಸ ರಾಜ್ಯದಲ್ಲಿರತಕ್ಕ ಯೋಜನೆಗಳನ್ನು ಕಾರ್ಯಗತ ಮಾಡತಕ್ಕ ನಮ್ಮ ಸರ್ಕಾರಿ ಮಷನರಿ ಏನಿದೆ ಅದನ್ನು ಸ್ಪೀಡಪ್ ಮಾಡಬೇಕೆಂದು ಪ್ರತಿಯೊಬ್ಬರೂ ಹೇಳುತ್ತಿದ್ದೇವೆ. ಹಾಗೆ ಅದನ್ನು ಸ್ಪೀಡಪ್ ಮಾಡದವಿನಾ ನಮ್ಮ ರಾಜ್ಯದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕಾಗುವುದಿಲ್ಲ ಅನ್ನುವುದನ್ನು ಎಲ್ಲರೂ ಒಪ್ಪಬೇಕಾದ ಮಾತು. ನಮ್ಮ ಅರ್ಥ ಸಚಿವರು ಇಲ್ಲಿ ನಮ್ಮ ಮುಂದೆ ವಿವರವಾದ ಪಟ್ಟಿಯನ್ನು ಮಾಡಿ ಕಾಯಿದೆ ದೃಷ್ಟಿಯಿಂದ ನಮ್ಮ ಮುಂದೆ ಇಟ್ಟಿದ್ದಾರೆ. ಈ ಬಡ್ಜೆಟ್ ಪಟ್ಟಿಯನ್ನು ಅನುಮೋದಿಸುತ್ತಾ ಕೆಲವು ಮಾತುಗಳನ್ನು ಇಲ್ಲಿ ಹೇಳಲು ಬಯಸುತ್ತೇನೆ. ಇದಕ್ಕಾಗಿ ಕೆಲವು ನಿದರ್ಶನಗಳನ್ನು ಸರಕಾರದ ಗಮನಕ್ಕೆ ತರುತ್ತೇನೆ. ವಿರೋಧ ಪಕ್ಷದವರು ಹೇಳುವಂತೆ ನಾನು ಇಲ್ಲಿ ಹೇಳುತ್ತಿಲ್ಲ. ನನ್ನ ದೃಷ್ಟಿಯೇ ಬೇರೆ. ಸರಕಾರದವರು ಟೆಂಡರುಗಳನ್ನು ಕರೆದು ಕೆಲಸಗಳನ್ನು ಕೊಡುವುದರಲ್ಲಿ ಕೆಲವು ಕಡೆ ಟೆಂಡರುಗಳು ಕಡಿಮೆಯಾಗಿದ್ದರೂ ಅದರಲ್ಲಿ ಹೆಚ್ಚು ಯಾರದು ಟೆಂಡರು ಇರುತ್ತದೋ ಅಂತಹುಗಳನ್ನು ತೆಗೆದುಕೊಳ್ಳುತ್ತಾರೆ. ಆದರೆ ಕೆಲವು ಕಡೆ ಟೆಂಡರುಗಳು ಸರಿಯಾಗಿ ಕಡಿಮೆ ಬಂದಿದೆ ಎಂದು ಅದನ್ನು ತೆಗೆದುಕೊಳ್ಳಬೇಕು ಎಂದು ಇರುವಾಗ ಚೀಫ್ ಇಂಜಿನೀಯರವರ ಕಡೆಯಿಂದ ಇಂತಹ ಕಡೆಗಳಿಂದ ಹೆಚ್ಚು ಹಣ ಖರ್ಚಾದರೂ ಚಿಂತೆಯಿಲ್ಲ ಇದಕ್ಕಾಗಿ ಕೆಲವು ಲಕ್ಷ ಹೆಚ್ಚಾದರೂ ಚಿಂತೆಯಿಲ್ಲ, ಈ ಕೆಲಸಗಳನ್ನು ಬೇಗನೆ ಮಾಡಬೇಕೆಂದು ಹೆಚ್ಚು ಟೆಂಡರು ಇರುವವರಿಗೆ ಕೊಡುತ್ತಿರುವುದು ಬಹಳ ವಿಷಾದದ ಸಂಗತಿ. ಇದರ ಕಡೆಗೆ ಸರಕಾರ ಲಕ್ಷ ಕೊಡಬೇಕೆಂದು ಇಲ್ಲಿ ಹೇಳಬಯಸುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ.—ಯಾವ ಪ್ರಾಜೆಕ್ಟ್‌ಗೆ ಮತ್ತು ಎಲ್ಲಿ ಆಗುತ್ತಿದೆ ಎನ್ನುವುದನ್ನು ಹೇಳದೇ ಬರಿ ಗುಪ್ತವಾಗಿ ಹೇಳಿದರೆ ಅದು ಸರಿಯಾಗುತ್ತದೆಯೇ ?

ಶ್ರೀ ಕಲ್ಯಾಣರಾವ್.—ನಾನು ಅವನ್ನೆಲ್ಲಾ ಹೇಳುತ್ತೇನೆ. ಆದರೆ ತಾವು ಹೇಳುವ ದೃಷ್ಟಿಕೋನ ಬೇರೆಯಾಗಿದೆ. ನಮ್ಮ ದೃಷ್ಟಿ ಆತ್ಮವಂಚನೆಯಿಲ್ಲದೆ ಸರಕಾರದ ಗಮನಕ್ಕೆ ತಂದು ಇವನ್ನು ಸರಿಪಡಿಸುವುದು ಮುಖ್ಯ ಎಂದು ಇಲ್ಲಿ ಹೇಳುತ್ತಿದ್ದೇನೆ. ಸುಮಾರು ಇಪ್ಪತ್ತು ವರ್ಷಗಳಿಂದಲೂ ನಮ್ಮ ಕಾಂಗ್ರೆಸ್ ಸರಕಾರದವರೇ ಅಧಿಕಾರ ಮಾಡುತ್ತಿದ್ದಾರೆ ಮತ್ತು ಸಾಕಷ್ಟು ಸೌಕರ್ಯಗಳನ್ನು ಜನತೆಗೆ ಒದಗಿಸಿಕೊಡುತ್ತಿದ್ದಾರೆ. ಆದರೆ ವಿರೋಧ ಪಕ್ಷದವರಿಗೆ ಇದು ಹೇಗೆ ಕಾಣುತ್ತದೆ ಎಂದರೆ ನಮ್ಮ ಕಡೆಯಲ್ಲಿ ಕಾಮಾಲೆ ಕಣ್ಣು ಎಂದು ಹೇಳುತ್ತಾರೆ. ಜಾಂಡಿಸ್ ರೋಗದಿಂದ ಕಣ್ಣು ಬಣ್ಣ ಬದಲಾಗುವಂತೆ ನಿಮ್ಮ ದೃಷ್ಟಿಕೋನ ಬದಲಾಗುತ್ತಿರುತ್ತದೆ. ಬಡ್ಜೆಟ್ಟಿನ ಬಗ್ಗೆ ಈಗಾಗಲೇ ಕೆಲವು ಮಿತ್ರರು ಫೈನಾನ್ಸ್ ಮಿನಿಸ್ಟರವರ ಗಮನಕ್ಕೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಾನು ಆಡಳಿತದಲ್ಲಿ ಶಿಥಿಲತೆ ಇಲ್ಲ ಎಂದು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಇದೆ, ಇದರ ಬಗ್ಗೆ ನಮ್ಮ ಗುಲ್ಬರ್ಗಾದಲ್ಲಿ ಆಫೀಸರುಗಳು ಯಾವ ರೀತಿ ಮಾಡುತ್ತಿದ್ದಾರೆ ಎಂದು ಹೇಳಲು ಇಷ್ಟಪಡುತ್ತೇನೆ. ಗುಲ್ಬರ್ಗಾದಲ್ಲಿ ಯಾವ ಇಂಡಸ್ಟ್ರಿಗಳೂ ಇಲ್ಲ. ಇಂಡಸ್ಟ್ರಿಗೆ ಸಂಬಂಧಪಟ್ಟ ಹಾಗೆ ಅಲ್ಲಿ ಒಂದು ರೀತಿಯಾದ ಡೆಕ್ಕನ್ ಹೆಂಪ್ಸ್ ಎನ್ನುವ ಒಂದು ರೀತಿಯಾದ ಹುಲ್ಲನ್ನು ಬೆಳೆಯುತ್ತಾರೆ. ಅದು ಹೇರಳವಾಗಿ ಅಲ್ಲಿ ದೊರಕುತ್ತವೆ. ಅದನ್ನು ಪಯೋಗಿಸಿಕೊಂಡು ಅಲ್ಲಿ ಒಂದು ಇಂಡಸ್ಟ್ರಿ ಆರಂಭ ಮಾಡಬಹುದು ಎಂದು ಒಂದು ಸ್ಕೀಂ ಮಾಡಿ ಸರಕಾರಕ್ಕೆ ಕಳುಹಿಸಬೇಕೆಂದು ಈಗ್ಗೆ ಮೂರು ವರ್ಷದ ಕೆಳಗೆ ಯೋಜನೆ ಕೊಟ್ಟಿದ್ದರೂ ಅದನ್ನು ಇಲ್ಲಿನ ಅಧಿಕಾರಿಗಳು ಎಕ್ಸಾಮಿನ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆಯೇ ಹೊರತು, ಇದುವರೆಗೂ ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು ಎಲ್ಲಿಗೆ ಹೋದವೊ ನನಗೆ ಇನ್ನೂ ಗೊತ್ತಿಲ್ಲ. ಇದನ್ನು ನಾನು ಮುಖ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ ಮತ್ತು ಅವರು ಅಲ್ಲಿಗೆ ಪ್ರವಾಸ ಬಂದಾಗ ಇದರ ವಿಚಾರವನ್ನೂ ಪ್ರಸ್ತಾಪ ಮಾಡಿದ್ದೆ. ಅವರೂ ಕೂಡ ಅಲ್ಲಿನ ಅಧಿಕಾರಿಗಳಿಗೆ ಇದರ ಬಗ್ಗೆ ಸೂಚನೆಗಳನ್ನು ಕೊಟ್ಟು ಇದನ್ನು ವರ್ಕ್ ಔಟು ಮಾಡಿ ಕಳುಹಿಸಬೇಕೆಂದು ಹೇಳಿದ್ದರೂ ಇದುವರೆಗೂ ಇಲ್ಲಿನ ಅಧಿಕಾರಿಗಳು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಿಲ್ಲ. ಆಡಳಿತದಲ್ಲಿರುವವರ ಮನೋಭಾವನೆ ಅಧಿಕಾರ ಷಾಹಿ ರೀತಿಯಲ್ಲಿ ಇರುವುದರಿಂದ ಸರಿಯಾದ ಉಪಯುಕ್ತವಾದ ಕೆಲಸಗಳು ಆಗುತ್ತಿಲ್ಲ, ಇದು ಅಧಿಕಾರಿಗಳ ಅದಕ್ಷತೆಯನ್ನು ತೋರಿ

ಸುತ್ತದೆ. ಇಂತಹ ಅದಕ್ಷತೆಯುಳ್ಳ ಅಧಿಕಾರಿಗಳನ್ನು ಸರಕಾರ ಏಕೆ ಇಟ್ಟುಕೊಳ್ಳಬೇಕು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಇನ್ನು ಶಿಕ್ಷಣ ಖಾತೆ ಬಗ್ಗೆ ಹೇಳುವಾಗ ನಮ್ಮ ಭಾಗದಲ್ಲಿ ಒಂದು ಜನರಲ್ ಹಾಸ್ಟಲ್ ಇದೆ. ಇದಕ್ಕೆ ಸರಕಾರದವರು ಗ್ರ್ಯಾಂಟುಗಳನ್ನು ಕೊಡಬೇಕೆಂದು ಇದರ ಬಗ್ಗೆ ಸುಮಾರು ಮೂರು ವರ್ಷಗಳಿಂದಲೂ ಈ ಹಾಸ್ಟಲು ಯಾವ ರೀತಿ ನಡೆಯುತ್ತಿದೆ ಮತ್ತು ಯಾವ ಯಾವ ವಿವರಗಳನ್ನು ಸರಕಾರಕ್ಕೆ ಕೊಡಬೇಕು ಅದನ್ನೆಲ್ಲಾ ಡಿಪಿಐ ಕಡೆಗೆ ಕಳುಹಿಸಲಾಗಿತ್ತು. ನಾನು ನಿನ್ನೆ ದಿವಸ ಇದರ ಬಗ್ಗೆ ಡಿಪಿಐರವರ ಕಡೆಗೆ ಹೋಗಿ ವಿಚಾರಿಸಿದಾಗ ಇದರ ಫೈಲೇ ಇನ್ನೂ ಅವರ ಕಡೆಗೆ ಬಂದಿಲ್ಲ ಎಂದು ಹೇಳುತ್ತಾರೆ. ಪ್ರತಿ ಸಾರಿಯೂ ಇದೇ ರೀತಿ ಹೇಳುತ್ತಾ ಬರುತ್ತಿದ್ದಾರೆ. ಇದು ಬಹಳ ವಿಷಾದದ ಸಂಗತಿ. ಪ್ರತಿ ಸಾರಿಯೂ ಏನೇನೋ ಇನ್‌ಫರ್‌ಮೇಷನ್ ಬೇಕು ಎಂದು ಕೇಳಿದರೂ ಅವನ್ನೆಲ್ಲಾ ಪೂರ್ತಿ ಕಳುಹಿಸಿಕೊಡಲಾಗಿದ್ದರೂ ಇನ್ನೂ ಇದರ ಬಗ್ಗೆ ಮೇಲಿನ ಅಧಿಕಾರಿಗಳು ಸರಿಯಾದ ಕ್ರಮ ತೆಗೆದುಕೊಳ್ಳದೇ ಇದ್ದರೆ ನಾವೇನು ಹೇಳಬೇಕೋ ತಿಳಿಯದು.

ಶ್ರೀ ಎಂ. ನಾಗಪ್ಪ.—ಡಿಪಿಐ ಆಗಿರುವವರು ಕಾಂಗ್ರೆಸ್ಸು ಸರಕಾರದ ಆಡಳಿತಕ್ಕೆ ಒಳಪಟ್ಟಿರುವವರೇ ಅಲ್ಲವೇ ?

ಶ್ರೀ ಕಲ್ಯಾಣರಾವ್.—ಕಾಂಗ್ರೆಸ್ಸು ಆಡಳಿತದಲ್ಲಿದ್ದರೂ ಅಧಿಕಾರದಲ್ಲಿರುವವರು ಅಧಿಕಾರಶಾಹಿ ರೀತಿಯಿಂದ ಜನತೆಗೆ ಅನುಕೂಲವಾಗದಂತೆ ಕೆಲಸ ಮಾಡಿದರೆ ಇದನ್ನು ಸರಕಾರದ ಗಮನಕ್ಕೆ ತರುವುದು ನಮ್ಮ ಕರ್ತವ್ಯ ಎಂದು ಇಲ್ಲಿ ಹೇಳುತ್ತಿದ್ದೇನೆ. ಎಲ್ಲ ಅಧಿಕಾರಿಗಳೂ ಇದೇ ರೀತಿ ಇದ್ದಾರೆ ಎಂದು ಹೇಳುತ್ತಿಲ್ಲ. ಕೆಲವು ಕಡೆ ಇರುವ ಅಧಿಕಾರಿಗಳು ಜನರಿಗೆ ಸರಿಯಾದ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡುತ್ತಿಲ್ಲ. ನಮ್ಮ ಕಡೆಯಲ್ಲಿ ಸುಮಾರು ಮೂರು ವರ್ಷದಿಂದಲೂ ಇಂತಹ ಒಂದು ಇಂಡಸ್ಟ್ರೀ ಬಗ್ಗೆ ಸ್ಕೀಂ ಮಾಡಿ ಇದುವರೆಗೂ ಏನೂ ನಡೆಯಲಿಲ್ಲ ಎಂದು ಇಲ್ಲಿ ಹೇಳಲೇ ಬೇಕಾಯಿತು. ಆದುದರಿಂದ ಸರಕಾರದವರು ಬರೀ ರೂಲ್ಸು ರೆಗ್ಯುಲೇಷನ್‌ಗಳ ಮೂಲಕವೇ ಕೆಲಸ ಮಾಡಬೇಕೆಂದು ಅದಕ್ಷ ಅಧಿಕಾರಿಗಳನ್ನು ಇಟ್ಟುಕೊಂಡರೆ ಅವರಿಂದ ಸರಿಯಾಗಿ ಕೆಲಸಗಳು ಆಗುತ್ತವೆಯೆ ? ಅದಕ್ಷ ಅಧಿಕಾರಿಗಳು ಎಂದು ಸರಕಾರದ ಗಮನಕ್ಕೆ ಬಂದರೆ ಅಂಥಹ ಅಧಿಕಾರಿಗಳನ್ನು ತೆಗೆಯಲು ಅವಕಾಶವಿಲ್ಲದಿದ್ದರೆ ಇರುವ ಕಾನೂನಿಗೆ ಬೇಕಾದ ಒಂದು ತಿದ್ದುಪಡಿಯನ್ನು ಇಲ್ಲಿ ತಂದು ಇಟ್ಟರೆ ಅದನ್ನು ಈ ಅಸೆಂಬ್ಲಿಯೊಳಗೆ ಒಪ್ಪಿಗೆ ಕೊಟ್ಟು ಸರಕಾರಕ್ಕೂ ಬೇಕಾದರೆ ಅನುಕೂಲ ಮಾಡಿಕೊಡಬಹುದು. ಇದಕ್ಕೆ ಎಲ್ಲರೂ ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ.

ಇನ್ನು ಸಹಕಾರ ಖಾತೆಯ ಬಗ್ಗೆ ಹೇಳುವುದಾದರೆ ಈಗ ಇರುವಂತೆ ಸರಕಾರದ ಕ್ಷೇತ್ರದಲ್ಲಿ ಸರಿಯಾದ ಅಭಿವೃದ್ಧಿಯಾಗಬೇಕಾದರೆ ಇದಕ್ಕೆ ಒಂದು ಆಲ್‌ಟರ್‌ನೇಟೀವ್ ಸಲಹೆಯನ್ನು ಸೂಚಿಸಬೇಕೆಂದು ನನಗನಿಸುತ್ತದೆ. ಸಹಕಾರ ಕ್ಷೇತ್ರಗಳಲ್ಲಿ ಕೆಲವು ನ್ಯೂನತೆಗಳು ಇರಬಹುದು. ಇಲ್ಲ ಎಂದು ಹೇಳುತ್ತಿಲ್ಲ. ಸಹಕಾರ ಕ್ಷೇತ್ರಗಳಲ್ಲಿ ಅಲ್ಲಲ್ಲಿ ಲೋಪದೋಷಗಳು ಇವೆ. ಆದರೆ ಇಂತಹ ಲೋಪದೋಷಗಳನ್ನೇ ಹೆಚ್ಚು ಪ್ರಚಾರ ಮಾಡಿಕೊಂಡು ಹೋದರೆ ಅದು ಸರಿಯಲ್ಲ. ಇದಕ್ಕಾಗಿ ಈಗ ಖರ್ಚು ಮಾಡುತ್ತಿರುವುದು ಸಾಲದು. ಇದನ್ನು ರಿವೈಸು ಮಾಡಿ ಇನ್ನೂ ಹೆಚ್ಚು ಖರ್ಚು ಮಾಡಲು ಈ ಖಾತೆಗೆ ಅವಕಾಶ ಮಾಡಿಕೊಡಬೇಕು ಎಂದು ನಾನು ಇಲ್ಲಿ ಬೇಡಿಕೊಳ್ಳುತ್ತೇನೆ.

ಎಲೆಕ್ಟ್ರಿಸಿಟಿ ಬೋರ್ಡಿನ ವಿಚಾರ ಹೇಳುವುದಾದರೆ ಗುಲ್ಬರ್ಗ ಡಿಸ್ಟ್ರಿಕ್ಟ್‌ನಲ್ಲಿ ಶೇಕಡ 20ರಷ್ಟು ಟಾರ್ಗೆಟ್ ಮುಟ್ಟಿಲ್ಲ. ಇದು ಎಲೆಕ್ಟ್ರಿಸಿಟಿ ಬೋರ್ಡಿನವರ ಆಡಳಿತದ ಅದಕ್ಷತೆ ತೋರಿಸುತ್ತದೆ. ಇದರಲ್ಲಿ ಅನೇಕ ದುರ್ವ್ಯವಹಾರಗಳು ನಡೆದಿವೆ. ಇದನ್ನು ಸರ್ಕಾರದವರು ಕೂಡಲೇ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತುಕೋಲ್ ಸಮಿತಿಯ ವರದಿ ಬಗ್ಗೆ ಹೇಳುತ್ತಾ ಸರಕಾರದವರು ಇದನ್ನು ಪೂರ್ತಿಯಾಗಿ ಒಪ್ಪಿಕೊಂಡದ್ದು ನಮ್ಮ ಆಡಳಿತವರ್ಗದಲ್ಲಿದ್ದ ಅಸಂತೋಷಗಳು ಏನಿತ್ತು ಅವು ಹೋಗಿ ಇದರಿಂದ ಎಲ್ಲರಿಗೂ ಸಮಾಧಾನವಾಗಿದೆ ಎಂದು ನಾನು ಭಾವಿಸುತ್ತೇನೆ. ಆದರೆ ಇದರಲ್ಲಿ ಒಂದು ವಿಚಾರ ನನಗೆ ಸರಿ ಕಾಣುತ್ತಿಲ್ಲ. ಐಎಎಸ್ ಹಾಗೂ ನಾನ್ ಐಎಎಸ್ ಸ್ಕೇಲುಗಳಲ್ಲಿ ತಾರತಮ್ಯ ಏಕೆ ತೋರಿಸುತ್ತಾರೆ ಎನ್ನುವುದು ನನಗೆ ತಿಳಿಯದಾಗಿದೆ. ಉದಾಹರಣೆಯಾಗಿ ಹೇಳುವುದಾದರೆ ಕೆಲವು ಕಡೆ ಉಪ ಕಾರ್ಯದರ್ಶಿಗಳೆಂದು ನಾನ್ ಐಎಎಸ್ ಇರುವ ಅಧಿಕಾರಿಗಳಿಗೆ 100 ರೂಪಾಯಿಗಳು ಸ್ಪೆಷಲ್ ಅಲೋಯನ್ಸ್ ಎಂದು ಅದೇ ಐಎಎಸ್ ಅಧಿಕಾರಿಗಳಾದರೆ 200 ರೂಪಾಯಿಗಳು ಎಂದೇಕೆ ಮಾಡಬೇಕು. ಇಬ್ಬರೂ ಒಂದೇ ದರ್ಜೆಗೆ ಕೆಲಸ ಮಾಡುವ ಅಧಿಕಾರಿಗಳಾಗಿದ್ದರೂ ಇದರಲ್ಲಿ ವ್ಯತ್ಯಾಸವೇಕೆ ಮಾಡಬೇಕು. ಯೂನಿಫಾರಂ ಆದ ಒಂದು ರೀತಿಯಲ್ಲಿ ಸ್ಪೆಷಲ್‌ಪೇ ಇರುವಂತೆ

(ಶ್ರೀ ಎಂ. ಕಲ್ಯಾಣರಾವ್)

ಏಕೆ ಮಾಡಬಾರದು ? ಈ ರೀತಿ ತಾರತಮ್ಯವನ್ನೇಕೆ ಮಾಡುತ್ತೀರಿ ? ಇದನ್ನು ಸರಕಾರ ಗಮನಕ್ಕೆ ತೆಗೆದುಕೊಂಡು ಸರಿಪಡಿಸಬೇಕು ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

5-30 P.M.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ತಮ್ಮ ಆಯವ್ಯಯ ಭಾಷಣವನ್ನು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಅವರೇನಾದರೂ ಕಾದಂಬರಿಕಾರರಾಗಿದ್ದರೆ ಇನ್ನೂ ಹೆಚ್ಚಿನ ಯಶಸ್ಸನ್ನು ಗಳಿಸುತ್ತಿದ್ದರೆಂದು ನಾನು ತಿಳಿದುಕೊಂಡಿದ್ದೇನೆ. ತಮ್ಮ ಭಾಷಣದ ಎರಡು ಮತ್ತು ಮೂರನೆಯ ಪೇಜ್‌ಗಳಲ್ಲಿ ಮತ್ತು ಎಂಟು ಮತ್ತು ಒಂಭತ್ತನೆಯ ಪುಟಗಳಲ್ಲಿ ಕಳೆದ ಒಂದು ದಶಕದಲ್ಲಿ ಸಾಧಿಸಿರುವ ಮತ್ತು ಈ ದಶಕದಲ್ಲಿ ಸಾಧಿಸಬೇಕೆಂದಿರುವುದನ್ನು ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರ ಏನೇನು ಸಾಧಿಸಿದೆ ಎಂಬುದನು ಮತ್ತು ಸಾಧಿಸಬೇಕೆಂದಿರುವುದನ್ನು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ ಸುಂದರವಾಗಿರುವ ಚಿತ್ರ ಚಿತ್ರಿಸಿರುವುದನ್ನು ನೋಡುವುದಕ್ಕೆ ಬಹಳ ಚೆನ್ನಾಗಿ ಇದೆ. ಕೊಟ್ಟಿರತಕ್ಕಂಥ ಅಂಕಿ ಅಂಶಗಳನ್ನು ಹೋಲಿಸಿ ನೋಡಿದಾಗ ಹತ್ತಿಹಣ್ಣು ಯಾವುದು, ಅಂಜೂರದ ಹಣ್ಣು ಯಾವುದು ಎಂಬುದು ಅರ್ಥವಾಗುತ್ತದೆ. ಆಹಾರಧಾನ್ಯಗಳ ಉತ್ಪಾದನೆ ಎಷ್ಟು ಹೆಚ್ಚಿದೆ ಪ್ರಾಥಮಿಕ ಶಾಲೆಗಳು ಎಷ್ಟು ಹೆಚ್ಚಿದೆ ಎಂಬುದನ್ನು ಮೂರನೆಯ ಪುಟದಲ್ಲಿ ಹೇಳಲಾಗಿದೆ. ಪ್ರಾಥಮಿಕ ಶಾಲೆಗಳ ಸಂಖ್ಯೆ 27,050ರಿಂದ 32,210ಕ್ಕೆ ಏರಿದೆ ಎಂದು ಹೇಳಿದ್ದೀರಿ. ಮತ್ತು ವಿದ್ಯಾರ್ಥಿಗಳ ಸಂಖ್ಯೆ 22 ಲಕ್ಷದಿಂದ 33ಲಕ್ಷಕ್ಕೆ ಹೆಚ್ಚಿದೆ ಎಂದು ಹೇಳಿದ್ದೀರಿ. ಸ್ಕೂಲ್‌ಗಳ ಸಂಖ್ಯೆ 5160ರಷ್ಟು ಮಾತ್ರ ಹೆಚ್ಚಿದೆ. ಪ್ರಜಾ ಸಂಖ್ಯೆ 53 ಲಕ್ಷ ಹೆಚ್ಚಿದೆ. ವಾಸ್ತವಿಕ ದಾಮಾಶಕ್ಕಿಂತ ಇದು ಕಡಿಮೆಯಾಗಿದೆ. ಸುಮಾರು 6 ಸಾವಿರ ಪ್ರಾಥಮಿಕ ಶಾಲೆಗಳು ಹೆಚ್ಚಾಗಬೇಕಾಗಿತ್ತು. ಮಾನ್ಯ ಆರ್ಥಿಕ ಮಂತ್ರಿಗಳು ಬಹಳ ಚತುರತೆಯಿಂದಲೇ ತಮಗೆ ಬೇಕಾದ ರೀತಿಯಲ್ಲಿ ಆಕಾಶ ಪುರಾಣವನ್ನು ತಮ್ಮ ಭಾಷಣದಲ್ಲಿ ಚಿತ್ರಿಸಿದ್ದಾರೆ. ಇಲ್ಲಿ ಒಂದು ಮಾತನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. 1969-70 ಮತ್ತು 1970-71ರ ಬಡ್ಜೆಟ್ ಭಾಷಣಗಳನ್ನು ನೋಡುವುದಾದರೆ ಕೆಲವು ವಿಚಾರಗಳು ಪುನರಾವರ್ತಿಯಾಗಿರುವುದನ್ನು ನೋಡಬಹುದಾಗಿದೆ. 1969-70ರ ಬಡ್ಜೆಟ್ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ, " ನಮ್ಮ ದೇಶದ ವಿದ್ಯಾ ಪದ್ಧತಿಯಲ್ಲಿ ಹಲವಾರು ಬದಲಾವಣೆಗಳು ಉಂಟಾಗಿವೆ. ಇದರಿಂದಾಗಿ ಶಿಕ್ಷಣದ ಗುಣ ಪ್ರಮಾಣವನ್ನು ಉತ್ತಮಗೊಳಿಸುವ ವಿಚಾರಕ್ಕೆ ಸಾಕಷ್ಟು ಗಮನ ನೀಡುವುದು ಸಾಧ್ಯವಾಗಿಲ್ಲ" ಎಂಬುದಾಗಿ. ಅದೇ 1970-71ರ ಬಡ್ಜೆಟ್ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ: " ಶಿಕ್ಷಣದ ಗುಣಾಂಶವನ್ನು ಗಣನೀಯವಾಗಿ ಉತ್ತಮಪಡಿಸುವುದು ಅಗತ್ಯವಾಗಿದೆ." ಎಂಬುದಾಗಿ. ಇದು ಹೇಳಿದ್ದೇ ಹೇಳುವ ಹೇಳಿಕೆಯಾಗಿದೆ. ಈವರ್ಷದ ಬಡ್ಜೆಟ್ ಭಾಷಣದಲ್ಲಿ ಗಾಂಧಿ ಶತಾಬ್ದಿ ವರ್ಷದ ಕಾರಣದಿಂದ, ರಾಷ್ಟ್ರೀಯ ಗ್ರಾಮೀಣ ನೀರುಪೂರೈಕೆ ಹಾಗೂ ನಗರ ನೀರು ಪೂರೈಕೆ ಯೋಜನೆಗಳಿಗೆ ವಿಶೇಷ ಪ್ರಾಶಸ್ತ್ಯ ನೀಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದೇ ಮಾತನ್ನು ಪ್ರತಿ ವರ್ಷವೂ ಕೂಡ ಹೇಳುತ್ತಿದ್ದಾರೆ. ಆದರೆ ಕಾರ್ಯತಃ ಏನೂ ಆಗಿಲ್ಲ. ಬಡ್ಜೆಟ್ ತಯಾರು ಮಾಡುವಾಗ ಗ್ರಾಮಸ್ಥರನ್ನು ಮಾನ್ಯ ಆರ್ಥಿಕ ಮಂತ್ರಿಗಳು ಸಂಪೂರ್ಣವಾಗಿ ಮರೆತಿದ್ದಾರೆ. ರಾಜ್ಯದ ಆದಾಯದಲ್ಲಿ ಶೇಕಡಾ 62ರಷ್ಟು ಗ್ರಾಮಾಂತರವಲಯದಿಂದ ಬರುತ್ತದೆ ಎಂದು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿರುವಾಗ ಅವರಿಗೆ ಬೇಕಾದಂಥ ಸಾಮಾನ್ಯ ಸೌಲಭ್ಯಗಳನ್ನು ಒದಗಿಸುವುದಕ್ಕೆ ಬಡ್ಜೆಟ್‌ನಲ್ಲಿ ಏನೂ ಪ್ರಸ್ತಾಪ ಮಾಡಿಲ್ಲ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ: ಈಗ ನಗರ ಪ್ರದೇಶಗಳಲ್ಲಿ ಜನರಿಗೆ ವಾಸ ಮಾಡಲು ಹೌಸಿಂಗ್ ಬೋರ್ಡ್ ಮೂಲಕ ಮನೆಗಳನ್ನು ಕಟ್ಟಿಸಿಕೊಡಲಾಗುತ್ತಿದೆ. ಅದರಂತೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ ಎನ್ನುವುದನ್ನು ಅಂಕಿಅಂಶಗಳ ಮೂಲಕ ತಿಳಿಸಿದರೆ ಸರ್ಕಾರಕ್ಕೆ ಮನವರಿಕೆಯಾಗುತ್ತದೆ. ಕಳೆದ ಮೂರು ವರ್ಷಗಳಿಂದ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರದವರು 1598 ಮನೆಗಳನ್ನು ಮಾತ್ರ ಸಾಲ ಕೊಟ್ಟು ಕಟ್ಟಿಸಿದ್ದಾರೆ. ನಗರಗಳಲ್ಲಿಯಾದರೆ ಸರ್ಕಾರದವರೇ ಮನೆಗಳನ್ನು ಕಟ್ಟಿಸಿ ಜನರಿಗೆ ಕೊಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶದ ಜನರೂ ಕೂಡ ನಮ್ಮ ರಾಜ್ಯದ ಜನರೇ ಅಲ್ಲವೇ ? ಏತಕ್ಕೆ ಈ ತಾರತಮ್ಯ ಎಂದು ಕೇಳುತ್ತೇನೆ. ಹಳ್ಳಿಗಳಲ್ಲಿ ಒಂದೇ ಮನೆಯಲ್ಲಿ ನಾಲ್ಕೈದು ಸಂಸಾರಗಳು ದನಗಳೊಪಾದಿಯಲ್ಲಿ ವಾಸ ಮಾಡುತ್ತಿವೆ. ಇದನ್ನು ಶ್ರೀ ರಾಮಕೃಷ್ಣ ಹೆಗಡೆಯವರು ನೋಡಿದರೆ ನಿಜವಾಗಿಯೂ ಮರುಗುತ್ತಾರೆ, ಇವೊತ್ತು ಶೇಕಡ 79 ಜನರ ಗ್ರಾಮಗಳಲ್ಲಿ ನೆಲೆಸಿದ್ದಾರೆ. ಅವರು ಕಡೆ ಗಮನಕೊಡುವುದು ಅವಶ್ಯಕವಿದೆ.

ಪ್ರೈಮರಿ ಹೆಲ್ತ್ ಯೂನಿಟ್‌ಗಳಿಗೆ ನಾಲ್ಕೈದು ಸಾವಿರ ರೂಪಾಯಿಗಳಷ್ಟು ಔಷಧವನ್ನು ಒದಗಿಸಿದರೆ ಅದೇ ನಗರಗಳಲ್ಲಿರುವ ಹೆಲ್ತ್ ಯೂನಿಟ್‌ಗಳಿಗೆ ಲಕ್ಷಾಂತರ ರೂಪಾಯಿಗಳ ಔಷಧವನ್ನು ಒದಗಿಸುತ್ತಿದ್ದೀರಿ. ಈ ತಾರತಮ್ಯ ಸರಿಯಲ್ಲ. ಕಳೆದ ಎರಡು ವರ್ಷಗಳಿಂದ 4607 ಜನರಿಗೆ ವೃದ್ಧಾಪ್ಯ ವೇತನ ಕೊಟ್ಟಿದ್ದೀರಿ. ವೃದ್ಧಾಪ್ಯ ವೇತನ ಕಣ್ಣೀರು ಒರೆಸಲೆಣಿಸಿರುವ ಒಂದು ನಾಟಕ ಮಾತ್ರ. ಇದರಲ್ಲಿ ಗ್ರಾಮಾಂತರ ಪ್ರದೇಶದವರು ಎಷ್ಟು ಜನ ಇದ್ದಾರೆಂದು ತಿಳಿಯುವುದಕ್ಕೆ ನಾನು ಇಷ್ಟಪಡುತ್ತೇನೆ. 4607 ಜನರಲ್ಲಿ ಗ್ರಾಮಾಂತರದ ಜನರು 600 ಸಹ ಇಲ್ಲವೆಂದು ಹೇಳಬಹುದು. ಈಗ ವೃದ್ಧಾಪ್ಯ ವೇತನವನ್ನು 15 ರೂಪಾಯಿಗಳಿಂದ 25 ರೂಪಾಯಿಗಳಿಗೆ ಹೆಚ್ಚಿಸಿದ್ದೀರಿ. 25 ರೂಪಾಯಿಗಳಲ್ಲಿ ಈ ದುರ್ಭರ ಕಾಲದಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿರುವ ವ್ಯವಸಾಯಗಾರರ ಕಷ್ಟಸುಖಗಳನ್ನು ಸರ್ಕಾರದ ಮುಂದೆ ಹೇಳದಿದ್ದರೆ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಹಳ್ಳಿಯ ಜನರಿಗೆ ವ್ಯವಸಾಯವೇ ಮುಖ್ಯ ಕಸಬು. ಇವತ್ತು ಕಬ್ಬನ್ನು ಬೆಳೆದವರಿಗೆ ಅಪಾರವಾದ ನಷ್ಟವಾಗುತ್ತಿದೆ. ಕೆಲವು ಕಡೆಗಳಲ್ಲಿ ಸಕ್ಕರೆ ಕಾರ್ಖಾನೆಗಳು ಇವೆ. ಈ ಕಾರ್ಖಾನೆಗಳಿಗೆ ಯಾವ ರೈತರು ಕಬ್ಬನ್ನು ಒದಗಿಸುತ್ತಾರೋ ಅಂತಹವರಿಗೆ ಸ್ವಲ್ಪವಾದರೂ ಪ್ರತಿಫಲ ದೊರೆಯುತ್ತಿದೆ. ಸ್ವಂತಕ್ಕಾಗಿ ಕಬ್ಬನ್ನು ಬೆಳೆದವರಿಗೆ ಅಪಾರವಾದ ತುಂಬಲಾರದ ನಷ್ಟವಾಗುತ್ತಿದೆ. ಏಕೆಂದರೆ ಸರ್ಕಾರದವರು ಇಂತಹವರನ್ನು ಮರೆತಿದ್ದಾರೆ. ಆಹಾರಧಾನ್ಯಗಳಿಗೆ ಸರ್ಕಾರದವರು ಸಪೋರ್ಟಿಂಗ್ ಪ್ರೈಸ್‌ನ್ನು ಕೊಡುವಂತೆ ಕಬ್ಬು ಬೆಳೆಯುವವರಿಗೂ ಕೂಡ ಸಪೋರ್ಟಿಂಗ್ ಪ್ರೈಸ್‌ನ್ನು ಕೊಡಬೇಕು. ಕೇಂದ್ರ ಸರ್ಕಾರದವರು ಸಕ್ಕರೆ ಮಾರಾಟ ಬಗ್ಗೆ ಹೊಸ ಜೋನಲ್ ಸಿಸ್ಟಮ್ ಜಾರಿಗೆ ತಂದು ನಮ್ಮ ಜೋನ್‌ನಲ್ಲಿ ಒಂದು ಕ್ವಿಂಟಾಲ್ ಸಕ್ಕರೆಯ ಬೆಲೆಯನ್ನು 14 ರೂಪಾಯಿನಷ್ಟು ಕಡಿಮೆ ಮಾಡಿದ್ದಾರೆ. ಕಬ್ಬು ಬೆಳೆಯುವವರ ರಕ್ಷಣೆ ಮಾಡುವ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಕೇಳುತ್ತೇನೆ. ಈ ರೀತಿ ಬೆಲೆಯನ್ನು 14 ರೂಪಾಯಿನಷ್ಟು ಕಡಿಮೆ ಮಾಡಿರುವುದು ಸರಿಯಲ್ಲವೆಂದು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರೊಡನೆ ನೇರವಾಗಿ ಮಾತನಾಡಬೇಕು. ಆದೇ ಮಹಾರಾಷ್ಟ್ರದವರು ತಮ್ಮ ಮೊದಲನ ಬೆಲೆಯಾದ 135 ರೂಪಾಯಿಗಳನ್ನೇ ಉಳಿಸಿಕೊಂಡಿದ್ದಾರೆ. ಮಧ್ಯಪ್ರದೇಶದವರು ತಮ್ಮ ಮೊದಲನ ಬೆಲೆಯಾದ 195 ರೂಪಾಯಿಗಳನ್ನೇ ಉಳಿಸಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಮಾತ್ರ ಏಕೆ ಕಡಿಮೆ ಮಾಡಲಾಗಿದೆ ಎಂಬುದನ್ನು ಸರ್ಕಾರದವರು ಕೇಂದ್ರದವರನ್ನು ಕೇಳಬೇಕು. ರಾಜ್ಯ ಸರಕಾರ ರಾಜಕೀಯ ಮುತ್ಸದ್ದಿತನವಲ್ಲ ಎಂದು ಹೇಳಬೇಕಾಗಿದೆ. ಸಿಮೇ ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡಲಾಗಿದೆ. ಗೊಬ್ಬರದ ಬೆಲೆಯನ್ನು ಕಡಿಮೆ ಮಾಡುವ ಬಗ್ಗೆ ಬಜೆಟ್‌ನಲ್ಲಿ ಯಾವ ಕಡೆಯೂ ಪ್ರಸ್ತಾಪ ಮಾಡಿಲ್ಲ. ಒಂದು ಕಡೆ ರೈತರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಾರೆ, ಇನ್ನೊಂದು ಕಡೆ ಗೊಬ್ಬರದ ಬೆಲೆ ಜಾಸ್ತಿ ಮಾಡುತ್ತಾರೆ.

ಆಯವ್ಯಯ ಭಾಷಣದಲ್ಲಿ ಮುಖ್ಯವಾಗಿರುವಂತಹ ಒಂದು ಅಂಶವೆಂದರೆ ನಗರ ಅಭಿವೃದ್ಧಿ ಅರ್ಥ ಮಂಡಲಿಯೊಂದನ್ನು ರಚಿಸಬೇಕೆಂದಿರುವುದು. ಈ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಣ್ಣಪುಟ್ಟ ಪುರಸಭೆಗಳು ಹಣಕಾಸಿನ ಒತ್ತಡದಿಂದ ಅಲ್ಲಿಯ ಪುರ ಜನರಿಗೆ ಸಾಮಾನ್ಯ ಸೌಲಭ್ಯಗಳನ್ನೂ ಸಹ ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಕ್ಕಳಿಗೆ ಬೇಕಾದಂಥ ಸ್ಕೂಲ್ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ತಮ್ಮ ಭಾಗದ ಹಣವನ್ನು ಕೊಡುವುದಕ್ಕೆ ಕೆಲವು ಮುನಿಸಿಪಾಲಿಟಿಗಳಿಗೆ ಸಾಧ್ಯವಾಗುತ್ತಿಲ್ಲ. ನಗರ ಅಭಿವೃದ್ಧಿ ಅರ್ಥ ಮಂಡಲಿಯೊಂದನ್ನು ರಚಿಸಿದರೆ, ಈ ಮಂಡಲಿಯ ಮೂಲಕ ದುಸ್ಥಿತಿಯಲ್ಲಿರುವ ಪುರಸಭೆಗಳು ಹಣ ಸಹಾಯವನ್ನು ಪಡೆದು ತಮ್ಮ ಅಭಿವೃದ್ಧಿ ಕಾರ್ಯವನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆ. ನಗರ ಅಭಿವೃದ್ಧಿ ಅರ್ಥ ಮಂಡಲಿಯನ್ನು ರಚಿಸಬೇಕೆಂದು ಸರ್ಕಾರದವರು ಉದ್ದೇಶಪಟ್ಟಿರುವುದನ್ನು ಮೆಚ್ಚಬೇಕಾದ ಅಂಶವೆಂದು ಹೇಳಬೇಕಾಗಿದೆ. ಅದೇ ಸರ್ಕಾರದವರು ಅರಣ್ಯ ಅಭಿವೃದ್ಧಿ ಕಾರ್ಪೋರೇಷನ್ ಮಾಡುತ್ತೇವೆಂದು ಸಹ ಹೇಳಿದ್ದಾರೆ. ಈ ರೀತಿಯ ಕಾರ್ಪೋರೇಷನ್‌ಗಳನ್ನು ರಚನೆ ಮಾಡಿದ ಮೇಲೆ ಆ ಕಾರ್ಪೋರೇಷನ್‌ಗಳಿಗೆ ಡಿಬೆಂಚರ್ ಸಾಲ ಎತ್ತುವುದಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ ಎಂಬ ವಿಷಯವನ್ನು ಸಹ ಹೇಳಲಾಗಿದೆ. ಎಂ.ಎಸ್.ಆರ್.ಟಿ.ಸಿ. ಅವರು ಎರಡು ಕೋಟಿ ರೂಪಾಯಿಗಳನ್ನು ಡಿಬೆಂಚರ್ ಸಾಲ ಎತ್ತುವುದಕ್ಕೆ ಹೊರಟಿದ್ದಾರೆ. ಎಂ.ಎಸ್.ಆರ್.ಟಿ.ಸಿ. ಅವರು 52 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದರೂ ಕೂಡ 1.9ರಷ್ಟು ಮಾತ್ರ ಲಾಭ ತೋರಿಸಿದ್ದಾರೆ. ತಾನೇ ಲಾಭ ಸಂಪಾದಿಸಿ ತಾನೂ ಉಪಯೋಗಿಸಿ ಇನ್‌ವೆಸ್ಟಿಂಗ್ ಕನ್‌ಸರ್ನ್ಸ್‌ಗಳಿಗೆ ಹಣ ಒದಗಿಸಬೇಕಾಗಿರುವ ಇಂತಹ ಒಂದು ಸಂಸ್ಥೆ ಮತ್ತೆ ಎರಡು ಕೋಟಿ ರೂಪಾಯಿಗಳ

(ಶ್ರೀ ಎನ್. ಎ. ಚನ್ನೇಗೌಡ)

ಡಿಬೆಂಚರ್ ಸಾಲ ಎತ್ತಿ ಆ ಹಣವನ್ನು ಸಹ ದುರ್ವ್ಯಯ ಮಾಡುವುದಕ್ಕೆ ಹೊರಟಿದೆ. ಈ ರೀತಿ ಸಾಲ ಎತ್ತಲು ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಕ್ಕೆ ನಾನು ಸರ್ಕಾರವನ್ನು ತೀವ್ರವಾಗಿ ಖಂಡಿಸುತ್ತೇನೆ.

ನಮ್ಮ ಆರ್ಥಿಕ ಮಂತ್ರಿಗಳು ಈ ಕಡೆ ಹೆಚ್ಚು ಗಮನವನ್ನು ಕೊಡಬೇಕು. ಈಗ ಸರ್ಕಾರದವರು ಎಂ.ಎಸ್.ಆರ್.ಟಿ.ಸಿ.ಗೆ ಸರ್ಕಾರದವರು ಏನು ಹಣವನ್ನು ಒದಗಿಸಿದ್ದಾರೆಯೋ ಅದಕ್ಕೆ ತಕ್ಕ ಪ್ರತಿಫಲವನ್ನು ಸರ್ಕಾರದವರು ಪಡೆಯುತ್ತಿದ್ದಾರೆಯೋ ? ಅಲ್ಲಿರತಕ್ಕ ದುರವಸ್ಥೆ ಮತ್ತು ಲೋಪ ದೋಷಗಳನ್ನು ಕಂಡುಹಿಡಿದು ಅದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ? ಎಂದು ಕೇಳುತ್ತೇನೆ. ಈ ಕಾರ್ಪೋರೇಷನ್‌ಗಳಿಗೆ ಸಂಬಂಧಪಟ್ಟ ಹಾಗೆ ನನ್ನ ಮಿತ್ರರಾದ ಶ್ರೀಮಾನ್ ಡಿ. ಎಂ. ಸಿದ್ಧಯ್ಯನವರು ಒಂದು ಸೂಚನೆಯನ್ನು ಕೊಟ್ಟರು. ಅದು ಏನೆಂದರೆ ಕಾರ್ಪೋರೇಷನ್‌ಗಳಿಗೆ ಅಧ್ಯಕ್ಷ ಸ್ಥಾನಕ್ಕೆ ನಾನ್ ಅಫಿಷಿಯಲ್ ಮೆಂಬರುಗಳನ್ನು ನೇಮಿಸಬೇಕು ಎಂದು. ನಾನು ಅದಕ್ಕೆ ತದ್ವಿರುದ್ಧವಾಗಿದ್ದೇನೆ. ಈ ದಿನ ದೇಶದ ಆಡಳಿತ ಪ್ರಜಾಪ್ರಭುತ್ವದ ಆಧಾರದ ಮೇಲೆ ನಡೆಯುತ್ತಿದೆ. ಇಂಥಾ ಸಂದರ್ಭದಲ್ಲಿ ಕಾರ್ಪೋರೇಷನ್‌ಗಳಿಗೆ ಅಧ್ಯಕ್ಷ ಸ್ಥಾನಗಳಿಗೆ ನಾನ್ ಅಫಿಷಿಯಲ್ ಮೆಂಬರುಗಳನ್ನು ನೇಮಿಸಿಕೊಂಡರೆ ಅಧಿಕಾರದಲ್ಲಿರುವ ಸರ್ಕಾರ ಅಲ್ಲಿ ತಮ್ಮ ಪಕ್ಷದ ಅಧಿಕಾರವನ್ನು ಬೆಳೆಸುವುದಕ್ಕೆ ಅನುಕೂಲವಾಗುತ್ತದೆ. ಅದರಿಂದ ಕಾರ್ಪೋರೇಷನ್ ಕೂಡ ಸಾಕಾದಷ್ಟು ದಕ್ಷತೆಯಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಕಾರಣ ಇಷ್ಟೆ. ಎಲ್ಲಾ ನಾನ್ ಅಫಿಷಿಯಲ್ ಸದಸ್ಯರು ತಜ್ಞರಾಗಿರುವುದಿಲ್ಲ ಕಾರ್ಪೋರೇಷನ್‌ಗಳನ್ನು ಒಂದು ಬಿಜಿನೆಸ್ ಆಗಿ ನಡೆಸಬೇಕು. ಅದು ರಾಜಕಾರಣಿಗಳ ಕೈಗೆ ಸಿಕ್ಕಿ ಹಾಳಾಗಬಾರದು. ಒಂದೊಂದು ಕ್ಷೇತ್ರದಲ್ಲಿ ಪರಿಣತರಾಗಿರುವವರನ್ನು ಮತ್ತು ಆ ಕಾರ್ಯದಲ್ಲಿ ಹೆಚ್ಚಿನ ಶಿಕ್ಷಣ ಹೊಂದಿರುವವರನ್ನು ಕಾರ್ಪೋರೇಷನ್ ಅಧ್ಯಕ್ಷರಾಗಿ ಮಾಡಬೇಕೆಂದು ನಾನು ಒತ್ತಾಯವಾಗಿ ಹೇಳಬಯಸುತ್ತೇನೆ. After all business management is a special science.

ಮಾನ್ಯ ಮಂತ್ರಿಗಳು ನಮಗೆ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದರ ಹೆಸರು ''Budget at a glance of the Union Government and State Government ಎಂದು. ಅದರಲ್ಲಿ 8 ರಾಜ್ಯಗಳಲ್ಲಿ ಖೋತಾ ಬಡ್ಜೆಟ್ ಮಂಡಿಸಿದ್ದಾರೆಂದು ಹೇಳಿದ್ದಾರೆ. ಮೈಸೂರು ರಾಜ್ಯ ಒಂದೇ ಅಲ್ಲ ಕೇಂದ್ರ ಸರ್ಕಾರ ಕೂಡ ಖೋತಾ ಬಡ್ಜೆಟ್ ಮಾಡಿದೆಯೆಂದು ನಮ್ಮ ರಾಜ್ಯದಲ್ಲಿಯೂ ಖೋತಾ ಬಡ್ಜೆಟ್ ಅನ್ನು ಮಂಡಿಸಿದ್ದು ತಪ್ಪಲ್ಲ ಎಂದು ಹೇಳುವ ಒಂದು ಉದ್ದೇಶದಿಂದ ಇದನ್ನು ಕೊಟ್ಟಿದ್ದಾರೆ. ಇದರಲ್ಲಿ 4 ರಾಜ್ಯಗಳು ಯಾವ ತೆರಿಗೆಯನ್ನೂ ವಿಧಿಸಿಲ್ಲ. ನಮ್ಮ ರಾಜ್ಯದವರು ತೆರಿಗೆಯನ್ನು ಹಾಕಿದ್ದಾರೆ. ನಮ್ಮ ರಾಜ್ಯದಲ್ಲಿ ಎಲೆಕ್ಟ್ರಿಸಿಟಿ ತೆರಿಗೆಯನ್ನು ಹಾಕಿದ್ದಾರೆ. ಪ್ರಾಪರ್ಟಿಟ್ಯಾಕ್ಸ್ ಸರ್‌ಚಾರ್ಜ್ ಹಾಕಿದ್ದಾರೆ. ಎಲೆಕ್ಟ್ರಿಸಿಟಿ ಟ್ಯಾಕ್ಸ್ ಹಾಕಿದರೆ ರೈತರಿಗೆ ಹೆಚ್ಚಿನ ಹೊರೆ ಆಗುತ್ತದೆ. ಪ್ರಾಪರ್ಟಿಟ್ಯಾಕ್ಸ್ ಹಾಕಿದರೆ ಸಣ್ಣ ಸಣ್ಣ ಪಟ್ಟಣಗಳಲ್ಲಿ ವಾಸಮಾಡತಕ್ಕವರಿಗೆ ಈ ಶಾಖ ತಟ್ಟುತ್ತದೆ. ಒಂದು ಮನೆಯನ್ನು ಇಟ್ಟುಕೊಂಡಿರತಕ್ಕವರಿಗೆ 50 ಪರ್ಸೆಂಟ್ ತೆರಿಗೆಯನ್ನು ಹೆಚ್ಚು ಹಾಕಿದರೆ ಅದು ಅವರಿಗೆ ಹೊರಲಾರದ ಹೊರೆಯಾಗುತ್ತೆ. ಆದ್ದರಿಂದ ಈ ಬಗ್ಗೆ ಪುನಃ ಯೋಚನೆ ಮಾಡಬೇಕು. ಹೆಚ್ಚು ಮನೆಗಳನ್ನು ಇಟ್ಟುಕೊಂಡಿದ್ದರೆ ಅಂಥವರಿಗೆ ಬೇಕಾದರೆ ಸರ್‌ಚಾರ್ಜ ಹಾಕಿ. ಖೋತಾ ಬಡ್ಜಟ್ ಬರುವುದಕ್ಕೆ ಸರ್ಕಾರದವರು ನಡೆಸತಕ್ಕ ಕೈಗಾರಿಕೆಗಳು ಕಾರಣ. ಯಾವ ಕೈಗಾರಿಕೆಗಳು ಹೆಚ್ಚು ಪ್ರಮಾಣದಲ್ಲಿ ಲಾಭವನ್ನು ಕೊಟ್ಟಿವೆ? ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಹೇಗಿರಬೇಕೆಂಬುದಕ್ಕೆ ಒಂದು ಸರಿಯಾದಂತಹ ನೀತಿ ಇರಬೇಕು. Public undertakings must usually reconcile the predetermined social objectives with operational and commercial standards. ಅಕೌಂಟಿಂಗ್ ರೀ ಕನ್‌ಸ್ಟ್ರೈಲ್ ಆಗಿರಬೇಕು. ಯಾವುದೇ ಒಂದು ರಾಜಕೀಯ ಕಾರಣದಿಂದ ರಾಷ್ಟ್ರೀಕರಣ ಮಾಡಿ ಪಬ್ಲಿಕ್ ಅಂಡರ್ ಟೇಕಿಂಕ್ಸ್ ಕೈಗೊಂಡರೆ ಅದರಿಂದ ಸರ್ಕಾರದ ಉದ್ದೇಶವನ್ನು ಸಾಧನೆ ಮಾಡಿದಹಾಗೆ ಆಗುವುದಿಲ್ಲ. ಆ ಉದ್ದಿಮೆಗಳಲ್ಲಿ ಸರ್ಕಾರ ಐಡಿಯಲ್ ಮ್ಯಾನೇಜರ್ ಆಗಿರಬೇಕು, ಐಡಿಯಲ್ ಎಂಪ್ಲಾಯರ್ ಆಗಿರಬೇಕು, ಐಡಿಯಲ್ ಸಪ್ಲೈರ್ ಆಗಿರಬೇಕು. ಹಾಗಿದ್ದರೆ ಅದರ ವ್ಯವಹಾರ ಸುಗಮವಾಗಿ ಹಣ ಗಳಿಸಿ ಬೇರೆ ಉದ್ದಿಮೆ ಮತ್ತು ಖರ್ಚುಗಳಿಗೆ ಹಣವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಎಂ. ಎಸ್. ಇ. ಬಿ. ಫೈನಾನ್‌ಷಿಯಲ್ ಅಡ್ವೈಜರನ್ನು ನೇಮಿಸುವುದು ಸರಿ ಎಂದು ಶ್ರೀಮಾನ್ ಘೋರ್ಪಡೆಯವರು ಹೇಳಿದರು. ಅದು ಸರಿಯಲ್ಲ. ಫೈನಾನ್‌ಷಿಯಲ್ ಅಡ್ವೈಜರನ್ನು ನೇಮಿಸುವ ತತ್ವವನ್ನು ಕೈಬಿಟ್ಟು ಸರಕಾರ ಭಾಗಿಯಾಗಿರುವ

ಪ್ರತಿ ಒಂದು ಉದ್ದಿಮೆಗೂ ಪರ್‌ಫಾರ್ಮೆನ್ಸ್ ಇವ್ಯಾಲ್ಯೂಯೇಷನ್ ಕೌನ್ಸಿಲ್ ಅನ್ನು ನೇಮಿಸಬೇಕು. ಈ ಕೌನ್ಸಿಲ್‌ಗಳು ಪ್ರತಿಯೊಂದು ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿಯೂ ಸಂಬಂಧಿಸಿದ ಅಪರೇಷನಲ್ ಸ್ಟ್ಯಾಂಡರ್ಡ್ಸ್, ಕ್ಯಾಪಿಟಲ್ ಕಾಸ್ಟ್ಸ್, ಟೈಮ್ ಷೆಡ್ಯೂಲ್ ಕ್ವಾಲಿಟಿ ಕಂಟ್ರೋಲ್ ಇವುಗಳ ಬಗ್ಗೆ ತೀವ್ರವಾದ ಗಮನವನ್ನು ಹರಿಸುವುದಕ್ಕೆ ಪರ್‌ಫಾರ್ಮೆನ್ಸ್ ಇವ್ಯಾಲ್ಯೂಯೇಟ್ ಮಾಡಿದರೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಲಾಭದಾಯಕವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ ಮಾನ್ಯ ಹಣಕಾಸಿನ ಮಂತ್ರಿಗಳು ಈ ದಿಶೆಯಲ್ಲಿ ತೀವ್ರ ಪ್ರಯತ್ನ ಮಾಡುತ್ತಾರೆ ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ದುಗ್ಗಪ್ಪ (ಬರಮಸಾಗರ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕ ನೀರಸವಾದ ಆಯವ್ಯಯ ಪಟ್ಟಿಯನ್ನು ವಿರೋಧಿಸಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಈ ಬಡ್ಜೆಟ್ ಪುಸ್ತಕದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ :—'' ಅಭಾವಕ್ಕಿದಿರಾದ ಸಮರದಲ್ಲಿ ಪ್ರತಿಯೊಂದು ಕಣ್ಣಿನಿಂದ ಪ್ರತಿಯೊಂದು ಕಂಬನಿಯನ್ನು ತೊಡೆಯುವುದರಲ್ಲಿ ಅವನಿಗೆ ಪ್ರಾಪ್ತವಾಗಲಲ್ಲ. ಎಂದು ಹೇಳಿದ್ದಾರೆ. ಇಂಥಾ ಧೋರಣೆಯನ್ನು ಈ ಪುಸ್ತಕದಲ್ಲಿಟ್ಟಿರತಕ್ಕ ಮಾನ್ಯ ಮಂತ್ರಿಗಳಿಗೆ ನಾನು ಹೇಳುತ್ತೇನೆ ಇಲ್ಲಿ ಪುಸ್ತಕದಲ್ಲಿ ಕಣ್ಣಿನಿಂದ ಕಂಬನಿಯನ್ನು ತೊಡೆಯುವುದಕ್ಕೆ ಹೋಗಬೇಡಿ, ಸಾಹಿತ್ಯದಲ್ಲಿ ಕಣ್ಣು ಒರೆಸುವುದಕ್ಕೆ ಹೋಗಬೇಡಿ. ನೀವು ನನ್ನ ಜೊತೆಯಲ್ಲಿ ಹಳ್ಳಿಗಾಡಿಗೆ ಬನ್ನಿ ಎಷ್ಟು ದಿವಸಗಳಿಂದ ಎಷ್ಟು ಜನ ಉಪವಾಸ ಮಾಡಿ ಕಣ್ಣೀರು ಹಾಕುತ್ತಿದ್ದಾರೆ ಎಂಬುದನ್ನು ತೋರಿಸುತ್ತೇನೆ. ಇಂಥಾ ಉದಾಹರಣೆಗಳು ಒಂದಲ್ಲ ಬೇಕಾದಷ್ಟು ನಿದರ್ಶನಗಳನ್ನು ನಾನು ಕೊಡುತ್ತೇನೆ. ಸ್ವಾಮಿ ಎಲೆಕ್ಷನ್ ಮ್ಯಾನಿಫ್ಯಾಸ್ಟೋದಲ್ಲಿ ಇವರು ಕಂದಾಯವನ್ನು ವಜಾ ಮಾಡುತ್ತೇವೆ ಎಂದು ಹೇಳಿದ್ದರು. ದೇವರ ವಿಕೋಪದಿಂದ ಮಳೆ ಆಗಲಿಲ್ಲ ಬೆಳೆಯಾಗಲಿಲ್ಲ. ಜನಗಳಿಗೆ ಕಷ್ಟವುಂಟಾಯಿತು. ದೇಶದಲ್ಲಿ ಬರಗಾಲ ಬಂತು. ಆಗ ಕಂದಾಯವನ್ನು ವಸೂಲು ಮಾಡದಂತೆ ನಿಲ್ಲಿಸಿ ಎಂದು ಹೇಳಿದ್ದರಿಂದ ಎರಡು ವರ್ಷ ಹಾಗೂ ಹೀಗೂ ಮಾಡಿಕೊಂಡು ತಳ್ಳಿಕೊಂಡು ಬಂದರು. ಇವರು ಚುನಾವಣೆಯ ಕಾಲದಲ್ಲಿ ಹೇಳಿದಂತೆ ನಡೆಸಿಕೊಡಲಲ್ಲ. ಕಂದಾಯವನ್ನು ವಜಾ ಮಾಡಲಿಲ್ಲ. ಅನೇಕ ಬಾರಿ ಅನೇಕರು ಅನೇಕ ವಿಧದಲ್ಲಿ ಒತ್ತಾಯ ಮಾಡಿದರೂ ಕೂಡ ಅದು ಇವರ ಕಿವಿಗೆ ಬೀಳಲೇ ಇಲ್ಲ. ಮೂರು ವರ್ಷದ ಬಾಕಿಯನ್ನು ಚಾಲ್ತಿ ಸಾಲಿನಲ್ಲಿ 4 ವರ್ಷಗಳ ಕಂದಾಯವನ್ನು ಒಂದೇಸಾರಿ ವಸೂಲು ಮಾಡುವುದಕ್ಕೆ ಆರ್ಡರ್ ಕೊಟ್ಟಿದಾರೆ. ಈಗ ಅಧಿಕಾರಿಗಳು ಆ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಇವೊತ್ತಿನ ದಿವಸ ಚಿತ್ರದುರ್ಗ ಜಿಲ್ಲೆಗೆ ಬನ್ನಿ ಜನ ಎಷ್ಟೊಂದು ಕಷ್ಟದಿಂದ ತೊಳಲುತ್ತಿದ್ದಾರೆ ಎಂಬುದನ್ನು ನಾನು ನಿಮಗೆ ತೋರಿಸುತ್ತೇನೆ. ಅಲ್ಲಿ ಜನಗಳು ಉಪವಾಸದಿಂದ ಕಷ್ಟಪಡುತ್ತಿರುವಾಗ, ಕಂದಾಯವನ್ನು ಕೊಡುವುದಕ್ಕೆ ಕಣ್ಣೀರು ಹಾಕುತ್ತಾ ಇರುವಾಗ ಇವರು ಸಾಹಿತ್ಯದಲ್ಲಿ ಕಣ್ಣಿನ ಕಂಬನಿಯನ್ನು ಒರೆಸುವುದಕ್ಕೆ ಹೋಗುವುದು ಸರಿಯೇ? ಈ ವಿಷಯವನ್ನು ಇಲ್ಲಿಗೇ ಬಿಟ್ಟು ಇನ್ನು ಬಡ್ಜೆಟ್ಟಿನ ವಿಷಯದಲ್ಲಿ ಪ್ರಾಸ್ತಾವಿಕವಾಗಿ ನಾನು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ನಾನು ಅಂಕಿ ಅಂಶಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಶ್ರೀಮಾನ್ ಘೋರ್ಪಡೆಯವರು ಅದನ್ನೆಲ್ಲಾ ಸವಿಸ್ತಾರವಾಗಿ ಹೇಳಿದ್ದಾರೆ. ನಾನು ಒಂದು ವಿಷಯವನ್ನು ಹೇಳುತ್ತೇನೆ. ಇವರು ಕೇಂದ್ರ ಸರ್ಕಾರದಿಂದ 424 ಕೋಟಿ ರೂಪಾಯಿಗಳನ್ನು ಸಾಲ ತಂದಿದ್ದಾರೆ. ಆದರೆ ಇವರು ವಾಪಸ್ಸು ಕೊಟ್ಟಿರುವುದು 141 ಕೋಟಿ ರೂಪಾಯಿಗಳು ಮಾತ್ರ. ಇನ್ನೂ ಕೊಡಬೇಕಾದ್ದು 283 ಕೋಟಿ ರೂಪಾಯಿಗಳು ಬಾಕಿ ಉಳಿದಿದೆ. ಇವರು ಸಾಲವನ್ನು ತೆಗೆದುಕೊಂಡು ಯೋಜನೆಗಳನ್ನು ಮಾಡುತ್ತಿದ್ದಾರೆ. ಶ್ರೀಮಾನ್ ಬದರೀನಾರಾಯಣ ಅವರು ಹೇಳುತ್ತಾರೆ ಸಾಲ ಮಾಡಿ ತುಪ್ಪ ತಿನ್ನಬೇಕು ಎಂದು. ಹೀಗೆ ಇವರು ಕೇಂದ್ರ ಸರ್ಕಾರದಿಂದ ಹಣವನ್ನು ಸಾಲ ತೆಗೆದುಕೊಂಡು ಬಂದು ಅವನ್ನು ಸದ್ವಿನಿಯೋಗ ಮಾಡದೆ ಮನಸ್ಸಿಗೆ ಬಂದ ಹಾಗೆ ಖರ್ಚು ಮಾಡಿದ್ದಾರೆ. ಕೋ-ಆಪರೇಟೀವ್ ಸೊಸೈಟಿಗೆ ಸುಮಾರು 240 ಕೋಟಿ ರೂಪಾಯಿಗಳನ್ನು ಸಾಲ ಕೊಟ್ಟಿದ್ದಾರೆ. ಇವರು ಕೊ ಆಪರೇಟೀವ್ ಸೊಸೈಟಿಗಳಿಗೆ ಹಣವನ್ನು ಸಾಲ ಕೊಟ್ಟಿರುವುದರಿಂದ ನೆಟ್ ಲಾಸ್ 3 ಕೋಟಿ ರೂಪಾಯಿಗಳು ಬಂದಿದೆ. ಈ ಕೊರತೆಯ ಬಜೆಟನ್ನು ಇಡುವಾಗ ಬಹಳ ವಿಚಕ್ಷಣೆಯಿಂದ ಇರಬೇಕು. ಸರ್ಕಾರದವರು ಒಂದು ಸಂಪನ್ಮೂಲಗಳ ಸಮಿತಿಯನ್ನು ಮಾಡಿದರು. ಅವರು 7 ಕೋಟಿ ರೂಪಾಯಿಯನ್ನು ಬಜೆಟಲ್ಲಿ ತೋರಿಸಿ, ನೀರಾವರಿ ಯೋಜನೆಗಳಿಗೆ ಹಾಕಿ ಎಂದು ಹೇಳಿದರು. ಅದರೆ ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಆ ಮೇಲೆ ದುಂದು ವೆಚ್ಚ ನಿಲ್ಲಿಸಬೇಕೆಂದು ಹೇಳಿದ್ದಾರೆ. ಹಿಂದೆ ಆರ್ಥಿಕ ಸಚಿವರು ಆಯವ್ಯಯವನ್ನು ಮಂಡಿಸುತ್ತಾ ಈ ದುಂದು ವೆಚ್ಚವನ್ನು ನಿಲ್ಲಿಸುವ

(ಶ್ರೀ ಜಿ. ದುಗ್ಗಪ್ಪ)

ಸರ್ವ ಪ್ರಯತ್ನ ಮಾಡುತ್ತೇವೆಂದು ಈ ಮನೆಯ ಮಾನ್ಯ ಸದಸ್ಯರಿಗೂ ಕೇಂದ್ರ ಸರ್ಕಾರದವರಿಗೂ ಭರವಸೆ ಕೊಡಬಲ್ಲೆ ಎಂದು ಹೇಳಿದ್ದಾರೆ. ಆದರೆ ಈಗ ಇವರು ಏನು ಮಾಡುತ್ತಿದ್ದಾರೆ? ಸರ್ಕಾರದ ಹಣವನ್ನು ಲಾಭದಾಯಕವಲ್ಲದ ಸಂಸ್ಥೆಗಳಿಗೆ ತೊಡಗಿಸಿದ್ದಾರೆ. ಸಂಪನ್ಮೂಲ ಸಮಿತಿಯವರು ಹೇಗೆ ಮಾಡಬೇಕೆಂದು ಹೇಳಿದ್ದಾರೋ, ಆ ರೀತಿ ಮಾಡುವುದಕ್ಕೆ ಒಪ್ಪಿಕೊಳ್ಳಿ. ತುಪ್ಪ ಸಕ್ಕರೆ ತಿನ್ನುವ ಸೊಸೈಟಿಗಳಿಗೆ ಸಾಲ ಕೊಡಬೇಡಿ. ಅದೇ ರೀತಿ ಹಿಂದೆ ಎ ಜಿ ಆರ್ ಕಮಿಟಿಯವರೂ ಒಂದು ಸಲಹೆ ಮಾಡಿದ್ದಾರೆ. ನಿಮ್ಮ ಡಿಪ್ಯೂಟಿ ಮಿನಿಸ್ಟರ್ಸ್‌ಗೆ ಕೆಲಸವಿಲ್ಲ, ಅನೇಕ ಬೋರ್ಡುಗಳಿಗೆ ಬೇರೆ ನಾನ್ ಅಫಿಶಿಯಲ್ಸ್‌ನ್ನು ಹಾಕಬೇಡಿ, ಆ ಕೆಲಸವನ್ನು ಇವರಿಗೆ ಕೊಡಿ ಎಂದು ಹೇಳಿದ್ದಾರೆ. ಇವತ್ತು ಟ್ರಸ್ಟ್ ಬೋರ್ಡಿಗೆ ನಾನ್ ಅಫಿಶಿಯಲ್ ಚೇರ್‌ಮೇನ್ ತಂದಿದ್ದಾರೆ; ಅದೇ ರೀತಿ ವೇರ್‌ಹೌಸಿಗೆ, ಆಗ್ರೋ ಇಂಡಸ್ಟ್ರೀಸ್‌ಗೆ ಹೀಗೆಯೇ ಮಾಡಿದ್ದಾರೆ. ಇವತ್ತು ನೀವು ಹೇಳುವುದು ಒಂದು, ಮಾಡುವುದು ಇನ್ನೊಂದು. ಕಳೆದ ವರ್ಷ ದುಂದುವೆಚ್ಚ ಮಾಡುವುದಿಲ್ಲವೆಂದು ಭಾಷಣದಲ್ಲಿ ಹೇಳುವುದು, ಈ ವರ್ಷ ಅದಕ್ಕೆ ವಿರುದ್ಧವಾಗಿ ಮಾಡುವುದು.

ಇನ್ನು ಕೋಆಪರೇಟಿವ್ ಸೊಸೈಟಿಗಳ ಬಗ್ಗೆ ಹೇಳುತ್ತೇನೆ. ಇವತ್ತು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಅವ್ಯವಹಾರಿಕ ರೀತಿಯಲ್ಲಿ ಕೆಲಸಗಳು ನಡೆಯುತ್ತಿವೆ. ಅವ್ಯವಹಾರಿಕವಾಗಿ ಪ್ರತೀ ದಿವಸ ಒಂದು ದಿವಸಕ್ಕೆ 8 ಸಾವಿರ ರೂಪಾಯಿ ಬಡ್ಡಿ ಕೊಡುತ್ತಿದ್ದಾರೆ. ಈ ರೀತಿಯಾದರೆ ಹೇಗೆ? ಇವರಿಗೆ ಯಾವುದು ಅರ್ಜೆಂಟ್ ಮಾಡಬೇಕು, ಯಾವುದು ನಿಧಾನ ಮಾಡಬೇಕೆಂಬುದು ಗೊತ್ತಿಲ್ಲ. ದಾವಣಗೆರೆ ತಾಲ್ಲೂಕಿನಲ್ಲಿ ಭದ್ರಾ ರೈಟ್ ಬ್ಯಾಂಕ್ ಚ್ಯಾನಲ್‌ನ ಪ್ರದೇಶದಲ್ಲಿ ಇವೊತ್ತಿನ ದಿವಸ ಮೂರು ಎಕರೆ ಬ್ರೀಚ್ ಆಗಿದೆ. ಸಾವಿರಾರು ಎಕರೆಗೆ ನೀರೇ ಇಲ್ಲ. ನೀರು ಇಲ್ಲದಿರುವುದರಿಂದ ಬೆಳೆ ತೆಗೆಯುವುದಕ್ಕಾಗುವುದಿಲ್ಲ. ಇದರಿಂದ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ. ಮತ್ತು ನಮ್ಮ ಆಹಾರ ಸಂಪತ್ತು ಕಡಿಮೆಯಾಗುತ್ತದೆ. ಈ ಕೆಲಸವನ್ನು ಮಾಡಿರಿ ಎಂದರೆ, ನಮ್ಮಲ್ಲಿ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಇದಕ್ಕೆ ಯಾವ ಗಮನವನ್ನೂ ಸಹ ಕೊಡುತ್ತಾ ಇಲ್ಲ. ಇದಕ್ಕೆ ಇವರಿಗೆ ಕಿವಿ ಇಲ್ಲ, ಕಣ್ಣು ಇಲ್ಲ, ಹೆಚ್ಚಾಗಿ ಮಾಡುವ ಮನಸ್ಸು ಇಲ್ಲ. ಆದರೆ, ಇವರಿಗೆ ಬೇಕಾದವರಿಗೆ ಏನಾದರೂ ಮಾಡಬೇಕಾದರೆ, ಬಜೆಟಿನಲ್ಲಿ ಅದು ಸೇರಲಿ, ಸೇರದಿರಲಿ, ಅದಕ್ಕೆ ಎಸ್ಟಿಮೇಟ್ ಆಗಿರಲಿ, ಆಗದೆ ಇರಲಿ, ಇವರು ಟೂರ್ ಹೋಗುವಾಗ ಯಾರಾದರೂ ಒಂದು ಕೆರೆ ಮಾಡಿ ಎಂದು ಹೇಳಿದರೆ ಸಾಕು, ಅದನ್ನು ಮಾಡಿಬಿಡುತ್ತಾರೆ. ಆದರೆ, ಇವರಿಗೆ ಬೇಡವಾದವರು ಏನು ಹೇಳಿದರೂ, ಅದು ಯೋಗ್ಯವಾಗಿದ್ದರೂ, ಮಾಡುವುದಿಲ್ಲ. ಇಂಥ ನೀತಿ ಇವರದ್ದು. ಇವರಿಗೆ ಬೇಕಾದವರು ಯಾರಾದರೂ ಒಂದು ಅರ್ಜಿ ಕೊಟ್ಟು ಆ ಕೆರೆ ಕೊಡಬೇಡಿ ಅಂದರೆ ಸಾಕು, ಕೊಟ್ಟ ಕೆರೆಯನ್ನು ನಿಲ್ಲಿಸಿ ಬಿಡುತ್ತಾರೆ. ಆದರೆ ಇವರಿಗೆ ಬೇಕಾಗಿದ್ದರೆ, ಅದಕ್ಕೆ ಪ್ಲಾನ್ ಇಲ್ಲ, ಎಸ್ಟಿಮೇಟ್ ಇಲ್ಲ, ಸ್ಯಾಂಕ್ಷನ್ ಇಲ್ಲ, ಆದರೂ ಮಾಡುತ್ತಾರೆ. ಯಾರಾದರೂ ಅಲ್ಲಿ ಒಳ್ಳೆಯ ಒಬ್ಬ ಇಂಜಿನಿಯರ್ ಇದ್ದರೆ, ಅವನು ನ್ಯಾಯವಾದುದನ್ನು ಹೇಳಿದರೆ, ಅವನಿಗೆ ತೊಂದರೆ ಕೊಡುತ್ತಾರೆ. ಇಂಥ ನಿಷ್ಠೆಯ ಅಧಿಕಾರಿಗಳು ನಿಮಗೆ ಕಣ್ಣಿಗೆ ಮುಳ್ಳಾಗಿದ್ದಾರೆ. ಇಂಥದನ್ನು ಅವ್ಯವಹಾರಿಕವಾಗಿ ಮಾಡಬೇಡಿ. ನಿಮ್ಮ ಮೇಲೆ ದೇಶದ ಜನತೆ ನಂಬಿಕೆಯನ್ನು ಇಟ್ಟಿದ್ದಾರೆ ಅದಕ್ಕೋಸ್ಕರ ಇದನ್ನು ನ್ಯಾಯವಾಗಿ ಖರ್ಚು ಮಾಡಿ, ಅದಕ್ಕೆ ನಮ್ಮ ಬೆಂಬಲ ಇದೆ. ನಾವು ಇಲ್ಲಿ ಟೀಕೆ ಮಾಡುವುದಕ್ಕೆ ಮಾತ್ರ ಇರುವುದಲ್ಲ. ಆದರೆ ಇಂಥ ಅವ್ಯವಹಾರಿಕ ರೀತಿಯಲ್ಲಿ ಯಾವುದನ್ನೂ ಮಾಡಬೇಡಿ. ಇನ್ನು ಹಿರಿಯೂರು ತಾಲೂಕಿನಲ್ಲಿ ಗಾಯಿತ್ರಿ ಜಲಾಶಯ ಇದೆ. ಇದನ್ನು ಉತಾವಣೆ ಮಾಡಿದರೆ 5 ಸಾವಿರ ಎಕರೆ ನೀರಾವರಿಯಾಗುತ್ತದೆ. ಇದು ಪೂರ್ತಿಯಾಗಿ ಡೆವಲಪ್ ಆಗಿಲ್ಲ. ಅದನ್ನು ಮಾಡಬೇಕೆಂದು ತಾಲೂಕು ಬೋರ್ಡಿನವರು ಒಂದು ಮನವಿಯನ್ನು ಮಾಡಿದ್ದಾರೆ. ಅದಕ್ಕೆ ಉತ್ತರ ಈ ರೀತಿ ಹೇಳಿದ್ದಾರೆ.

> "We shall watch the behaviour of the tank for some time more. We cannot take any decision to increase the capacity of the tank."

ಆದರೆ ನಿಮ್ಮ ಪಕ್ಷದ ಮಾನ್ಯ ಸದಸ್ಯರು ನಿಮ್ಮನ್ನು ಕೇಳಿದರೆ, ಅಲ್ಲಿ ಕೆರೆ ಕೊಡಬೇಕೆಂದು ಹೇಳುತ್ತೀರಿ, ಇದೇ ಕೆರೆಗೆ ನಿಮ್ಮ ಪಕ್ಷದವರು ಕೇಳಿದಾಗ ಅದನ್ನು ಇಂಜಿನಿಯರಿಗೆ ಕಳಿಸಿದರು. ಅದಕ್ಕೆ ಇಂಜಿನಿಯರು ಹೇಳಿದರು, " ಅದು ಸಾಧ್ಯವಿಲ್ಲ " ಎಂದು. ಅದಕ್ಕೆ ಇವರು, ಅವೆಲ್ಲ ಬೇಡರಿ. ನಮಗೆ ಕೆರೆ ಬೇಕು, ಎಂದು ಹೇಳಿ, ಅದಕ್ಕೆ ಏನು ಬೇಕೋ, ಅದು ಎಲ್ಲಾ ಮಾಡಿ ಮಾನ್ಯ ನಿಜಲಿಂಗಪ್ಪನವರನ್ನು ಕರಕೊಂಡು ಹೋಗಿ ಅಸ್ತಿಭಾರ ಹಾಕಿಸಿದರು. ಮತ್ತು ಮೈಸೂರು

ಸರ್ಕಾರ ಎಂದು ನೀವೇ ಪ್ರಿಂಟ್ ಮಾಡಿಸಿ, ಎಂದು ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಹೇಳಿದ ಪ್ರಕಾರ, ಅವರು ಇನ್‌ವಿಟೇಶನ್ ಪ್ರಿಂಟ್ ಮಾಡಿಸಿದರು. ನನಗೂ ಸ್ಪೆಶಲ್ ಇನ್‌ವಿಟೇಶನ್, ನೀವು ಬರಬೇಕೆಂದು ಬಂತು. ಈ ರೀತಿ ತಾಲ್ಲೂಕು ಬೋರ್ಡಿನವರು ಕೇಳಿದರೆ, ನಿಮಗೆ ಕೊಡುವುದಕ್ಕಾಗುವುದಿಲ್ಲ, ವೀ ಹ್ಯಾವ್ ಟು ವಾಚ್ ದಿ ಬಿಹೇವಿಯರ್ ಎಂದು ಹೇಳಿ, ನಿಮ್ಮ ಪಕ್ಷದವರು ಕೇಳಿದರೆ, ಕೊಡಬೇಕೆಂದು ಮಾಡಿದ್ದೀರಲ್ಲ, ಇದು ಯಾವ ನ್ಯಾಯ ? ಕೊನೆಗೆ ರೈತರಿಗೆ ಇರುವ ಮಾರ್ಗ ಒಂದೇ ಅಂದರೆ, ಹೈಕೋರ್ಟಿಗೆ ಹೋಗುವುದು.

ಇನ್ನು ರಾಜ್ಯದ ಆಡಳಿತ ಸುವ್ಯವಸಿತವಾದ ರೀತಿಯಲ್ಲಿ ಇಲ್ಲವೆಂಬುದನ್ನು ಹೇಳುತ್ತೇನೆ, ಬಳ್ಳಾರಿ ಜಿಲ್ಲೆಯಲ್ಲಿ ಕೂಡ್ಲಿಗಿ ತಾಲೂಕಿನಲ್ಲಿ ಉಜ್ಜನಿ ಎಂಬ ಒಂದು ಗ್ರಾಮ ಇದೆ. ಅಲ್ಲಿ ಮರುಳಸಿದ್ದೇಶ್ವರವೆಂಬ ದೇವಸ್ಥಾನ ಇದೆ. ಅಲ್ಲಿಗೆ 21ನೇ ತಾರೀಕಿನಂದು ಉತ್ಸವದಲ್ಲಿ ಭಾಗ ವಹಿಸಲು 10 ಬಸ್ಸುಗಳಲ್ಲಿ ಚಿಕ್ಕಮಗಳೂರು ಮತ್ತು ಶಿವಮೊಗ್ಗದ ಯಾತ್ರಿಕರು ಹೋದರು ಹೋಗುವಾಗ ದಾರಿಯಲ್ಲಿ ದೇವರಿಗೆ ಮಂಗಳಾರತಿ ಮಾಡಿಸಿಕೊಂಡು ಮುಂದೆ ಹೋಗುವ ಎಂದು ಹೊರಟರೆ, ಅಲ್ಲಿರತಕ್ಕ 200–300 ಜನ ಗೂಂಡಾಗಳು ದೇವಸ್ಥಾನಕ್ಕೆ ನುಗ್ಗಿ ಅಲ್ಲಿ ಹೋಗಿದ್ದ ಹೆಣ್ಣು, ಗಂಡುಗಳನ್ನು ಥಳಿಸಿ, ಹೆಣ್ಣುಮಕ್ಕಳ ಮಾನಭಂಗ ಮಾಡಿದ್ದಾರೆ, ಇವರು ಯಾರು. ಎಲ್ಲಿಂದ ಬಂದರು, ಮತ್ತು ಇವರು ದೇವಸ್ಥಾನಕ್ಕೆ ಹೋಗಿದ್ದು ತಪ್ಪೇ ? ಈ ರೀತಿ ಅವರನ್ನು ಮ್ಯಾನ್ ಹ್ಯಾಂಡಲ್ ಮಾಡಿದ್ದಾರೆ. ಇಷ್ಟು ದೌರ್ಜನ್ಯವನ್ನು ಮಾಡುವುದಕ್ಕೆ ಅವರಿಗೆ ಹೇಗೆ ಧೈರ್ಯ ಬಂತು ? ಯಾರು ಇದಕ್ಕೆ ಪ್ರೋತ್ಸಾಹ ಕೊಟ್ಟವರು ? ಇದನ್ನು ಪೋಲೀಸಿನವರು ಯಾವ ರೀತಿ ವಿಚಾರಣೆ ಮಾಡಿದರು ? ಇದರಿಂದ ದೇಶದಲ್ಲಿ ಒಂದು ರೀತಿಯ ಅರಾಜಕತೆಯುಂ ಟಾಗಿದೆ. ಇವರು ಕಾನೂನು ವ್ಯವಸ್ಥೆ ಸರಿಯಾಗಿದೆ ಎಂದು ಹೇಳಿದ್ದಾರೆ. ನಾನಾದರೂ ಚ್ಯಾಲೆಂಜ್ ಮಾಡಿ ಹೇಳುತ್ತೇನೆ. ಯಾವ ಕಾರಣಕ್ಕಾಗಿ ಈ ಯಾತ್ರಾರ್ಥಿಗಳನ್ನು ಮ್ಯಾನ್ ಹ್ಯಾಂಡಲ್ ಮಾಡಿದರು ? ಒದ್ದು ಓಡಿಸಿದರು ? ಅವರ ಪ್ರಾಣರಕ್ಷಣೆಗೋಸ್ಕರ ಆ 10 ಬಸ್ಸಿನ ಜನರು ಓಡಿ ಹೋಗಿದ್ದಾರೆ. ಇವತ್ತು ದೇಶದಲ್ಲಿ ನಮ್ಮ ವರ್ಗದ ಜನರ ಪ್ರಾಣ, ಮಾನ ಉಳಿಯುತ್ತಾ ಇಲ್ಲ. ಅದೇ ರೀತಿ ಚಿತ್ರದುರ್ಗದ ಸುತ್ತುಮುತ್ತಲೂ ಇರುವ ತೋಟಗಳು ಏನಾಗಿವೆಯೆಂದು ಕೇಳಿ. ಇದನ್ನು ಪೋಲೀಸರಿಗೆ ಹೇಳಿದರೆ, ಮರುದಿನ ನಮ್ಮ ತೋಟದ ಎಳನೀರು ಯಾವುದೂ ಉಳಿಯುವುದಿಲ್ಲ. ಹಿರಿಯೂರು ತಾಲೂಕಿನಲ್ಲಿಯೂ ದರೋಡೆಯಾಗಿ, ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ. ಅದೇ ರೀತಿ ಸಿರಾ ತಾಲೂಕಿನಲ್ಲಿ ಆಯ್ತು, ಚಿತ್ರದುರ್ಗದಲ್ಲಿ ಆಯ್ತು ಮತ್ತು ಕೂಡ್ಲಿಗಿಯಲ್ಲೂ ಆಯ್ತು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಕಾಗದ ಬರೆದಿದ್ದೇನೆ. ನನ್ನ ಮನೆಯ ಎದುರಿಗೆ ಇರುವ ಒಂದು ಮನೆಗೂ ನುಗ್ಗಿ ಲೂಟಿ ಮಾಡಿದ್ದಾರೆ. ನಾನು ಬರೆದುದಕ್ಕೆ, ಇದರಲ್ಲಿ ತನಿಖೆ ಮಾಡಿ ಅಪರಾಧಿಯನ್ನು ಹಿಡಿಯಲು. ನೀವು ಪೋಲೀಸರಿಗೆ ಸಹಾಯ ಕೊಡಿ, ಕುಮ್ಮಕ್ಕು ಕೊಡಿ ಎಂದು ಹೇಳುತ್ತಿದ್ದಾರೆ. ಆದರೂ ಇದರ ಬಗ್ಗೆ ಇವತ್ತಿನವರೆಗೂ ಏನೂ ಮಾಡಿಲ್ಲ. ನಾನಾದರೂ ಹೇಳುತ್ತೇನೆ, ಕೊನೆಗೆ ಯೋಚನೆ ಮಾಡಿ ಕೇಂದ್ರಸರ್ಕಾರದವರನ್ನು ಕೇಳಿ ಅವರ ರಿಸರ್ವ ಪೋಲೀಸರನ್ನಾದರೂ ಅಲ್ಲಿ ಇಡಬೇಕು. ಏಕೆಂದರೆ ರಾಜ್ಯದ ಪೋಲೀಸರಿಗೆ ಅದನ್ನು ಮಾಡಲು ಸಾಧ್ಯವಾಗುವುದಿಲ್ಲ. ಏಕೆ ಸಾಧ್ಯವಿಲ್ಲವೆಂದರೆ ಇಲ್ಲಿಯ ರಾಜಕೀಯ ಮುಖಂಡರ ಇಂಟರ್‌ಫಿಯರೆನ್ಸ್ ಬಹಳ ಇದೆ. ಒಂದು ಸ್ಕೂಲ್ ಕೊಡಿ, ಒಂದು ಬಾವಿ ಕೊಡಿ, ಒಂದು ರಸ್ತೆ ಕೊಡಿ-ಎಂದು ಹೇಳುವುದಕ್ಕೆಲ್ಲ ಇವರು ಇಂಟರ್‌ಫಿಯರ್ ಮಾಡಲಿ. ಆದರೆ, ಪೋಲೀಸ್ ಇಲಾಖೆಯ ಇಂಥ ವ್ಯವಹಾರಗಳಿಗೆ ಇಂಟರ್ ಫಿಯರ್ ಮಾಡಬೇಡಿ.

6-00 P.M.

ಇಂಟರ್‌ಫಿಯರ್ ಮಾಡಿದರೆ ಇದೇ ಅವರ ಅಳಿವಿಗೆ ಮೂಲ ಎಂದು ನಾನು ಹೇಳುತ್ತೇನೆ. ಅದು ಇವತ್ತು ಪ್ರಾರಂಭವಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅವರಿಂದ ಮರ್ಯಾದೆ ಇಲ್ಲ. ಇವರ ಬೆಂಬಲಿಗರಿಗೆ ಮತ್ತು ಪ್ರೋತ್ಸಾಹಕರಿಗೆ ಅಲ್ಲಿನ ಪೋಲೀಸ್ ಅಧಿಕಾರಿಗಳು ಕೈಗೊಂಬೆಗಳಾಗಿ ದ್ದಾರೆ. ಯಾರಾದರೂ ದೊಡ್ಡ ಮನುಷ್ಯರು ಮಂತ್ರಿಗಳ ಹಿಂದೆ ಓಡಾಡಿಕೊಂಡು ಅವರ ಪಕ್ಕ ದಲ್ಲಿಯೇ ಇದ್ದುಕೊಂಡು ಯಾವಾಗಲಾದರೂ ಒಂದು ಸಾರಿ ಅವರ ಮನೆಗೆ ಊಟಕ್ಕೆ ಹೋಗಿ ದ್ದರೆ ಸಾಕು. ಅಂತಹ ದೊಡ್ಡಮನುಷ್ಯರಿಗೆ ಒಬ್ಲೈಜ್ ಮಾಡಬೇಕು. ಇಂತಹ ಅನೇಕ ವಿಚಾರ ಗಳ ಬಗ್ಗೆ ಮಾನ್ಯ ಶ್ರೀ ಹೊಸಾಳಿಯವರಿಗೂ ಫೋನ್ ಮಾಡಿದೆ ಕೂಡಲೇ ಅವರೇ ಬಂದು ಅನೇಕ ಸ್ಥಳಗಳನ್ನು ಪರಿಶೀಲನೆ ಮಾಡಿದ್ದಾರೆ. ಮಾನ್ಯ ಶ್ರೀ ಸಿದ್ದವೀರಪ್ಪನವರು ಸಹ ನನಗೆ ಫೋನ್ ಮಾಡಿದ್ದರೆಂದು ಅವರು ಹೇಳಿದರು. ಪರಿಶೀಲನೆಮಾಡುವುದು ಬಹಳ ಕಷ್ಟವೆಂದೂ ಸಹ ನಾನು

(ಶ್ರೀ ಜಿ. ದುಗ್ಗಪ್ಪ)

ಕೇಳಿದ್ದೇನೆ. ಈಗ ಸರ್ಕಾರದಲ್ಲಿ ಪೋಲೀಸ್ ಅಧಿಕಾರಿಗಳ ಕಾಲವಾಗಿದೆ. ಆ ಅಧಿಕಾರದಲ್ಲಿರುವವರಿಗೆ ಸ್ವಲ್ಪ ಮನ್ನಣೆ ಕೊಡಬೇಕಾಗುತ್ತದೆ. ಕೊಡೋಣ ಇಲ್ಲದಿದ್ದರೆ ಬಹಳ ಕಷ್ಟ. ಬೇರೆ ಇಲಾಖೆಗಳಲ್ಲಿ ಒಂದು ತರಹ. ಆದರೆ ಪೋಲೀಸ್ ಇಲಾಖೆಯಲ್ಲಿ ಮಾತ್ರ ಬೇರೆಯವರಿಗೆ ಕೈವಾಡ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಅಲ್ಲಿ ಇನತ್ತಿನವರೆಗೆ ಲಾ ಅಂಡ್ ಆರ್ಡರ್ ಹಾಗೆಯೇ ಇದೆ. ನನಗೆ ಸಾಕಷ್ಟು ಅವಕಾಶವಿಲ್ಲದೇ ಇರುವುದರಿಂದ, ಇನ್ನೂ ಅನೇಕ ವಿಚಾರಗಳನ್ನು ಹೇಳುವುದಿದ್ದರೂ ಸಹ, ಸಂಬಂಧಪಟ್ಟ ಬೇಡಿಕೆಗಳ ಚರ್ಚೆ ಕಾಲದಲ್ಲಿ ಇತರ ವಿಷಯಗಳನ್ನು ಹೇಳುತ್ತೇನೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಇನ್ನೂ ಅನೇಕ ಮಾನ್ಯ ಸದಸ್ಯರು ಮಾತನಾಡಬೇಕಾಗಿರುವುದರಿಂದ, ಈಗ ಒಂದು ತಾಸು ಅವಧಿಯನ್ನು ಜಾಸ್ತಿಕೊಟ್ಟರೆ ಬಹಳ ಚೆನ್ನಾಗಿರುತ್ತದೆ.

Mr. SPEAKER.—I extend the time by one hour.

ಶ್ರೀ ಬಿ. ಭಾಸ್ಕರಶೆಟ್ಟಿ.—ತಾವು ಈಗ ಟೈಂ ಎಕ್ಸ್‌ಟೆಂಡ್ ಮಾಡುತ್ತೇನೆಂದು ಹೇಳಿದರೆ ನಮ್ಮ ಪಕ್ಷದ ಸದಸ್ಯರು ಇಲ್ಲಿ ಉಳಿಯುವುದಿಲ್ಲ. 6 ಗಂಟೆಗೆ ಈ ಸಭೆ ಮುಗಿಯುತ್ತದೆಂದು ಅನೇಕ ಸದಸ್ಯರು ಹೊರಟುಹೋಗಿದ್ದಾರೆ. ಆದ್ದರಿಂದ ನಮ್ಮ ಪಕ್ಷದ ಸದಸ್ಯರು ಈಗ ಮಾತನಾಡುವವರು ಇಲ್ಲ. ಬಹಳ ಕಡಿಮೆಯಲ್ಲಿದ್ದಾರೆ. ಮಾನ್ಯ ಶ್ರೀ ರಾಜಯ್ಯಶೆಟ್ಟಿಯವರೂ ಸಹ ಮಾತನಾಡುವುದಿಲ್ಲ. ನಾವು ಯಾರೂ ಈಗ ಇರುವುದಿಲ್ಲ. ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಈ ಸಭೆ ಹೇಗೆ ನಡೆಯಬೇಕೆಂಬ ಬಗ್ಗೆ ಕಾಲವನ್ನು ನಿಗದಿಮಾಡಿ ತೀರ್ಮಾನಮಾಡಿದ್ದಾರೆ. ಅಂದ ಮೇಲೆ ಈಗ ಅದರಲ್ಲಿ ತಾರತಮ್ಯ ಮಾಡಿದರೆ ಅದು ಆಗುವುದಿಲ್ಲ ಒಂದು ಗಂಟೆ ಎಕ್ಸ್‌ಟೆಂಡ್ ಮಾಡುತ್ತೇವೆಂದು ತಾವು ಮೊದಲೇ ಈ ಸಭೆಯಲ್ಲಿ ಹೇಳಬೇಕಾಗಿತ್ತು. ನಮ್ಮ ಕಡೆಯ ಸದಸ್ಯರನ್ನು ಮೊದಲೇ ಕರೆಯಲಿಲ್ಲ. ನಿಮಗೆ ಬೇಕಾದವರಿಗೆ ಮಾತ್ರ ಕರೆಯುತ್ತೀರಿ. ನಿಮಗೆ ಬೇಕಾದರೆ ಯಾರು ಯಾರಿಗೆ ಎಷ್ಟೆಷ್ಟು ಟೈಂ ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೇನೆ.

Mr. SPEAKER.—The time allotted to the hon. Member's party is exhausted.

ಶ್ರೀ ಬಿ. ಭಾಸ್ಕರಶೆಟ್ಟಿ.—ನಾನು ಲಿಸ್ಟನ್ನು ಆಗಲೇ ಕೊಟ್ಟಿದ್ದೇನೆ. ನೀವು ಈ ರೀತಿ ಜೋರು ಮಾಡಿದರೆ ಅದು ಸರಿಹೋಗುವುದಿಲ್ಲ.

ಅಧ್ಯಕ್ಷರು.— ಈಗಾಗಲೇ ಟೈಂ ಎಕ್ಸ್‌ಟೆಂಡ್ ಮಾಡಿದ್ದೇನೆ.

Sri B. BHASKAR SHETTY.—The Business Advisory Committee decided to allot 20 hours for this, Congress 9 hours and Opposititlon 11 hours. Out of that Congress (R) has taken 3 hours 32 minutes and S.V.D. 3 hours 26 minutes.

ಅನೇಕ ಸದಸ್ಯರ ಬಗ್ಗೆ ನಾನು ಲಿಸ್ಟ್ ತಮಗೆ ಕೊಟ್ಟಿದ್ದರೂ ತಾವು ಕರೆದಿರುವುದು ಕೇವಲ ಮೂರು ಜನರನ್ನು ಮಾತ್ರ. ಹೀಗೆ ಮಾಡಿದರೆ ಹೇಗೆ ನಮ್ಮ ಪಕ್ಷದವರು ಇದರಲ್ಲಿ ಭಾಗವಹಿಸುವುದಕ್ಕಾಗುತ್ತದೆ? ಆದ್ದರಿಂದ ನಿಮ್ಮ ವರ್ತನೆಯನ್ನು ಪ್ರೊಟೆಸ್ಟ್‌ಮಾಡಿ ನಾನು ವಾಕ್‌ಔಟ್ ಮಾಡುತ್ತೇನೆ.

(The member withdrew)

ಶ್ರೀ ಎಚ್. ಎನ್. ನಂಜೇಗೌಡ.—ಈ ಸಭೆ ಇಷ್ಟು ಗಂಟೆಯವರೆಗೂ ನಡೆಯಬೇಕೆಂದು ಫಿಕ್ಸ್‌ಮಾಡಿ. ಆಗ ಇದೆಲ್ಲವೂ ಸರಿಹೋಗುತ್ತದೆ. ಅದರಲ್ಲಿ ಒಂದು ನಿಯಮ ಇರಬೇಕು.

† ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕಾಯಿದೆಗಳನ್ನು ಜನರ ಅನುಕೂಲತೆಗಾಗಿ ಮಾಡುವುದು. ಆದರೆ ಅವು ಎಷ್ಟರಮಟ್ಟಿಗೆ ಈಗ ಕೆಳಗಿನ

ಮಟ್ಟದಲ್ಲಿ ಕಾರ್ಯಗತವಾಗುತ್ತಿದೆಯೆಂಬುದನ್ನು ನೋಡುವುದು ಬಹಳ ಮುಖ್ಯವಾದ ವಿಷಯವಾಗಿದೆ. ಮೊದಲನೆಯದಾಗಿ ಉದಾಹರಣೆ ಕೊಟ್ಟು ನಾನು ಒಂದು ಮಾತನ್ನು ಹೇಳುತ್ತೇನೆ. ಹಿಂದೆ ನ್ಯಾಯವಾಗಿ ರೈತರಿಂದ ಸರ್ಕಾರಕ್ಕೆ ಭೂಕಂದಾಯ ಬರಬೇಕೆಂಬ ದೃಷ್ಟಿಯಿಂದ ಒಂದು ಅಣೆವಾರಿ ಪದ್ಧತಿಯನ್ನು ಇಟ್ಟುಕೊಂಡಿದ್ದರು. ಅದು ಬಹಳ ಉತ್ತಮವಾಗಿತ್ತು. ನಮ್ಮ ಸರ್ಕಾರದವರು ಅದನ್ನು ಈಗ ಅನುಸರಿಸಿದರೆ ಒಳ್ಳೆಯದು. ನಮ್ಮ ಸರ್ಕಾರದವರೂ ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಪ್ರತಿಯೊಂದು ಗ್ರಾಮಕ್ಕೂ ಒಂದು ಯೂನಿಟ್ ಮಾಡಿ ಈ ಗ್ರಾಮದಲ್ಲಿ ಬರತಕ್ಕಂಥ ಬೆಳೆಗಳನ್ನು ಅಂದರೆ ಒಂದು ಕನಿಷ್ಠ ಒಂದು ಮಧ್ಯಮ ಒಂದು ಉತ್ತಮ ಹೀಗೆ ಮೂರನ್ನೂ ಸೇರಿಸಿ ಆಯಾ ಗ್ರಾಮಕ್ಕೆ ಒಂದು ಅಣೆಮಾಡಿ ನಾಲ್ಕು ಅಣೆಯಾಗಲೀ, ಮೂರು ಅಣೆಯಾಗಲೀ, ಆರು ಅಣೆಯಾಗಲೀ ಪ್ರತಿಯೊಂದು ಗ್ರಾಮಕ್ಕೂ ನಿಗದಿ ಮಾಡಬೇಕೆಂದು ಹೊಸ ಕಾಯಿದೆ ಪ್ರಕಾರ ಇದೆ. ಈ ಹಿಂದೆ ಅಣೆವಾರಿ ಪದ್ಧತಿ ಇರಲಿಲ್ಲ. ಪ್ರತಿಗ್ರಾಮಕ್ಕೂ ಕೂಡ ಯುನಿಟ್ ಮಾಡಿದರೆ ಪ್ರತಿಗ್ರಾಮದ ಬೆಳೆಗಳನ್ನು ಅಂದಾಜು ಮಾಡಲಿಕ್ಕೆ ಅನುಕೂಲವಾಗುತ್ತದೆ. ಯಾವ ರೀತಿ ಗ್ರಾಮಕ್ಕೆ ಬೆಳೆ ಬರುತ್ತದೆ ಎಂದು ನೋಡಿಕೊಂಡು ಮುಂದೆ ಭೂಕಂದಾಯವನ್ನು ವಸೂಲು ಮಾಡುವ ಪದ್ಧತಿ ಇದೆ. ಈ ಪದ್ಧತಿ ಏನಾಗಿದೆ ಅಂದರೆ ಪ್ರತಿ ಗ್ರಾಮಕ್ಕೂ ಪ್ರತಿ ಹಳ್ಳಿಗೂ ಹೋಗಲಾರದೆ ಬೆಳೆಗಳ ಪರಿಸ್ಥಿತಿ ನೋಡಲಾರದೆ ಸರಕಾರದ ಕೆಳಗಿನ ಅಧಿಕಾರಿಗಳು ಕುಳಿತಲ್ಲಿಯೇ ಬೆಳೆ ಚೆನ್ನಾಗಿ ಬರಲಿ, ಬರದೆ ಇರಲಿ, ಚೆನ್ನಾಗಿ ಬಂದಿದ್ದರೂ ಕೂಡ ಕಡಿಮೆ ಮಾಡುವುದು ಕೆಲವು ಕಡೆ ಕನಿಷ್ಠ ಬಂದಿದ್ದರೂ ಉತ್ತಮ ಮಾಡುವುದು ಈ ರೀತಿ ನಡೆದುಕೊಂಡು ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ರೀತಿ ಎಲ್ಲಿ ಸರಿಯಾಗಿ ಫಸಲು ಬಂದಿರುವುದಿಲ್ಲವೋ ಅಲ್ಲಿ ಸರಿಯಾಗಿದೆ ಎಂದು ಹೇಳುವುದು ಎಲ್ಲಿ ಬಂದಿದೆಯೋ ಅಲ್ಲಿ ಸರಿಯಿಲ್ಲ ಎಂದು ಹೇಳುವ ಪದ್ಧತಿ ಇದೆ. ಈ ವಿಷಯದಲ್ಲಿ ಮೇಲಿನ ಅಧಿಕಾರಿಗಳು ಹೆಚ್ಚಿನ ಗಮನಕೊಡಬೇಕು. ಸರ್ಕಾರದವರು ಏನು ಒಂದು ಜನರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಕಾಯಿದೆ ಮಾಡಿದ್ದಾರೋ ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಸರಕಾರದ ಮೇಲಿನ ಅಧಿಕಾರಿಗಳು ಅದನ್ನು ಆಚರಣೆಯಲ್ಲಿ ತರಲಿಕ್ಕೆ ಅಧಿಕಾರಿಗಳಿಗೆ ಒತ್ತಾಯ ತರಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಸರ್ಕಾರದವರು ಪಟ್ಟಾ ಪುಸ್ತಕಗಳನ್ನು ಈಗ ಹಂಚಿದ್ದಾರೆ. ಹಿಂದೆ ಇದೇ ಪ್ರಕಾರ ಪಾವತಿ ಪುಸ್ತಕಗಳನ್ನು ರೈತರಿಗೆ ಹಂಚಿದರು. ಇದರಲ್ಲಿ ರೈತರಿಗೆ ತಕ್ಕಮಟ್ಟಿಗೆ ಮಾಹಿತಿ ಸಿಕ್ಕುತ್ತಿತ್ತು. ಅದರಲ್ಲಿ ಭೂಮಿ ಎಷ್ಟಿದೆ, ಭೂಕಂದಾಯ ಎಷ್ಟು, ಸರ್ವೆ ನಂಬರು ಯಾವುದು ಎಂದು ಗೊತ್ತಾಗುತ್ತದೆ. ಈ ಪಾವತಿ ಪುಸ್ತಕಗಳನ್ನು ಸರಕಾರದವರು ಹಂಚಿದರು. ಆದರೆ ಆ ಪುಸ್ತಕಗಳು ಶಾನುಭೋಗರ ಮನೆಯೊಳಗೇ ಇವೆ. ಎಷ್ಟೋ ಕಡೆ ಪಾವತಿ ಪುಸ್ತಕಗಳನ್ನು ಕೊಡಲಿಲ್ಲ. ಈಗ ಸರಕಾರದವರು ರೈತರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಮತ್ತೆ ಪಟ್ಟಾ ಪುಸ್ತಕಗಳನ್ನು ಎಲ್ಲಾ ಕಡೆ ಹಂಚಬೇಕು ಎನ್ನುವ ವಿಚಾರ ಇಟ್ಟುಕೊಂಡು ಎಲ್ಲಾ ಕಡೆಗೂ ಪಟ್ಟಾ ಪುಸ್ತಕಗಳನ್ನು ತಹಸೀಲದಾರರಿಗೆ ಕಳುಹಿಸಿಕೊಟ್ಟಿದ್ದಾರೆ. ಪಾವತಿ ಪುಸ್ತಕಗಳು ಯಾವ ರೀತಿ ಹಂಚಿದರೋ ಆ ರೀತಿ ಆಗದೆ ತೀವ್ರವಾಗಿ ಅದು ರೈತರಿಗೆ ಮುಟ್ಟುವ ಹಾಗೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ನಾನು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅದೂ ಅಲ್ಲದೆ ಈಗ ಅನೇಕ ಕಡೆ ಅಸೆಂಬ್ಲಿಯ ಒಳಗೆ ಮತ್ತು ಹೊರಗಡೆ ಎಷ್ಟೋ ಕಡೆ ನಮ್ಮ ರೈತನೇ ಜೀವಾಳ, ರೈತನಿಂದಲೇ ರಾಷ್ಟ್ರ ಉದ್ಧಾರ, ರೈತರಿಂದಲೇ ದೇಶ, ರೈತನೇ ದೇಶದ ಒಡೆಯ ಎಂದು ಉದ್ದುದ್ದವಾದ ಭಾಷಣ ಮಾಡುತ್ತಾರೆ. ಇವೊತ್ತು ರೈತನ ಪರಿಸ್ಥಿತಿ ಏನಾಗಿದೆ ಅಂದರೆ ಆತ ಸರಕಾರಕ್ಕೆ ಅರ್ಜಿ ಕೊಟ್ಟು ಇದರ ಬಗ್ಗೆ ಚೌಕಾಸಿ ಮಾಡಬೇಕು ಎಂದರೆ ಕೆಳಗಿನ ಅಧಿಕಾರಿಗಳು ಅವನನ್ನು ಕೀಳು ಮಟ್ಟದಿಂದ ನೋಡುತ್ತಿದ್ದಾರೆ. ಯಾವನು ರಾಜ್ಯದ ಒಡೆಯ ಎಂದು ಮಂತ್ರಿಗಳಾಗಲಿ, ಅಸೆಂಬ್ಲಿಯೊಳಗೆ ಸದಸ್ಯರಾಗಲಿ ಭಾಷಣ ಮಾಡುತ್ತೇವೋ ಆತ ಆಫೀಸಿಗೆ ವ್ಯವಹಾರದ ಸಲುವಾಗಿ ಹೋದರೆ ಕೆಳಗಿನ ಅಧಿಕಾರಿಗಳು ಯಾವ ದೃಷ್ಟಿಯಿಂದ ನೋಡುತ್ತಾರೆ ಎನ್ನುವುದು ಸರ್ವೇಸಾಧಾರಣವಾಗಿ ಎಲ್ಲಾ ಸದಸ್ಯರಿಗೂ ಮಾತ್ರ ಅಲ್ಲ ಮಂತ್ರಿಗಳಿಗೂ ಗೊತ್ತಿದೆ. ಈ ರೀತಿ ಅನ್ನ ಕೊಡುವ ರೈತನನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಸರಕಾರದವರು ಕೆಳಗಿನ ಅಧಿಕಾರಿಗಳಿಗೆ ತಿಳುವಳಿಕೆ ಕೊಡಬೇಕು. ಆರೀತಿ ನೋಡಿಕೊಳ್ಳಲಿಲ್ಲ ಎಂದು ಆತನ ಮನಸ್ಸಿಗೆ ಕೆಟ್ಟ ಅಭಿಪ್ರಾಯ ಬಂದರೆ, ಸ್ವಾತಂತ್ರ್ಯ ಸಿಕ್ಕಿ ತನಗೆ ಏನು ಅನುಕೂಲ ಬಂತು ಎನ್ನುವ ಮನೋಭಾವನೆ ಅವನಿಗೆ ಬಂದರೆ ಅದರಿಂದ ಹೆಚ್ಚಿನ ತೊಂದರೆ ಆಗುತ್ತದೆ. ಆದ್ದರಿಂದ ಅವರೊಡನೆ ಸರಿಯಾಗಿ ವ್ಯವಹಾರ ಮಾಡಲು ನಮ್ಮ ಸರಕಾರದವರು ಕೆಳಗಿನ ಅಧಿಕಾರಿಗಳಿಗೆ ಒತ್ತಾಯ ಪೂರ್ವಕವಾದ ಒಂದು ಆದೇಶ ಕೊಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯಪಡಿಸುತ್ತೇನೆ. ಒಕ್ಕಲುತನ ಅಭಿವೃದ್ಧಿಗಾಗಿ ನೀರಾವರಿ ಭಾಗದಲ್ಲಿ ಅನೇಕ ಟ್ರಾಕ್ಟರುಗಳನ್ನು ಪ್ರಗತಿಪರವಾದ ಸಾಮಗ್ರಿಗಳನ್ನು ಒಕ್ಕಲುತನಕ್ಕೆ ಇವೊತ್ತು

(ಶ್ರೀ ಇ. ಪುಂಡಲೀಕಪ್ಪ)

ನಮ್ಮ ಸರಕಾರದವರು ಕೊಡುತ್ತಾ ಇದ್ದಾರೆ. ಆದರೆ ಬಯಲು ಸೀಮೆ ನೀರಾವರಿ ಇರುವ ಕೆಲವು ಭಾಗ ಇದೆ, ನೀರಾವರಿ ಇಲ್ಲದೆ ಇರುವ ಕೆಲವು ಭಾಗಗಳೂ ಇವೆ. ನೀರಾವರಿ ಇಲ್ಲದೆ ಇರುವ ಕುಷ್ಟಗಿ, ಕೊಪ್ಪಳ, ಎಲಬುರ್ಗ, ಲಿಂಗಸಗೂರು ಈ ಪ್ರದೇಶದಲ್ಲಿ ರೈತರಿಗೆ ಯಾವ ತರಹ ಟ್ರಾಕ್ಟರು ಗಳಾಗಲೀ ಬೋರಿಂಗ್ ವೆಲ್ಸ್ ಆಗಲೀ ಅಥವಾ ಇನ್ನು ಯಾವ ಅನುಕೂಲತೆಯೂ ಇಲ್ಲ. ಈ ಭಾಗಕ್ಕೆ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂದು ಈಗ ಒಂದು ಬೋರಿಂಗ್ ರಿಂಗ್ ಬಂದಿದೆ. ಸಾಮಾನ್ಯ ರೈತರಿಗೆ ಪೋಟಿಗೆ 35 ರೂಪಾಯಿ ಕೊಡಲು ಸಾಧ್ಯವಿಲ್ಲ. ಆದುದರಿಂದ ರೈತರಿಗೆ ತಕಾವಿ ಸಾಲ ಕೊಟ್ಟು ಕೆಲಸ ಮಾಡಿಸಬೇಕು ಎಂದು ಸರಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದೂ ಅಲ್ಲದೆ ಒಕ್ಕಲುತನವ ಸಲುವಾಗಿ ಈಗಾಗಲೇ ಕೆಲವು ಕಡೆ ಬಾವಿ ತೆಗೆಸಿದ್ದಾರೆ. ಪಂಪುಸೆಟ್ಟು ಗಳನ್ನು ಕೆಲವು ಜನರು ತೆಗೆದುಕೊಂಡಿದ್ದಾರೆ. ಉದಾಹರಣೆಗೆ ನಮ್ಮ ಜಿಲ್ಲೆಯ ವಿಚಾರ ಹೇಳ ಬೇಕು ಎಂದರೆ ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಪ್ರತಿವರ್ಷ 100 ಅಥವಾ 150 ಪಂಪು ಸೆಟ್ಟುಗಳಿಗೆ ಎಲೆಕ್ಟ್ರಿಸಿಟಿ ಬೋರ್ಡಿನವರು ಸರ್ವಿಸ್ ಕೊಡಲಿಕ್ಕೆ ಹತ್ತಿದ್ದಾರೆ. ಆದರೆ ಇದು ಸಾಲದು. ಬ್ಯಾಂಕ್ ಆಫ್ ಇಂಡಿಯಾದವರು ನನಗೆ ತಿಳಿದ ಮಟ್ಟಿಗೆ ನಮ್ಮ ಜಿಲ್ಲೆಯೊಳಗೆ ಸುಮಾರು 300, 350 ಪಂಪು ಸೆಟ್ಟು ಸಾಲ ಕೊಟ್ಟಿದ್ದಾರೆ. ಆ ಪಂಪುಗಳಿಗೆ ಪವರ್ ಕೊಡಲು ಎಲೆಕ್ಟ್ರಿಸಿಟಿ ಬೋರ್ಡಿನವರು ಈವೊತ್ತು ಯಾವ ವ್ಯವಸ್ಥೆಯನ್ನು ಮಾಡಿಲ್ಲ. ಅದಕ್ಕೆ ಬಹಳ ತತ್ತ್ವಬೇಕಾಗುತ್ತದೆ. ಆದುದರಿಂದ ತೀವ್ರಗತಿಯಿಂದ ಯಾರು ಅರ್ಜಿ ಕೊಡುತ್ತಾರೋ ಯಾರು ಮಿನಿಮಂ ರೇಟ್ ತುಂಬಿದ್ದಾರೆ ಎಂದು ರಿಪೋರ್ಟ್ ಕೊಡುತ್ತಾರೋ ಅಂಥಹವರಿಗೆ ತೀವ್ರಗತಿಯಿಂದ ಪವರ್ ಸಿಕ್ಕುವಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಸರಕಾರವನ್ನು ಒತ್ತಾಯ ಪಡಿಸುತ್ತೇನೆ. ಇದೂ ಅಲ್ಲದೆ ಎಂ. ಎಸ್. ಆರ್. ಟಿ. ಸಿ. ಬಗ್ಗೆ ಹೇಳಬೇಕಾದರೆ ಅನೇಕ ಕಡೆ ಇಡೀ ರಾಜ್ಯದಲ್ಲಿ ಎಲ್ಲಾ ಕಡೆಗೂ ಸರ್ವಿಸ್ ಇಟ್ಟಿ ದ್ದಾರೆ ಮತ್ತು ಜನರಿಗೆ ಎಷ್ಟೋ ಕಡೆ ಹೋಗಿ ಬರಲಿಕ್ಕೆ ಅನುಕೂಲವಾಗಿದೆ.

ಅನೇಕ ಕಡೆ ಹೊಸ ಹೊಸ ಡಿವಿಜನ್‌ಗಳನ್ನು ತೆಗೆಯುತ್ತಾ ಇದ್ದಾರೆ ನಮ್ಮ ರಾಯಚೂರು ಜಿಲ್ಲೆಯಲ್ಲೂ ತೀವ್ರವಾಗಿ ಎಂ. ಎಸ್. ಆರ್. ಟಿ. ಸಿ. ಡಿವಿಜನ್ ಆಗಬೇಕೆಂದು ಹೇಳುತ್ತೇನೆ. ಅದೇ ರೀತಿ ಕುಷ್ಟಗಿ ಮತ್ತು ಸಿಂಧನೂರಿನಲ್ಲಿ ಎಂ. ಎಸ್. ಆರ್. ಟಿ. ಸಿ. ಡಿಪೋ ಪ್ರಾರಂಭವಾಗಬೇಕೆಂದು ಸರ್ಕಾರದವರನ್ನು ಒತ್ತಾಯ ಪಡಿಸುತ್ತೇನೆ.

ಅನೇಕ ಕಡೆ ಈಗಾಗಲೇ ಹೈಸ್ಕೂಲು ಕಟ್ಟಡಗಳು ಇದ್ದರೂ ಸಹಿತ ಕುಷ್ಟಗಿಯಲ್ಲಿ ಮಾತ್ರ ಇವತ್ತಿಗೂ ಹೈಸ್ಕೂಲು ಕಟ್ಟಡ ಇಲ್ಲ. ಅದಕ್ಕಾಗಿ ಸಾರ್ವಜನಿಕರ ವತಿಯಿಂದ 10 ಎಕರೆ ಭೂಮಿ: 15 ಸಾವಿರ ರೂಪಾಯಿ ಬಂದಿದೆ. ಅಲ್ಲಿನ ಸಾರ್ವಜನಿಕರು ಹಣಕಾಸಿನ ಮಂತ್ರಿಗಳ ಕಡೆಗೆ ಬಂದಿ ದ್ದರು. ವಿಷಯ ಮನವರಿಕೆ ಮಾಡಿಕೊಂಡಿದ್ದಾರೆ, ಅದನ್ನು ತೀವ್ರಗತಿಯಿಂದ ಮಾಡಬೇಕೆಂದು ಹೇಳುತ್ತೇನೆ.

ನೀರಾವರಿ ಬಗ್ಗೆ ಹೇಳಬೇಕಾದರೆ, ನನ್ನ ಕ್ಷೇತ್ರದಲ್ಲಿ ಬೂದನಾಳ್ ಕೆರೆ ಮತ್ತು ಚಂದ್ರಗಿರಿ ಕೆರೆ ಗಳಿಗೆ ಎಸ್ಟಿಮೇಟ್ ಮಂಜೂರಾಗಿ ಟೆಂಡರ್ ಕೂಡ ಕರೆದಿದ್ದಾರೆ. ಅನೇಕ ವರ್ಷಗಳಿಂದ ಈ ಕಾರ್ಯ ಆಗದೇ ಮುಂದುವರಿಯುತ್ತಾ ಇದೆ. ಇದನ್ನು ತೀವ್ರಗತಿಯಿಂದ ತೆಗೆದುಕೊಂಡು ಕೆಲಸ ಶುರು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಕೃಷ್ಣಾ ಮೇಲ್‌ದಂಡೆ ಕೆಲಸವನ್ನು ತೀವ್ರಗತಿಯಿಂದ ಶುರು ಮಾಡಬೇಕು. ಬಲದಂಡೆ ಕಾಲುವೆ ಮೊದಲನೇ ಹಂತವಲ್ಲ ತೆಗೆದುಕೊಂಡು ಮುಗಿಸಿದರೆ ರಾಯಚೂರು ಜಿಲ್ಲೆಗೆ ಅನುಕೂಲವಾಗುತ್ತದೆ ಎಂದು ವಿನಂತಿಸಿಕೊಳ್ಳುತ್ತೇನೆ.

ಕೊನೆಯದಾಗಿ ಸ್ಥಳೀಕ ಅಭ್ಯರ್ಥಿಗಳ ವಿಷಯ. ಯಾವುದೇ ದೃಷ್ಟಿಯಿಂದ ಅವರನ್ನು ನೌಕರಿಗೆ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ ಎಂದು ಹೇಳುವುದು ಅಷ್ಟು ಸರಿಯಾದ್ದಲ್ಲ. ಮತ್ತು ಸಮಂಜಸವೂ ಅಲ್ಲ. ಕಾಯಿದೆ ಅಡ್ಡಿ ಇದ್ದ ಪಕ್ಷದಲ್ಲಿ ಕಾಯಿದೆಯಲ್ಲಿ ಸೂಕ್ತ ಬದಲಾವಣೆಯನ್ನು ಮಾಡಿ ಅವರನ್ನು ನೌಕರಿಗೆ ತೆಗೆದುಕೊಳ್ಳಬೇಕು ಏಕೆಂದರೆ ಈಗಾಗಲೇ ಅವರು ನೌಕರಿಯಲ್ಲಿ ಸೇರಿ 4-5 ವರ್ಷ ಆಗಿದೆ. ಸಂಸಾರ ನಿರ್ವಹಣೆ ಮಾಡತಕ್ಕವರನ್ನು ನೌಕರಿಯಿಂದ ತೆಗೆದಲ್ಲಿ ಮಹಾ ದೊಡ್ಡ ಪಾಪ ಕಟ್ಟಿ ಕೊಂಡ ಹಾಗಾಗುತ್ತದೆ. ಆದ್ದರಿಂದ ಜರೂರಾಗಿ ಕಾಯಿದೆ ಇಲ್ಲದೇ ಇದ್ದರೆ ಕಾಯಿದೆ ಮಾಡಿ ಅವರನ್ನು ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಂಡು ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ, ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥಿಕ ಸಚಿವರು ಮಂಡಿಸಿರತಕ್ಕ ಈ ಖೋತಾ ಆಯವ್ಯಯ ಅಂದಾಜನ್ನು ನಾನು ನೋಡಿದ್ದೇನೆ. ಇದರ

ಮೇಲೆ ಕೆಲವಾರು ವಿಷಯಗಳನ್ನು ಸೂಚಿಸಿ ಸರ್ಕಾರದ ಗಮನವನ್ನು ಸೆಳೆಯಬೇಕೆಂದು ಹೇಳ ಬಯಸಿದ್ದೇನೆ. ಮಾನ್ಯ ಆರ್ಥಿಕ ಸಚಿವರು ಬಹಳ ಸುಲಲಿತವಾದ ಕನ್ನಡ ಭಾಷೆಯಲ್ಲಿ ಸಾಮಾನ್ಯ ಜನತೆಗೆ ಅರ್ಥವಾಗುವಂತೆ ಈ ಬಜೆಟ್ಟನ್ನು ವಿವರಿಸಿ ಬರೆದಿದ್ದಾರೆ. ಇದರ ಒಳಗುಟ್ಟು ಏನೆಂದರೆ ಸರ್ಕಾರದಲ್ಲಿರತಕ್ಕ ಅನೇಕ ನಿಷ್ಠೂರಗಳನ್ನು ಮುಚ್ಚಿಕೊಳ್ಳತಕ್ಕಂಥ ಒಂದು ಒಳ್ಳೆಯ ಭಾಷೆಯಿಂದ ಕೂಡಿದ ಒಂದು ಆಯವ್ಯಯದ ಅಂದಾಜು ಇದು ಆಗಿದೆ. ಪ್ರತಿಯೊಂದು ಹಂತದಲ್ಲೂ ಸರ್ಕಾರದ ಪಕ್ಷಪಾತ ಏನಿವೆ, ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡದೆ, ಪಾರ್ಟಿಪಕ್ಷಗಳನ್ನು ಅನುಸರಿಸಿ ಜನತೆಯ ಮೇಲೆ ಹೊರೆಗಳನ್ನು ಹೊರಿಸಿ, ಅಸಾಧ್ಯವಾಗಿರತಕ್ಕ ಸಂದರ್ಭಗಳಲ್ಲೂ ಕೂಡ ಬಹಳ ಚೆನ್ನಾಗಿ, ಕನ್ನಡದಲ್ಲಿ ಶಾಸ್ತ್ರೀಯವಾಗಿ ಒಂದು ಸುಧಾರಣೆಯನ್ನು ತರುವಂತೆ ಹೇಳಿದ್ದಾರೆ. ಇದು ಹೇಗೆ ಇದೆ ಎಂದರೆ ನಾವು ಕೋಳಿ ಮೊಟ್ಟೆಯನ್ನು ಒಂದು ಎಣ್ಣೆಯಲ್ಲಿ ಅದ್ದುತ್ತೇವೆ, ಅದು ಎಂಟು ದಿನಗಳವರೆಗೂ ಆ ಮೊಟ್ಟೆಯ ಶಕ್ತಿ ಇರುವಂತೆ ಮಾಡುತ್ತೇವೆ. ಹಾಗೆ ನಮ್ಮ ಆರ್ಥಿಕ ಸಚಿವರು ಕೊಟ್ಟಿರತಕ್ಕ ಕನ್ನಡ ಭಾಷೆಯ ಅಭಿಪ್ರಾಯ ಮತ್ತು ಘೋಷಣೆ ಸರ್ಕಾರದ್ದು ಏನಿದೆ ಅದು ಒಂದು ತಿಂಗಳು ಮಾತ್ರ ಇರುತ್ತದೆಯೇ ಹೊರತು ಆ ನಂತರ ಇರಲಾರದು ಎಂದು ಹೇಳುತ್ತೇನೆ. ಏಕೆಂದರೆ ಅವರು ಒಂದು ದೊಡ್ಡ ಪ್ಯಾರಾ ಬರೆದಿದ್ದಾರೆ, ಷೆಡ್ಯೂಲ್ ಬ್ಯಾಂಕುಗಳು ನಮಗೆ ಎಷ್ಟು ಸಹಾಯ ಮಾಡಿವೆ ಅಂತ ಹೇಳಿ. ಅದರಲ್ಲಿ ರೈತರು ಮತ್ತು ವ್ಯವಸಾಯಗಾರರು ಎಷ್ಟು ಕಷ್ಟಪಡುತ್ತಾ ಇದ್ದಾರೆ ಎಂಬ ವಿಚಾರದಲ್ಲಿ ಒಂದು ಮಾತೂ ಇಲ್ಲ. ಪ್ರತಿ ವರ್ಷ ಇನ್‌ಸಿಡೆಂಟಲ್ ಚಾರ್ಜಸ್ ಎಷ್ಟು ಹಾಕುತ್ತಾರೆ, ಟ್ರ್ಯಾಕ್ಟರ್ಸ್ ವಗೈರೆ ಅವರಿಗೆ ಎಷ್ಟು ಒದಗಿಸಿದ್ದಾರೆ, ಸುಂಕ ಎಷ್ಟು ಹಾಕುತ್ತಾರೆ ಎಂಬ ವಿಷಯದಲ್ಲಿ ಅವರು ಒಂದು ಮಾತನ್ನೂ ಹೇಳಿಲ್ಲ. ಇದನ್ನು ನೋಡಿದರೆ ಅವರ ಪಾಲಿಸಿ ಮತ್ತು ಪ್ರೋಗ್ರಾಂಗಳನ್ನೇ ಹೆಚ್ಚಾಗಿ ಹೇಳಿದ್ದಾರೆಯೇ ವಿನಃ ಅವುಗಳನ್ನು ಕಾರ್ಯರೂಪಕ್ಕೆ ತರಬೇಕಾದಾಗ ಬರತಕ್ಕ ನ್ಯೂನತೆಗಳ, ರೈತರು ಅನುಭವಿಸತಕ್ಕ ಕಷ್ಟಗಳ ವಿಚಾರದಲ್ಲಿ ಒಂದು ಮಾತೂ ಅವರು ಹೇಳಿಲ್ಲ. ಅವರು ಕನ್ನಡದಲ್ಲಿ ಬಹಳ ಚೆನ್ನಾಗಿ ಮಾತನಾಡುವವರು. ಪ್ರತಿಯೊಬ್ಬ ಮಾನವನ ಕಲ್ಪನೆಯಿಂದ ಬರತಕ್ಕ ಒಂದು ಆನಂದವನ್ನು ಕಲ್ಪಿಸಿ ಅವನನ್ನು ಸಮಾಧಾನ ಮಾಡತಕ್ಕ ಶಕ್ತಿ ಮಾನವನಿಗೆ ಬಂದಿಲ್ಲ, ಚಂದ್ರಲೋಕಕ್ಕೆ ಹೋಗಿ ಚಂದ್ರನ ಮೇಲೆ ಅಡಿ ಇಡತಕ್ಕ ಶಕ್ತಿ ಬಂದಿದೆ ಎಂದು ಹೇಳಿದ್ದಾರೆ. ನಮ್ಮಲ್ಲಿ ಸಾಧಿಸಲು ಸಾಧ್ಯವಾಗದಿರುವಂತಹ ವಿಷಯಗಳು ಇನ್ನೂ ಎಷ್ಟು ಇವೆ ಅಂತ ಅನ್ನುವುದನ್ನು ಅವರು ಹೇಳಲಿಲ್ಲ. ಆದ್ದರಿಂದ ಬಹಳ ಚೆನ್ನಾಗಿ ವರ್ಣಿಸತಕ್ಕ ಪದಗಳಲ್ಲಿ ವಿಚಾರಗಳನ್ನು ಹೇಳಿ ಮರುಳು ಮಾಡಿದ್ದಾರೆ. ನಮ್ಮಲ್ಲಿ ಕೆಲವರು ಅವರ ಭಾಷಣವನ್ನು ಹಿಡಿದುಕೊಂಡು ಎಷ್ಟು ಚೆನ್ನಾಗಿದೆ, ಎಷ್ಟು ಆನಂದವಾಗಿದೆ ಎಂದು ಅನ್ನುತ್ತಾ ಇದ್ದರು. ಕುಂದು ಕೊರತೆಗಳು ಏನಿವೆ ಎಂಬುದನ್ನು ಯಾರೂ ಅರಿತುಕೊಳ್ಳುವ ಹಾಗೆ ಇಲ್ಲ. ಎಲೆಕ್ಟ್ರಿಸಿಟಿ ಬೋರ್ಡಿನ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಮೊನ್ನೆ ಕಳೆದ ಹತ್ತು ವರ್ಷಗಳಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ ಎಂದು ಹೇಳಿದರು. ಕಳೆದ ವರ್ಷ ಮತ್ತು ಹಿಂದಿನ ವರ್ಷಗಳಲ್ಲಿ ಎಲೆಕ್ಟ್ರಿಸಿಟಿ ಬೋರ್ಡಿನವರು ಬಜೆಟ್‌ನಲ್ಲಿ ಸೇರಿಸಿರತಕ್ಕ ಕೆಲಸಗಳನ್ನು ಮಾಡದೇ ನಿರಾಕರಿಸಿರುವುದನ್ನು ಸರ್ಕಾರದವರ ಗಮನಕ್ಕೆ ತಂದಾಗ ಅವರು ಏನೂ ಮಾಡಲಿಲ್ಲ. 900 ಸಾವಿರ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ 27 ಸಾವಿರ ಗ್ರಾಮಗಳು ಇವೆ. ಈ ಪ್ರಕಾರ, ಈ ಧೋರಣೆಯಲ್ಲಿ ಹೋದರೆ, ಈ ವೇಗದಲ್ಲಿ ಹೋದರೆ ಇನ್ನು 40 ವರ್ಷ ಬೇಕಾಗುತ್ತದೆ ಎಂಬುದನ್ನು ಅವರು ಹೇಳಲಿಲ್ಲ. ನಮ್ಮಲ್ಲಿ ಅಸಮರ್ಥತೆ ಇದೆ, ಅಸಡ್ಡಾಳತೆ ಇದೆ ಎಂಬುದನ್ನು ಇದರಿಂದ ಕಂಡುಕೊಳ್ಳಬಹುದು. ಇದನ್ನು ಪ್ರತಿಯೊಂದು ಲೈನೂ ನಮಗೆ ಬಹಳ ಚೆನ್ನಾಗಿ ತೋರಿಸಿಕೊಡುತ್ತದೆ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಮಾನ್ಯ ಅರ್ಥಸಚಿವರು ನಮ್ಮ ಕಷ್ಟನಿಷ್ಠೂರಗಳನ್ನು ಅರಿತುಕೊಳ್ಳಬೇಕಾಗಿದೆ. ವಿದ್ಯುಚ್ಛಕ್ತಿ ಶುಲ್ಕದ ದರವನ್ನು ಶೇಕಡ 50 ರಷ್ಟು ಹೆಚ್ಚಿಸುತ್ತೇವೆ ಎಂದು ಹೇಳಿದ್ದಾರೆ. ಆನಂದವಾದ ಮಾತುಗಳಲ್ಲಿ ನಮ್ಮಲ್ಲಿ ಮರಳು ಗೊಳಿಸುವುದಕ್ಕೆ ಮಾನ್ಯ ಅರ್ಥಸಚಿವರು ಪ್ರಯತ್ನ ಮಾಡಿದ್ದಾರೆ.

ಇನ್ನು ಶಿಕ್ಷಣದ ವಿಷಯ ತೆಗೆದುಕೊಳ್ಳಿ. ನಮ್ಮ ಮಕ್ಕಳು ಫೇಲ್ ಆಗತಕ್ಕದ್ದು ಖಂಡಿತ. ಫೇಲ್ ಆದ ಹುಡುಗ ಫೀಜು ಕೊಡಬೇಕೆಂದು ಇದೆ. ಒಂದು ಸಲ ಫೇಲ್ ಆದ ಮೇಲೆ ಫೀಜು ಕೊಡುತ್ತಲೇ ಇರಬೇಕು, ಸ್ಕಾಲರ್‌ಷಿಪ್ ಇಲ್ಲ ಬೇರೆ ಯಾವ ತರಹದ ಅನುಕೂಲವೂ ಕೂಡ ಅವನಿಗೆ ಸಿಕ್ಕುವುದಿಲ್ಲ, ಹಾಸ್ಟಲ್‌ನಲ್ಲಿ ಜಾಗ ಸಿಕ್ಕುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇದೆ.

6-30 P.M.

ಬೆಂಗಳೂರು ಜಿಲ್ಲೆಯಲ್ಲಿ ಎಷ್ಟುಮಟ್ಟಿಗೆ ವಿದ್ಯುಚ್ಛಕ್ತಿಯಿಂದ ಅನುಕೂಲ ದೊರೆತು ಅಭಿವೃದ್ಧಿಯಾಗಿದೆ ಎಂಬುದನ್ನು ನೋಡಿದರೆ ಇಂದು ಕೂಡ 1800 ಪಂಪುಗಳಿಗೆ ಇನ್ನೂ ಸರ್ವಿಸ್ ಕೊಡ

(ಶ್ರೀ ಜಿ. ರಾಮೇಗೌಡ)

ಬೇಕಾಗಿದೆ. ಅಂದಮೇಲೆ ಅನುಕೂಲವಾಗಿರುವುದೇನು ? ಒಂದು ಹೆಚ್.ಪಿ.ಗೆ ಇಷ್ಟು ಖರ್ಚಾಗುವುದೆಂದು ಹೇಳುತ್ತಾರೆ. ಆದರೆ ಅನಾನುಕೂಲವಿರುವ ಕಡೆ ಮಿತಿಯಿಲ್ಲದೆ ಖರ್ಚುಮಾಡಿ ಜನರಮೇಲೆ ಭಾರ ಹೇರುವುದು ಸರಿಯಲ್ಲ. ಆಹಾರದ ಉತ್ಪತ್ತಿ ಹೆಚ್ಚಿಸಲಾಗಿದೆ ಎಂದು ಹೇಳಿದ್ದಾರೆ. ಅದು ಇಂಟೆನ್ಸಿವ್ ಕಲ್ಟಿವೇಷನ್ನಿನಿಂದಾಗಿಲ್ಲ, ಎಕ್ಸ್‌ಟೆನ್ಸಿವ್ ಕಲ್ಟಿವೇಷನ್ನಿನಿಂದಾಗಿದೆ. ಡ್ರೈಫಾರ್ಮಿಂಗಿಗೆ ಅನುಕೂಲವಾಡಿದೆ ಎಂದು ಹೇಳುವರು. ಆದರೆ ಕಾಂಟೂರ್ ಎಂದು ವ್ಯವಸಾಯ ಮಂತ್ರಿಗಳು ಹೇಳುವುದು ಎಲ್ಲಿದೆಯೋ ಗೊತ್ತಿಲ್ಲ, ನಮ್ಮಲ್ಲಿ ಎಡವಿ ಬಿದ್ದ ಕಡೆ ಬಾರಿ ಇದೆ, ನಮ್ಮ ಹಳ್ಳಿಗೆ ಕಾಂಟೂರ್ ಉಪಯೋಗ ದೊರೆತಿಲ್ಲ. ಕಾಂಟೂರ್‌ಬಂಡಿಂಗಿಗೆ ಮತ್ತು ಸಾಯಿಲ್ ಕನ್‌ಸರ್ವೇಷನ್ನಿಗೆ ಬೆಂಗಳೂರು ಜಿಲ್ಲೆಯಲ್ಲಿ ಒಂದು ಲಕ್ಷಕ್ಕೆ ಅಂದಾಜು ಮಾಡಿ ಒಂದು ಸಮಿತಿ ಮಾಡಿದ್ದಾರೆ. ವರ್ಷದಲ್ಲಿ ಒಂದು ದಿವಸ ಕೂಡ ಆ ಸಮಿತಿ ಸೇರಿಲ್ಲ, ಅದು ಎಲ್ಲಿದೆಯೋ ಗೊತ್ತಿಲ್ಲ. ಅಧಿಕಾರಿಗಳಿಗೆ ಸರ್ವಿಸ್ ಮೈಂಡ' ಎಂಬುದೇ ಇಲ್ಲ, ಬಲವಂತವಾಗಿ ಕೆಲಸಮಾಡುವರು, ಸರಕಾರ ಒದಗಿಸಿರುವ ಹಣ ಸಮಂಜಸವಾಗಿದ್ದರೂ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದಿರುವುದರಿಂದ ಅದರಿಂದ ಸಾಕಷ್ಟು ಉಪಯೋಗವಾಗಿಲ್ಲ. ಉದಾಹರಣೆಗೆ ನಮ್ಮ ತಾಲ್ಲೂಕಿಗೆ ಸಣ್ಣ ನೀರಾವರಿಗೆ 5 ಲಕ್ಷ ಕೊಟ್ಟಿದ್ದಾರೆ, ಅದು ಖರ್ಚಾಗದೆ ಹಾಗೆಯೇ ಇರುವುದು. ದೇವರ ನೈವೇದ್ಯಕ್ಕೆ ಇಟ್ಟಿದ್ದನ್ನು ದೇವರು ತಿನ್ನುವುದಿಲ್ಲ, ಅದು ಹಾಗೆಯೇ ಇರುವುದು, ಅದನ್ನು ತಿನ್ನುವವರು ನಾವೇ. ಹಾಗೆ ಈ ವರ್ಷ ಒದಗಿಸುವುದನ್ನು ಖರ್ಚು ಮಾಡದಿದ್ದರೆ ಅದನ್ನೇ ಮುಂದಿನ ವರ್ಷಕ್ಕೆ ಒದಗಿಸುವರು, ಬಜೆಟ್ಟಿನಲ್ಲಿ ಹಣವಿರುವುದು, ಆದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಕಾರಣ ರಾಜಕೀಯ ವಿರಬೇಕು ಅಥವ ಅಧಿಕಾರಿಗಳಲ್ಲಿ ಕೆಲಸ ಮಾಡಲು ದಕ್ಷತೆ ಇಲ್ಲದೆ ಇರಬೇಕು. ಒಂದು ಕೆಲಸವನ್ನು ಒಂದು ತಾಲ್ಲೂಕಿಗೆ ಮಂಜೂರು ಮಾಡಿದ ಮೇಲೆ ಅದನ್ನು ಮಾಡದಿದ್ದರೆ, ಗೊತ್ತುಮಾಡಿರುವ ಕಾಲದೊಳಗೆ ಪೂರ್ಣ ಮಾಡದಿದ್ದರೆ ಸರಕಾರವಿದೆಯೋ ಎಂದು ಪ್ರಶ್ನೆ ಮಾಡಬೇಕಾಗುವುದು. ಅಧಿಕಾರಿಗಳು ಸಂಬಳ ಮಾತ್ರ ಸಕಾಲದಲ್ಲಿ ಪಡೆಯುವರು. ಒದಗಿಸಿರುವ ಹಣ ಹಾಗೆಯೇ ಉಳಿದರೆ ಯಾವ ರೀತಿ ಅಭಿವೃದ್ಧಿಯಾಗುವುದು ? ಇದರಿಂದ ರೈತರಿಗೆ ಅನುಕೂಲವಾಗುವುದಿಲ್ಲ.

ಇನ್ನೊಂದು ವಿಚಾರ ಹೇಳಿದ್ದಾರೆ, ರೈತರು ಉತ್ಪತ್ತಿ ಮಾಡುವ ಎಲ್ಲಾ ಪದಾರ್ಥಗಳನ್ನು ಮಾರುಕಟ್ಟೆಗೆ ಕಳಿಸಲು ಒಳ್ಳೆಯ ರಸ್ತೆ, ಸೇತುವೆ ಮುಂತಾದುವನ್ನು ಮಾಡಿರುವುದಾಗಿ ತಿಳಿಸಿದ್ದಾರೆ. ಹಳ್ಳಿ ಕಡೆ ಬಂದು ನೋಡಬೇಕು, ಎತ್ತಿನ ಗಾಡಿ ಬಂದರೆ ಕೆಲವು ಕಡೆ ಉರುಳಿಹೋಗುವುದು. ಅಲ್ಲಿ ಎಲ್ಲಿ ಸರಿಯಾದ ರಸ್ತೆ ಇದೆ ? ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ದೊರೆಯುವಂತೆ ಮಾಡಬೇಕಾದ್ದು ಸರಕಾರದ ಕರ್ತವ್ಯ. ಆದರೆ ಆ ಜವಾಬ್ದಾರಿ ಕೇಂದ್ರ ಸರಕಾರಕ್ಕೆ ಸೇರಿದೆ ಎಂದು ಹೇಳುವರು. ಹತ್ತು ವರ್ಷಗಳಿಂದ ಸರಿಯಾದ ಬೆಲೆ ಗೊತ್ತುಮಾಡಬೇಕೆಂದು ಹೇಳಿದರೂ ಇನ್ನೂ ಮಾಡುವುದರಲ್ಲೇ ಇದ್ದಾರೆ. ಹಾಗೆ ಮಾಡದಿದ್ದರೆ ರೈತರಿಗೆ ತಾವು ಬೆಳೆದ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಕ್ಕುವುದಿಲ್ಲ. ಆಹಾರ ಪದಾರ್ಥಗಳ ಉತ್ಪತ್ತಿ ಹೆಚ್ಚಿ ಅವು ಹೇರಳವಾಗಿ ಮಾರುಕಟ್ಟೆಯಲ್ಲಿ ದೊರೆಯುತ್ತಿರುವುದರಿಂದ ಆಹಾರ ಮಂತ್ರಿಗಳಿಗೆ ಸಂತೋಷವಾಗಿರಬಹುದು. ಈಗ ಅವರಿಗೇನೂ ಕೆಲಸವಿಲ್ಲ. ಬೇಕಾದಷ್ಟು ಧಾನ್ಯ ಬಂದು ಪ್ರಜೆಗಳಿಗೆ ಸಂತೋಷವಾಗಿದೆ. ಆದರೆ ರೈತರ ಕಣ್ಣೀರು ಅವರಿಗೆ ಗೊತ್ತಾಗುವುದಿಲ್ಲ. ಅದನ್ನು ನೋಡಿ ಅವರನ್ನೇಕೆ ಸಮಾಧಾನ ಮಾಡಬಾರದು ? ಆ ಬಗ್ಗೆ ಪ್ರಯತ್ನವೇಕಿಲ್ಲ ? ಸರಕಾರ ಹಾಗೆ ಮಾಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ.

ಪಾಠಶಾಲೆಗಳ ಸಂಖ್ಯೆ ಹೆಚ್ಚಿದೆ, ಇಷ್ಟು ಸಾವಿರ ಇವೆ ಎಂದು ತಿಳಿಸಿದ್ದಾರೆ. ಆದರೆ ಎಷ್ಟು ವಿದ್ಯಾರ್ಥಿಗಳು ಬಂದರು, ಎಷ್ಟು ಉಪಾಧ್ಯಾಯರಿದ್ದಾರೆ, ವರ್ಷಕ್ಕೆಷ್ಟು ದಿವಸ ಶಾಲೆಗೆ ಹೋಗುವರು ಎಂಬುದನ್ನು ನೋಡಬೇಕು. ಸೇಕಡ 50ರಷ್ಟು ಶಾಲೆಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಉಪಾಧ್ಯಾಯರು ಶಾಲೆಗೆ ಬಾರದಿದ್ದರೂ ಸಂಬಳ ಕೊಡುವ ವ್ಯವಸ್ಥೆ ಬಹಳ ಚೆನ್ನಾಗಿದೆ. ಹಾಗೆ ಮಾಡಿ ಅವರನ್ನು ಸಮಾಧಾನ ಮಾಡುವಂತೆ ರೈತರ ವಿಚಾರದಲ್ಲಿ ನಡೆದುಕೊಳ್ಳುತ್ತಿಲ್ಲ. ಕೇಳುವವರೂ ಹೇಳುವವರೂ ಇಲ್ಲ.

ಮಾರುಕಟ್ಟೆ ವ್ಯವಸ್ಥೆಯಾಗಿದ್ದರೂ ಬೆಂಗಳೂರು ಮಾರುಕಟ್ಟೆ ಎಷ್ಟುಮಟ್ಟಿಗೆ ಕೆಲಸಮಾಡುತ್ತಿದೆ ಎಂದು ನೋಡಿದರೆ ಗೊತ್ತಾಗುವುದು. ಹೇಗೆ ಹರಾಜಾಗುತ್ತಿದೆ, ಸರಿಯಾದ ಬೆಲೆ ದೊರೆಯುತ್ತಿದೆಯೇ ಎಂಬುದನ್ನು ಪರಿಶೀಲಿಸಿದರೆ ಇರುವ ಕಷ್ಟ ಗೊತ್ತಾಗುವುದು. ಇಲ್ಲದಿದ್ದರೆ ಗೊತ್ತಾಗುವುದಿಲ್ಲ. ಇದರಲ್ಲಿ ಅರ್ಥ ಮಂತ್ರಿಗಳ ತಪ್ಪಿಲ್ಲದಿರಬಹುದು, ಅವರು ಅರ್ಥಶಾಖೆ ಮಾತ್ರ ನೋಡಿಕೊಳ್ಳುವುದರಿಂದ ಹೀಗೆ ಆಗಿರಬಹುದು.

ವಿದ್ಯುಚ್ಛಕ್ತಿ ಮತ್ತು ವಿದ್ಯಾಭ್ಯಾಸದ ಬಾಬುಗಳಲ್ಲೂ ಕೂಡ ಪ್ರಗತಿ ಯಾಗಿದೆ ಎಂದು ಹೇಳಿದ್ದಾರೆ, ಅದನ್ನು ಕೂಡ ನಾನು ಒಪ್ಪುವುದಿಲ್ಲ. ಅದರ ಅನುಕೂಲತೆ ನಮಗೆ ದೊರೆಯದಿರುವಾಗ ನಮಗೆ ಎಳ್ಳಷ್ಟೂ ಸಮಾಧಾನವಾಗಿಲ್ಲ ಎಂದು ಹೇಳುತ್ತೇನೆ. ವಿದ್ಯುಚ್ಛಕ್ತಿ ಹೇರಳವಾಗಿ ದೊರೆಯುತ್ತಿದೆ, ಕಾಳಿನದಿ ಪ್ರಾಜೆಕ್ಟ್ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆದರೆ ಪಂಪು ಸೆಟ್ಟುಗಳಿಗೆ ಅಥವ ದೀಪಕ್ಕೆ ಅನೇಕ ಕಡೆ ಅದರ ಉಪಯೋಗ ದೊರೆತ್ತಿಲ್ಲ. 56 ರಿಂದ ಕೆಲವು ಅಂಕಿಅಂಶ ಕೊಟ್ಟಿದ್ದಾರೆ, ರಾಜ್ಯ ದೊಡ್ಡದಾದಮೇಲೆ ಎಷ್ಟು ಬೆಳೆಸಿದ್ದೇವೆಂಬುದನ್ನು ಹೇಳಿದ್ದಾರೆ. ಆದರೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಹೋಬಳಿ ಹೆಡ್‌ಕ್ವಾರ್ಟರುಗಳಿಗೆ ಕೂಡ ದೀಪದ ಸೌಕರ್ಯ ದೊರೆತಿಲ್ಲ. ಇದರಿಂದ ಪರಿಸ್ಥಿತಿ ಹೇಗಿದೆಎಂಬುದನ್ನು ಊಹಿಸಬಹುದು. ಇದು ತುಂಬಾ ಶೋಚನೀಯವಾಗಿದೆ.

ಸಣ್ಣ ಕೈಗಾರಿಕೆಗಳು ಸ್ಥಾಪನೆಯಾಗುತ್ತಿವೆ, ಷೆಡ್ಯೂಲ್ಡ್ ಬ್ಯಾಂಕುಗಳಿಂದ ಸಾಲ ಒದಗುತ್ತಿದೆ ಎಂದು ಹೇಳಿದ್ದಾರೆ. ಅಳಿಯನ ಕುರುಡು ಬೆಳಗಾದರ ಗೊತ್ತಾಗುವುದು, ಇನ್ನೊಂದು ವರ್ಷವಾದ ಮೇಲೆ ಬ್ಯಾಂಕು ಯಾವರೀತಿ ಸಹಾಯಮಾಡುವುದು ಎಂಬುದು ಗೊತ್ತಾಗುವುದು. ವಾಪಸು ಕೊಡಲು ಶಕ್ತಿ ಇರುವವರಿಗೆ ಬ್ಯಾಂಕುಗಳು ಸಹಾಯಮಾಡುವವೇ ಹೊರತು ಬಡವರಿಗೇನು ಸಹಾಯ ಮಾಡುವುವು ? ಇದು ಮಂತ್ರಿಗಳಿಗೆ ಅರ್ಥವಾಗಿಲ್ಲ. ದೀನದಲಿತರನ್ನು, ವಾಪಸು ಕೊಡಲು ಶಕ್ತಿ ಇಲ್ಲದಿರುವವರನ್ನು ಗಮನಿಸಿ ಅವರಿಗೆ ಸಹಾಯ ಮಾಡಿ ಅವರನ್ನು ಮುಂದಕ್ಕೆ ತಂದರೆ ಆಗ ಸಮತಾವಾದವಾಗುವುದು. ಬಡವರಿಗೆ ಬ್ಯಾಂಕು ಯಾವುದೇ ಅನುಕೂಲ ಮಾಡುತ್ತಿಲ್ಲ.

ವ್ಯವಸಾಯದ ಮಟ್ಟವನ್ನು ಬಹಳ ಹೆಚ್ಚುಮಾಡಲಾಗಿದೆ, 30 ಲಕ್ಷ ಇದ್ದ ಉತ್ಪತ್ತಿ ಈಗ 50 ಲಕ್ಷ ಆಗಿದೆ ಎಂದು ಹೇಳಿದ್ದಾರೆ. ಸರ್ಪ್ಲಸ್ ಆಗಿರುವುದು ಸಮಾಧಾನಕರವಾಗಿದೆ. ಆದರೆ ಮುಂದಿನ ವರ್ಷ ಸರ್ಪ್ಲಸ್ ಆಗುವುದು ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ, ಕಾರಣ ವ್ಯವಸಾಯಕ್ಕೆ ಬಹಳ ತೊಂದರೆಯಿದೆ. ನಮ್ಮ ರಾಜ್ಯದಲ್ಲಿ ಸೇಕಡ ಹತ್ತು ಭಾಗ ನೀರಾವರಿ ಇರುವುದರಿಂದ, ಸೇಕಡ 90 ಭಾಗ ಡ್ರೈ ಏರಿಯಾ ಆಗಿರುವುದರಿಂದ ರಿಸರ್ಚ್ ಇನ್‌ಸ್ಟಿಟ್ಯೂಟಿನವರು ರಿಸರ್ಚ್ ಮಾಡಿ ತಕ್ಕ ಪರಿಹಾರ ಕಂಡುಹಿಡಿಯಬೇಕು, ಹಾಗೆ ಮಾಡಿದರೆ ಅನುಕೂಲವಾಗುವುದು. ಅಲ್ಲದೆ ನಮ್ಮ ರಾಜ್ಯದಲ್ಲಿ ಟ್ರಾಕ್ಟರು ಮುಂತಾದ್ದನ್ನು ಒದಗಿಸಿದರೂ ಕೂಡ ಏಪ್ರಿಲ್ ಒಂದರಿಂದ ಇದನ್ನು ಕಾರ್ಪೊರೇಷನ್ನಿಗೆ ವಹಿಸುವುದರಿಂದ ಒಂದಕ್ಕೆರಡು ಬೆಲೆ ಕೊಡಬೇಕಾದ ಪರಿಸ್ಥಿತಿ ಬರುವುದು. 1-4-1970 ರಿಂದ ಬೋರ್‌ವೆಲ್‌ಗೆ ಒಂದು ಅಡಿಗೆ ಏಳೂವರೆ ರೂಪಾಯಿ ಕೊಡುತ್ತಿದ್ದುದು 25 ರೂಪಾಯಿ ಕೊಡಬೇಕಾಗುತ್ತದೆ, ಟ್ರಾಕ್ಟರಿಗೆ 35 ರೂಪಾಯಿ ಕೊಡುತ್ತಿದ್ದುದಕ್ಕೆ ಬದಲಾಗಿ 70 ರೂಪಾಯಿ ಕೊಡಬೇಕಾಗುತ್ತದೆ; ಬುಲ್‌ಡೋಜರುಗಳಿಗೆ ಒಂದು ಗಂಟೆಗೆ 35 ರೂಪಾಯಿ ಇದ್ದುದು 60-70 ಆಗುತ್ತದೆ. ಇದನ್ನೆಲ್ಲ ನೋಡಿದರೆ ರೈತನಿಗೆ ಏನು ಮಾಡುತ್ತಿದ್ದಾರೆಂದು ಕೇಳುತ್ತ ಇದ್ದೇನೆ. ಹೈಪ್ರೈಸ್ ಕಾರ್ಪೊರೇಷನ್ ಎಂದು ಹೇಳುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಟ್ರಾಕ್ಟರ್, ಬುಲ್‌ಡೋಜರ್, ಬೋರ್‌ವೆಲ್ ಮೆಷೀನ್, ಇವುಗಳಿಗೆಲ್ಲಾ ಬಾಡಿಗೆಯನ್ನು ಒಂದಕ್ಕೆರಡರಷ್ಟು ಏರಿಸಿದ್ದಾರೆ. ನೀರಾವರಿ ಅನುಕೂಲಗಳೇನೂ ಆಗಿಲ್ಲ. ಇದೆಲ್ಲ ಆದರೂ ಸೇಕಡ 90ರಷ್ಟು ಭಾಗ ಡ್ರೈ ಫಾರ್ಮಿಂಗ್ ಏರಿಯಾ ಇರುವುದಕ್ಕೆ ಏನೂ ಸಹಾಯ ಕೊಡುತ್ತಿಲ್ಲ. ಎಲೆಕ್ಟ್ರಿಸಿಟಿ ಬೋರ್ಡಿಗೆ ಒಂದು ಕಾರ್ಪೊರೇಷನ್ ಮಾಡಿದ್ದಾರೆ, ರಸ್ತೆ ಸಾರಿಗೆಗೆ ಒಂದು ಕಾರ್ಪೊರೇಷನ್ ಮಾಡಿದ್ದಾರೆ. ಹೀಗೆ ಎಲ್ಲಕ್ಕೂ ಒಂದೊಂದು ಕಾರ್ಪೊರೇಷನ್ ಮಾಡಿ ನಿಮ್ಮ ಜವಾಬ್ದಾರಿಯನ್ನು ಅವುಗಳಿಗೆ ವಹಿಸುವುದು ಕಾಣಿಸುತ್ತದೆ. ಎಲೆಕ್ಟ್ರಿಸಿಟಿ ಬೋರ್ಡಿಗೆ ಸಂಬಂಧಪಟ್ಟ ಹಾಗೆ ಅಡ್ವೈಸರಿ ಕಮಿಟಿಯನ್ನು ಮಾಡಿ ಆಯಾ ಡಿಸ್ಟ್ರಿಕ್ಟಿನ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ಮತ್ತು ಬೋರ್ಡಿನ ಗಮನಕ್ಕೆ ತರಬೇಕೆಂದು ಸರ್ಕಾರಿ ಆಜ್ಞೆಯಾಗಿ ಒಂದು ವರ್ಷವಾಗಿದೆ. ಇದುವರೆಗೂ ಯಾವ ಜಿಲ್ಲೆಯಲ್ಲಿಯೂ ಕಮಿಟಿಗಳನ್ನು ಮಾಡಿಲ್ಲ. ಎಲ್ಲ ಅನುಕೂಲಗಳನ್ನೂ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ.

ನಮ್ಮ ಅರ್ಥ ಸಚಿವರು ಕೊಟ್ಟಿರತಕ್ಕ ಕನ್ನಡ ಭಾಷೆಯ ಭಾಷಣವನ್ನು ಓದಿದರೆ ಸುಂದರವಾಗಿ ಪ್ರಿಂಟ್ ಮಾಡಿದ್ದಾರೆ, ಮುತ್ತಿನಂಥ ಮಾತುಗಳನ್ನು ಹೇಳಿದ್ದಾರೆ. ಇದು ಸರ್ಕಾರವನ್ನು ಕಾಪಾಡತಕ್ಕ ಭಾಷಣವಾಗಿದೆಯೇ ಹೊರತು ಜನತೆಯ ಅಥವಾ ಸಾಮಾನ್ಯ ಪ್ರಜೆಗಳ ಕಷ್ಟವನ್ನು ದೂರ ಮಾಡತಕ್ಕ ರೀತಿಯಲ್ಲಿಲ್ಲ. ಈಗಲಾದರೂ ಮಾನ್ಯ ಅರ್ಥ ಸಚಿವರು ಪ್ರತಿಯೊಂದು ಇಲಾಖೆಯಲ್ಲಿಯೂ ಯೋಜನೆಗಳು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬಂದಿವೆ ಎನ್ನುವುದನ್ನು ನೋಡಿ ಪುನಃ ಸ್ಟೇಟ್‌ಮೆಂಟನ್ನು ಕೊಟ್ಟರೆ ಬಹಳ ಸಂತೋಷವಾಗುತ್ತದೆ. ಸಹಕಾರ ಇಲಾಖೆ ಮತ್ತು ಸಹಕಾರ ಸಂಘಗಳ ಬಗ್ಗೆ ಅವರು ಆಡಿದಂಥ ಮಾತುಗಳನ್ನು ಮತ್ತು ಷೆಡ್ಯೂಲ್ ಬ್ಯಾಂಕುಗಳ ಬಗ್ಗೆ ಹೇಳಿರತಕ್ಕ ಮಾತುಗಳನ್ನು ಎರಡನ್ನೂ ಹೋಲಿಸಿ ನೋಡಿದರೆ ಎಷ್ಟರಮಟ್ಟಿಗೆ ನಮಗೆ ಅನುಕೂಲಗಳು

(ಶ್ರೀ ಜಿ. ರಾಮೇಗೌಡ)

ದೊರೆಯುತ್ತಿ ವೆಎನ್ನುವುದು ಅರ್ಥವಾಗುತ್ತದೆ. ಅದೇ ರೀತಿಯಲ್ಲಿ ಎಲ್ಲ ಇಲಾಖೆಗಳನ್ನೂ ನೋಡಿ ಹೇಳಬೇಕು. ಸಹಕಾರ ಇಲಾಖೆ ಒಂದನ್ನೇ ಕುರಿತು ಅವರು ಹೇಳಿದರೆ ಸಾಲದು. ನೀರಾವರಿ ಇಲಾಖೆ, ವ್ಯವಸಾಯ ಇಲಾಖೆ ಮತ್ತು ಎಲೆಕ್ಟ್ರಿಸಿಟಿ ಬೋರ್ಡ್ ಹೀಗೆ ಎಲ್ಲ ಇಲಾಖೆಗಳನ್ನೂ ತೆಗೆದು ಕೊಂಡು ಏನು ಪರಿಣಾಮ ತೋರಿಸಿದ್ದಾರೆ. ಏನೇನು ಕಾರ್ಯರೂಪಕ್ಕೆ ತಂದಿದ್ದಾರೆ, ಕೊಟ್ಟ ಹಣ ದಲ್ಲಿ ಎಷ್ಟು ಖರ್ಚು ಮಾಡಿದ್ದಾರೆ ಎನ್ನುವುದನ್ನೆಲ್ಲ ವಿಚಾರ ಮಾಡಿ, ಜನರ ಕಷ್ಟಗಳನ್ನು ನಿವಾರಣೆ ಮಾಡುವಂತಾದರೆ, ಖಂಡಿತವಾಗಿ ಅವರ ಭಾಷಣದಲ್ಲಿ ಸವಿ ನುಡಿ ಇದೆ ಮತ್ತು ಅದರಿಂದ ಸಾಮಾನ್ಯ ಜನತೆಗೆ ಅನುಕೂಲವಾಗುತ್ತದೆ ಎಂದು ಹೇಳಬಹುದು. ಇಲ್ಲದೆ ಇದ್ದರೆ ಜನತೆಯ ಮೇಲೆ ಪ್ರೀತಿ ಇಲ್ಲ, ಸರ್ಕಾರದ ಮೇಲೆ ಪ್ರೀತಿ ಇದೆ, ಸರ್ಕಾರದ ಆಡಳಿತವನ್ನು ಕಾಪಾಡುವುದಕ್ಕೆ ಅವರ ಭಾಷಣ ವಿದೆ, ಸಾಮಾನ್ಯ ಜನರ ಹಿತ ಮತ್ತು ಕಷ್ಟ ನಿಷ್ಠೂರವನ್ನು ನಿವಾರಿಸಿ ಜನರನ್ನು ಕಾಪಾಡಬೇಕು ಎನ್ನುವ ಉದ್ದೇಶವಿಲ್ಲ ಎಂದು ಅರ್ಥವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಆದುದರಿಂದ ಮಾನ್ಯ ಅರ್ಥಸಚಿವರು ಯಾವುದೇ ಕಾರ್ಯಗಳಿಗೆ ಒದಗಿಸಿದಂಥ ಹಣ ಸರಿಯಾಗಿ ಖರ್ಚಾಗುವಂತೆ ನೋಡಿಕೊಳ್ಳಬೇಕು. ಕೆಲವು ಬಾಬುಗಳಲ್ಲಿ ಕೊಟ್ಟಂಥ ಹಣಕ್ಕಿಂತ ಹೆಚ್ಚು ಖರ್ಚಾಗಿದೆ. ಬಹುಶಃ ರಾಜಕೀಯ ದೃಷ್ಟಿಯಿಂದ ಒಂದೆರಡು ಕಡೆಗಳಲ್ಲಿ ದುಡ್ಡು ಹೆಚ್ಚು ಖರ್ಚಾಗುವ ಪರಿಸ್ಥಿತಿ ಬಂದಾಗ ಮಾತ್ರ ಹಾಗೆ ಖರ್ಚಾಗಿದೆಯೋ ಏನೋ ಎಂದು ನನಗನ್ನಿಸುತ್ತದೆ. ಸಾಮಾನ್ಯ ಜನತೆಗೆ ಬೇಕಾ ಗಿರತಕ್ಕ ಕೆಲವು ಹಣವನ್ನು ಖರ್ಚುಮಾಡಿದ್ದಾರೆಯೇ ಎಂಬುದನ್ನು ನೋಡಬೇಕು.

ಕೆಲವು ಬಾಬುಗಳ ಮೇಲೆ ಮಾರಾಟ ತೆರಿಗೆಯನ್ನು ಹೆಚ್ಚಿಸಬೇಕು ಎಂದು ಹೇಳಿದ್ದಾರೆ. ಮಾರಾಟ ತೆರಿಗೆ ಹೋಗಬೇಕು ಎಂದು ಹೇಳುವಾಗ ಇನ್ನೂ ಹೆಚ್ಚಾಗಿ ಹಾಕಬೇಕೆಂದು ಹೇಳುವುದು ಸರಿಯಲ್ಲ. ಎಲೆಕ್ಟ್ರಿಸಿಟಿ ಡ್ಯೂಟಿ 50 ಪರ್ಸೆಂಟ್ ಹೆಚ್ಚಿಸಿದ್ದಾರೆ. ಇವುಗಳಿಂದ ರೈತನಿಗೆ ಇರತಕ್ಕ ಭಾರವನ್ನು ಇನ್ನೂ ಹೆಚ್ಚು ಮಾಡಿದಂತಾಗುತ್ತದೆ. ಅರ್ಥ ಸಚಿವರ ಭಾಷಣದಲ್ಲಿ ಹೇಳಿದ್ದಾರೆ, ಸ್ವಲ್ಪ ಭಾರ ಹೊರಿಸಿದ್ದೇವೆಂದು. ಸ್ವಲ್ಪ ಸ್ವಲ್ಪವಾಗಿಯೇ ಹೊರಿಸುತ್ತ ಬಂದು ಅವರನ್ನು ಮುಳುಗಿಸಿಬಿಡುತ್ತಾರೆ. ಆದಷ್ಟು ಜಾಗ್ರತೆ ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಬದಲಾ ವಣೆಗಳನ್ನು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಹಣಕಾಸಿನ ಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ಸಂಪೂರ್ಣವಾಗಿ ಸ್ವಾಗತ ಮಾಡಿ ಕೆಲವು ಸಲಹೆಗಳನ್ನು ಹೇಳುವುದಕ್ಕೆ ಎದ್ದು ನಿಂತಿದ್ದೇನೆ. ಅನೇಕರು ಆ ಕಡೆ ಭಾಗದಲ್ಲಿರುವವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಇದುವರೆಗೂ ಏನೂ ಕೆಲಸಗಳನ್ನು ಮಾಡಲಿಲ್ಲವೆಂದು ಹೇಳುತ್ತಿದ್ದಾರೆ ಅದು ಸತ್ಯಕ್ಕೆ ದೂರವಾದ ಮಾತು. ಆ ರೀತಿ ಹೇಳಬಾರದು. ಆಗಿರುವ ಕೆಲಸಗಳ ಬಗ್ಗೆ ಹೇಳಿ, ಇನ್ನೂ ಹೆಚ್ಚು ಕೆಲಸಗಳಾಗಬೇಕಾಗಿದೆ ಎಂದು ಸಲಹೆ ಮಾಡಬಹುದೇ ಹೊರತು 23 ವರ್ಷಗಳಿಂದ ಕಾಂಗ್ರೆಸ್ ನವರು ಏನೂ ಮಾಡಿಲ್ಲವೆಂದು ಹೇಳುವುದು ಸತ್ಯಕ್ಕೆ ದೂರವಾದುದು.

ಈಗ ಮಾರಾಟ ತೆರಿಗೆಯನ್ನು ಜಾಸ್ತಿ ಮಾಡುವುದು ಅಷ್ಟು ಒಳ್ಳೆಯದಲ್ಲ. ವಸೂಲಾತಿ ಯನ್ನು ಬಿಗಿಪಡಿಸಿದರೆ ಬೇಕಾದಷ್ಟು ವರಮಾನ ನಮಗೆ ಬರಬಹುದು. ಈ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಕೆಲಸಗಳು ನಡೆಯುತ್ತಿಲ್ಲ. ಅಧಿಕಾರಿಗಳಿಗೆ ಕೈಗೆ ಹಾಕುತ್ತಾರೆ, ಮತ್ತು ಇದರಿಂದ ಸರ್ಕಾರಕ್ಕೆ ಬರಬೇಕಾದಷ್ಟು ದುಡ್ಡು ಬರುತ್ತಿಲ್ಲ. ಇಲಾಖೆಯಲ್ಲಿ ಬೇರೆ ರೀತಿ ಕೈವಾಡ ವಿಲ್ಲದಂತೆ ಸರಿಪಡಿಸಬೇಕು. ಜನರ ಮೇಲೆ ತೆರಿಗೆಗಳನ್ನು ಹೆಚ್ಚು ಮಾಡಿ ಅವರಿಗೆ ತೊಂದರೆ ಕೊಡುತ್ತಿದ್ದೇವೆ. ತೆರಿಗೆ ಹೆಚ್ಚು ಮಾಡಿದಷ್ಟೂ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಸಹ ಹೆಚ್ಚು ಅನುಕೂಲವಾಗುತ್ತದೆ. ಆದುದರಿಂದ ಇದರ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರಕ್ಕೆ ಬರಬೇಕಾದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬೇಕು, ಈ ದಿಸೆಯಲ್ಲಿ ಪ್ರಯತ್ನ ಮಾಡಬೇಕು ಎಂದು ಹೇಳು ತ್ತಿದ್ದೇನೆ. ಹಣವಂತರು ಉಪಯೋಗ ಮಾಡುವಂಥ ವಸ್ತುಗಳಮೇಲೆ ಬೇಕಾದರೆ ತೆರಿಗೆಯನ್ನು ಜಾಸ್ತಿ ಮಾಡಿ. ಅಂಥದನ್ನು ಬಿಟ್ಟು ಬಡವರ ಮೇಲೆ ತೆರಿಗೆ ಹಾಕುವುದು ಚೆನ್ನಾಗಿಲ್ಲ.

ಆರ್.ಟಿ.ಒ. ಆಫೀಸಿಗೆ ಹೋಗಿ ಒಂದು ಕಾರನ್ನು ಒಬ್ಬರಿಂದ ಮತ್ತೊಬ್ಬರಿಗೆ ಟ್ರಾನ್ಸ್‌ಫರ್ ಮಾಡಿಸಿ ಕೊಡುವುದಕ್ಕೆ ನೂರಿನ್ನೂರು ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಅಂಥದಕ್ಕೆ ಬೇಕಾದರೆ ಟ್ಯಾಕ್ಸ್ ಹಾಕಿ. ಇಂಥ ವ್ಯಾಪಾರಗಳು ಲೆಕ್ಕಕ್ಕೇ ಬರುವುದಿಲ್ಲ. ಇಂಥವರನ್ನು ಕಂಡುಹಿಡಿದು, ಅವರ ಮೇಲೆ ತೆರಿಗೆಯನ್ನು ಹಾಕಿದರೆ ಅನುಕೂಲವಾಗುತ್ತದೆ. ಹಾಗೆ ಮಾಡದೆ ಪದೇ ಪದೇ ಬಡ ಜನರ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿಕೊಂಡು ಹೋದರೆ ಬಡವರಿಗೆ ತೊಂದರೆಯಾಗುತ್ತದೆ, ಕಷ್ಟವಾಗುತ್ತದೆ. ಇದನ್ನು ಬಿಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಬೆಂಗಳೂರಿನಲ್ಲಿ ಜನಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತದೆ ಮತ್ತು ಬೆಂಗಳೂರು ನಗರವೂ ಬೆಳೆಯುತ್ತದೆ, ಅನೇಕ ಕಡೆಗಳಿಂದ ಬೆಂಗಳೂರಿಗೆ ಜನ ಬಂದು ನೆಲಸುತ್ತಿದ್ದಾರೆ. ಬೆಂಗಳೂರಿನ ನಾಗರಿಕರು ಉತ್ತಮರು, ಬರಮಾಡಿಕೊಳ್ಳುತ್ತಾರೆ; ಬೇಕಾದಷ್ಟು ಅನುಕೂಲ ಮಾಡಿಕೊಡುತ್ತಾರೆ. ಜನಸಂಖ್ಯೆ ಜಾಸ್ತಿ ಆಗಿರುವುದರಿಂದ ಬೆಂಗಳೂರಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಸಾಲದು ಆಸ್ಪತ್ರೆ ಸೌಕರ್ಯವನ್ನು ಹೆಚ್ಚು ಮಾಡಿ ಅನುಕೂಲ ಮಾಡಿಕೊಡಬೇಕು. ನಗರದಲ್ಲಿ ಸಿಟಿ ಮತ್ತು ಕಂಟೋನ್ಮೆಂಟ್ ಭಾಗ ಎಂದು ಇದೆ. ಕಂಟೋನ್ಮೆಂಟ್ ಭಾಗದ ಜನಗಳಿಗೆ ಬಹಳ ಅನ್ಯಾಯವಾಗಿದೆ. ಅಲ್ಲಿ ಒಂದು ಸರ್ಕಾರಿ ಕಾಲೇಜಿಲ್ಲ, ಒಂದು ಆಸ್ಪತ್ರೆ ಇಲ್ಲ, ಸಿಟಿ ಭಾಗಕ್ಕೆ ಅನುಕೂಲವಾಗುವಂತೆ ವಿಕ್ಟೋರಿಯಾ ಆಸ್ಪತ್ರೆ ಇದೆ. ಕಂಟೋನ್ಮೆಂಟ್ ಭಾಗಕ್ಕೆ ಬೌರಿಂಗ್ ಆಸ್ಪತ್ರೆ ಇದೆ. ಈ ಆಸ್ಪತ್ರೆಯನ್ನು ಕಟ್ಟಿ ನೂರು ವರ್ಷವಾಯಿತು. ರೋಗಿಗಳೆಲ್ಲಾ ಕೆಳಗಡೆ ಮತ್ತು ವರಾಂಡದಲ್ಲಿ ಮಲಗಿರಬೇಕಾಗಿದೆ. ಈ ತರಹ ಅನ್ಯಾಯ ನಡೆಯುತ್ತಿದೆ. ದಯವಿಟ್ಟು ಇದರ ಕಡೆಗೆ ಹೆಚ್ಚು ಗಮನ ಕೊಡಬೇಕು. ಈಗ ಪೇಶೆಂಟ್ಸ್ ಜಾಸ್ತಿಯಾಗಿದ್ದಾರೆ. ಆದುದರಿಂದ ಈ ಬಾಬಿಗೆ ಹೆಚ್ಚು ಹಣ ಒದಗಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಸೌಕರ್ಯವಿಲ್ಲದೆ ರೋಗಿಗಳು ಸಾಯುತ್ತಿದ್ದಾರೆ. ಈ ಬಾಬಿಗೆ ಹೆಚ್ಚು ಹಣ ಒದಗಿಸಿ ಒಂದು ಆಸ್ಪತ್ರೆ ಕಟ್ಟಿಸಿ ಕೊಡುವುದಕ್ಕಾಗಿ ಪ್ರಯತ್ನ ಮಾಡಬೇಕು. ಆದುದರಿಂದ ಇದಕ್ಕೆ ಹೆಚ್ಚು ಗಮನ ಕೊಡಬೇಕು ಎಂದು ಹೇಳುತ್ತೇನೆ.

ಮೈಸೂರು ಲಾಟರಿ ಪ್ರಾರಂಭ ಮಾಡಿದ್ದು ಒಳ್ಳೆಯದು. ಇದರಲ್ಲಿ ಬರುವ ದುಡ್ಡಿನಿಂದ ಜನರಲ್ ಆಸ್ಪತ್ರೆ ಕಟ್ಟಿಸಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕಾರ್ಪೊರೇಷನ್ ಏರಿಯಾದಲ್ಲಿ ಹೆರಿಗೆ ಆಸ್ಪತ್ರೆ ಕಟ್ಟಿಸುವುದಕ್ಕೆ 50 ಸಾವಿರ 30 ಸಾವಿರ ದಾನ ಕೊಟ್ಟವರ ಹೆಸರು ಆಸ್ಪತ್ರೆಗೆ ಇಡಗಿದರೆ, ಬೆಂಗಳೂರು ನಗರದಲ್ಲಿ ಕಾಣಿಕೆ ಕೊಡತಕ್ಕಂಥವರು ಬಹಳ ಜನ ಇದ್ದಾರೆ. ಮಾನ್ಯ ಆರೋಗ್ಯ ಮಂತ್ರಿಗಳು ಅಂಥವರನ್ನು ಬರಮಾಡಿಕೊಂಡು ಒಂದೊಂದು ರೂಮು ಕಟ್ಟಿಸಿ ಕೊಡಿ ಎಂದು ಕೇಳಿದರೆ ಅನೇಕರು ಕಟ್ಟಿಸಿಕೊಡುತ್ತಾರೆ. ಆದುದರಿಂದ ಇದಕ್ಕೆ ಹೆಚ್ಚು ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಬಿ.ಟಿ.ಎಸ್. ಬಸ್ಸು ಸರ್ವಿಸಿನಲ್ಲಿ ಬಹಳ ಲುಕ್ಸಾನವಾಗುತ್ತಾ ಇದೆ. ಇದರಲ್ಲಿ ನ್ಯಾಯವಾಗಿ ಯಾರೂ ನಡೆಯುತ್ತಿಲ್ಲ. ಕಂಡಕ್ಟರ್, ಡ್ರೈವರ್, ಇನ್‌ಸ್ಪೆಕ್ಟರ್ ಅಂಥವರಿಗೆ ಮಾತ್ರ ಅನುಕೂಲ ಮಾಡಿ ಕೊಟ್ಟಿದ್ದೀರಿ. ಅನೇಕ ಕಂಡಕ್ಟರ್ ಡ್ರೈವರುಗಳು ಆಸ್ತಿ ಮಾಡಿಕೊಂಡಿದ್ದಾರೆ. ಈ ಬಗ್ಗೆ ಸರಿಯಾಗಿ ಗಮನ ಕೊಡುತ್ತಾ ಇಲ್ಲ. ಟಿಕೆಟ್ ದರ ಮಾತ್ರ ಹೆಚ್ಚು ಮಾಡುತ್ತೀರಿ. ಇದರಿಂದ ಪ್ರಯೋಜನವಾಗುತ್ತಿಲ್ಲ. ಕಂಡಕ್ಟರ್, ಡ್ರೈವರ್, ಇನ್‌ಸ್ಪೆಕ್ಟರ್ ಇವರ ದರಬಾರ ನಡೆದಿದೆ. ಜನಗಳಿಗೆ ಅನುಕೂಲ ಮಾಡಿ ಕೊಡದೇ ಇರುವುದರಿಂದ ಅನ್ಯಾಯವಾಗುತ್ತಿದೆ. ಆಫೀಸ್ ಟೈಂನಲ್ಲಿ ಪೀಕ್ ಅವರ್ಸ್‌ನಲ್ಲಿ ಹೆಚ್ಚು ಬಸ್ಸು ಓಡಿಸಬೇಕು ಎಂದು ಅಧಿಕಾರಿಗಳಿಗೆ ಕಾಗದ ಬರೆದದ್ದಾಯಿತು. ಅವರು ಇದುವರೆಗೆ ಇದಕ್ಕೆ ಗಮನ ಕೊಡಲಿಲ್ಲ. ಅಧಿಕಾರಿಗಳು ಮನೆ ಮಾಡಿಕೊಂಡು ಇರುವ ಕಡೆ 5 ನಿಮಿಷಕ್ಕೆ 7 ನಿಮಿಷಕ್ಕೆ ಬಸ್ಸು ಓಡುತ್ತವೆ. ಆದರೆ ಬಡವರು ಇದ್ದ ಕಡೆ ಬಸ್ಸು ಓಡಿಸಲು ಗಮನ ಬರುವುದಿಲ್ಲ. ಇದನ್ನು ಮಂತ್ರಿಗಳ ಗಮನಕ್ಕೆ ನಾನು ತಂದಿದ್ದೇನೆ, ಫೋನ್ ಮಾಡಿ ಎರಡು ಮೂರು ಸಲ ಹೇಳಿದ್ದೇನೆ. ಅಲಸೂರಿನಿಂದ ಬರುವ ಸರಕಾರಿ ನೌಕರರಿಗೆ ಬಸ್ಸುಗಳ ಅನುಕೂಲತೆ ಇಲ್ಲ. ಇಂದಿರಾ ನಗರದಿಂದ ಬರುವವರಿಗಂತೂ ಬಹಳ ತೊಂದರೆಯಾಗಿದೆ. ಆದರೂ ಕೂಡ ಗಮನ ಕೊಟ್ಟಿಲ್ಲ. ಅಧಿಕಾರಿಗಳ ದರಬಾರು ನಡೆದಿವೆ. ಇದರಿಂದ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆ ಅಧಿಕಾರಿಗಳು ಸರಿಯಾಗಿ ನಡೆದುಕೊಂಡರೆ ಟ್ಯಾಕ್ಸ್ ಹೆಚ್ಚು ಮಾಡಬೇಕಾಗಿಲ್ಲ. ಎಲ್ಲರೂ ಆತ್ಮ ಸಾಕ್ಷಿಯಾಗಿ ಕೆಲಸ ಮಾಡಬೇಕು. ಬರೀ ಟ್ಯಾಕ್ಸ್ ಹೆಚ್ಚು ಮಾಡಿದರೆ ಸರಕಾರಕ್ಕೆ ಒಳ್ಳೇ ಹೆಸರು ಬರುವುದಿಲ್ಲ. ನೌಕರರು ದುಡ್ಡು ತಿನ್ನುವುದನ್ನು ನಿಲ್ಲಿಸಬೇಕು. ಬರೀ ಭಾಷಣ ಮಾಡುವುದರಿಂದ ಯಾವ ಪ್ರಯೋಜನವಾಗುವುದಿಲ್ಲ. ಸಭೆಯ ಆ ಕಡೆಯವರು ಸರಕಾರದ ಮೇಲೆ ಟೀಕೆ ಮಾಡಿದ್ದಾರೆ. ಅವರು ಅಧಿಕಾರಕ್ಕೆ ಬಂದರೂ ಕೂಡ ಅವರ ಕೈಯಿಂದ ಇದನ್ನು ಮಾಡಲು ಆಗುವುದಿಲ್ಲ. ಆದುದರಿಂದ ಸರಕಾರ ಇದಕ್ಕೆ ಹೆಚ್ಚು ಗಮನ ಕೊಡಬೇಕು ಎಂದು ಕೇಳುತ್ತೇನೆ.

ಬೆಂಗಳೂರು ಕಾರ್ಪೊರೇಷನ್ ಏರಿಯಾದಲ್ಲಿ ಪ್ರಾಪರ್ಟಿ ಟ್ಯಾಕ್ಸ 50 ಪರ್ಸೆಂಟ್ ಹೆಚ್ಚು ಹಾಕಬೇಕು ಎಂದು ಇರುವುದು ಬಹಳ ಕಷ್ಟ ಎಂದು ಹೇಳುತ್ತೇನೆ. ಲ್ಯಾಂಡ್ ಟ್ಯಾಕ್ಸ ಒಂದು ಇರಲಿ. ಅದನ್ನು ತೆಗೆಯಬೇಡಿ. ಅದರಿಂದ ತೊಂದರೆ ಏನೂ ಇಲ್ಲ. ಪ್ರಾಪರ್ಟಿ ಟ್ಯಾಕ್ಸ 50 ಪರ್ಸೆಂಟ್ ಹೆಚ್ಚು ಮಾಡಿದರೆ ಬಡವರಿಗೆ ಬಹಳ ತೊಂದರೆಯಾಗುತ್ತದೆ. ಟ್ಯಾಕ್ಸ ಜಾಸ್ತಿಯಾದರೆ ಮನೆಯ ಬಾಡಿಗೆ ಜಾಸ್ತಿ ಮಾಡುತ್ತಾರೆ. ಆದುದರಿಂದ 50 ಪರ್ಸೆಂಟ್ ಹಾಕುವುದನ್ನು

(ಶ್ರೀ ಎ. ನಂಜಪ್ಪ)

ನಿಲ್ಲಿಸಬೇಕು. ಅನೇಕ ಮನೆಗಳನ್ನು ಕಟ್ಟಿಸಿಕೊಂಡವರಿಗೆ ಟ್ಯಾಕ್ಸ್ ಇಲ್ಲ, ರೆವೆನ್ಯೂ ಲ್ಯಾಂಡನಲ್ಲಿ ಮನೆ ಇದ್ದವರಿಗೆ ಟ್ಯಾಕ್ಸ ಇಲ್ಲ. ಅಧಿಕಾರಿಗಳು ಇದನ್ನು ಸರಿಯಾಗಿ ಗಮನಿಸುವುದಿಲ್ಲ. ಈ ಮಾನ್ಯ ಸಭೆಯಲ್ಲಿ ಹೇಳಿದ್ದೇನೆ, ಮಂತ್ರಿಗಳಿಗೆ ಹೇಳಿದ್ದೇನೆ. ಇಂದು ಮನೆ ಕಟ್ಟಲು ನ್ಯಾಯವಾಗಿ ಕೇಳಿದರೆ ಪ್ಲಾನ್ ಸಿಕ್ಕುವುದಿಲ್ಲ. ದುಡ್ಡು ಕೊಟ್ಟರೆ ಕೆಲಸವಾಗುತ್ತದೆ. ಪ್ಲ್ಯಾನ್ ಇಲ್ಲದೇ ಎಷ್ಟೋ ಮನೆಗಳನ್ನು ಕಟ್ಟಿದ್ದಾರೆ. ಅದು ಯಾರ ಗಮನಕ್ಕೂ ಬರುವುದಿಲ್ಲ. ಬಡವನಾದರೆ ಅವನನ್ನು ಬಲಿ ಹಾಕುತ್ತಾರೆ, ಬಡವನಿಗೆ ಫೈನು ಹಾಕುತ್ತಾರೆ, ಮನೆ ಡಿಮಾಲಿಶ್ ಮಾಡಿ ಎಂದು ಕೇಳುತ್ತಾರೆ. ಇದನ್ನು ಕೂಡಲೇ ಸರಿಪಡಿಸಬೇಕು. ಇನ್ನೂ ಅನೇಕ ವಿಷಯ ಹೇಳಬೇಕಾಗಿದೆ. ಕಾಲಾವಕಾಶವಿಲ್ಲ. ಮುನಿಸಿಪಲ್ ಆಡ್ಮಿನಿಸ್ಟ್ರೇಷನ್ ಚರ್ಚೆಗೆ ಬಂದಾಗ್ಗೆ ವಿವರವಾಗಿ ಹೇಳುತ್ತೇನೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣ ಮುಗಿಸುತ್ತೇನೆ.

† ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು-1).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಶಾಖೆಯ ಮಂತ್ರಿಗಳು ತಮ್ಮ ಐದನೇ ಆಯವ್ಯಯ ಪಟ್ಟಿಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅರ್ಥ ಮಂತ್ರಿಗಳು ಭಾಷಣವನ್ನು ಮುದ್ದಾಗಿ ಓದುವಾಗ ಸಭೆ ಅದನ್ನು ಕೇಳುವಾಗ ನಮಗೆ ಅನಿಸಿದ್ದೇನೆಂದರೆ ಮೈಸೂರು ದೇಶದ ಬಗ್ಗೆ ಅವರ ಆಶೆ ಆಕಾಂಕ್ಷೆಗಳು ಏನು ಇವೆ, ಪ್ರತಿಯೊಂದು ಭಾಗದ ಅಭಿವೃದ್ಧಿ ಆಗಬೇಕಾದರೆ ಏನು ಮಾಡಬೇಕು ಎನ್ನುವುದನ್ನು ಅವರು ಚೆನ್ನಾಗಿ ಅರ್ಥ ಮಾಡಿಕೊಂಡಿರುವ ಅರಿವು ಆಗುತ್ತದೆ. ಅವರ ಭಾಷಣ ಸ್ಫೂರ್ತಿದಾಯಕವಾಗಿದೆ. ಮೈಸೂರು ರಾಜ್ಯದಲ್ಲಿ ಪ್ರಗತಿಯಾಗಿದೆ. ದೇಶದ ಜನತೆ ಸುಭದ್ರ ಜೀವನ ನಡೆಸಲು ಯಾವ ಯಾವ ಕಾರ್ಯಕಲಾಪ ಮಾಡುತ್ತಿದ್ದೇವೆ ಇದರ ರೂಪ ರೇಷೆ ಹಾಕಿ ಜನರಲ್ಲಿ ಒಂದು ರೀತಿ ಆಕಾಂಕ್ಷೆ ಹುಟ್ಟಿಸಿದ್ದಾರೆ. ಇವರ ಭಾಷಣವನ್ನು ಜನರು ಸ್ವಾಗತಿಸುತ್ತಾರೆ.

ಮಾನ್ಯ ಅರ್ಥ ಸಚಿವರು ನೀರಾವರಿ ಬಗ್ಗೆ ಉತ್ತಮ ರೀತಿಯಲ್ಲಿ ಉಲ್ಲೇಖಿಸಿದ್ದಾರೆ. ಮೈಸೂರು ರಾಜ್ಯದಲ್ಲಿ ನೀರಾವರಿ ಬಗ್ಗೆ ಈಗಾಗಲೇ ಸೂಕ್ತ ಕ್ರಮ ಕೈಕೊಂಡಿದ್ದಾರೆ. ಇಷ್ಟು ಆರ್ಥಿಕ ಮುಗ್ಗಟ್ಟು ಇದ್ದರೂ ಕೂಡ ನಿರಾವರಿಗೆ ಪ್ರಥಮ ಸ್ಥಾನ ಕೊಟ್ಟು ಆಂಧ್ರ ಕೇರಳ ಮದ್ರಾಸಿನಲ್ಲಿ ಯಾವ ರೀತಿ ನೀರಾವರಿ ಸೌಲಭ್ಯ ಸಿಕ್ಕುತ್ತಿದೆಯೋ ಅದೇ ರೀತಿ ಮೈಸೂರು ರಾಜ್ಯದಲ್ಲಿ ಕೂಡ ನೀರಾವರಿ ಸೌಲಭ್ಯ ಒದಗಿಸಿ ಕೊಡಬೇಕು ಎಂದು ಈಗಾಗಲೇ ಕಾರ್ಯಕ್ರಮ ಕೈಕೊಂಡಿದ್ದಾರೆ. ಈಗಾಗಲೇ ಕೈಕೊಂಡಿರುವುದನ್ನು ಮುಂದುವರಿಸುತ್ತಿದ್ದಾರೆ. ಇದರಿಂದ ಜನ ಸೌಲಭ್ಯ ಪಡೆಯಬಹುದು. ನಾನು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದವನಾದುದರಿಂದ ನಮ್ಮ ಜಿಲ್ಲೆಯ ಪರವಾಗಿ ಅಷ್ಟೇ ಮಾತನಾಡುವುದಿಲ್ಲ. ಇಡೀ ರಾಜ್ಯದ ಪರವಾಗಿ ಮಾತನಾಡಲು ಆಶೆ ಪಡುತ್ತೇನೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿಹಿ ನೀರಿನ 22 ನದಿಗಳಿವೆ. ಪಶ್ಚಿಮ ಘಟ್ಟದಿಂದ ಇಳಿದು ಬಂದು ಈ ನೀರು ಹರಿದು ಹೋಗಿ ಸಮುದ್ರಕ್ಕೆ ಸೇರುತ್ತದೆ. ಪಂಪುಸೆಟ್ಟು ಮುಖಾಂತರ ಈ ನೀರನ್ನು ಉಪಯೋಗಿಸಿಕೊಂಡರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1,60,000 ಎಕರೆ ಜಮೀನು ನೀರಾವರಿಯಾಗುವುದರಿಂದ ಎರಡನೇ ಬೆಳೆ ಮೂರನೇ ಬೆಳೆ ತೆಗೆಯಲು ಉಪಯೋಗಿಸಿಕೊಂಡರೆ ಮೈಸೂರು ರಾಜ್ಯದಲ್ಲಿ ಮಾತ್ರವಲ್ಲ ಇಡೀ ದೇಶಕ್ಕೆ ಆಹಾರ ಧಾನ್ಯ ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲು ಸಾಧ್ಯವಿದೆ. ಆಯವ್ಯಯ ಪಟ್ಟಿಯಲ್ಲಿ ಇದರ ಬಗ್ಗೆ ಗಮನ ಸೆಳೆಯದೇ ಇರತಕ್ಕಂಥಾದ್ದು ವಿಷಾದಕರ. ಇಡೀ ಮೈಸೂರು ರಾಜ್ಯದಲ್ಲಿ ಏಕ ಕಾಲಕ್ಕೆ ಪ್ರಗತಿಯಾಗಬೇಕು. ಒಂದು ಲಕ್ಷ ಬಾವಿ ತೋಡಿಸಿ ವ್ಯವಸಾಯಕ್ಕೆ ನೀರು ಒದಗಿಸಲು ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರು ದಿನೇ ದಿನೇ ಹರಿದು ಹೋಗುತ್ತಿದ್ದರೂ ಕೂಡ ಸರಕಾರ ಇದಕ್ಕೆ ಏತಕ್ಕೆ ಗಮನ ಕೊಡಬಾರದು ಎಂದು ಒತ್ತಿ ಹೇಳಲು ಆಶೆ ಪಡುತ್ತೇನೆ.

ಸ್ವಾಮಿ, ಸಂಸ್ಥಾನದ ಇತರೇ ಭಾಗಗಳಿಗೆ ಒದಗಿಸಿರುವಂತೆ ನಮ್ಮ ದ. ಕ. ಜಿಲ್ಲೆಯ ಜನರಿಗೂ ಒಂದೂವರೆ ಸಾವಿರ ಪಂಪ್‌ಸೆಟ್ಟುಗಳನ್ನು ಒದಗಿಸಿದ್ದಾರೆ. ಆದರೆ ಆ ಜಿಲ್ಲೆಗೆ ಏಕೆ ಇನ್ನೂ ಹೆಚ್ಚಿಗೆ ಒದಗಿಸಬಾರದಾಗಿತ್ತು ಎಂದು ಕೇಳುತ್ತೇನೆ? ಆ ಜಿಲ್ಲೆಗೆ ಹೆಚ್ಚು ಪಂಪ್‌ಸೆಟ್ಟುಗಳನ್ನೂ ಮತ್ತು ವಿದ್ಯುಚ್ಛಕ್ತಿಯನ್ನೂ ಒದಗಿಸಿದ್ದರೆ ನಮ್ಮ ರಾಜ್ಯದ ಆಹಾರ ಸ್ವಾವಲಂಬನೆಗೆ ಅನುಕೂಲವಾಗುತ್ತಿತ್ತು. ಸರ್ಕಾರದವರು ಸಂಸ್ಥಾನದ ಎಲ್ಲ ಭಾಗಗಳನ್ನೂ ಏಕ ರೀತಿಯಲ್ಲಿ ಅಭಿವೃದ್ಧಿಗೆ ತರಬೇಕೆಂಬುದೇನೋ ನ್ಯಾಯವಾಗಿದ್ದರೂ ನಮ್ಮ ದ. ಕ. ಜಿಲ್ಲೆಗೇ ಏಕೆ ಹೆಚ್ಚಿನ ಪಂಪ್‌ಸೆಟ್‌ಗಳನ್ನು ಒದಗಿಸಬೇಕೆಂದು ಕೇಳುತ್ತಿದ್ದೇನೆಂದರೆ ಅಲ್ಲಿ ಪ್ರಕೃತಿದತ್ತವಾದ 19 ನದಿಗಳು ವ್ಯಥಾ

ಹರಿದು ಸಮುದ್ರವನ್ನು ಸೇರುತ್ತಿವೆ; ಆ ನೀರನ್ನು ನಾವು ಹೆಚ್ಚು ವೆಚ್ಚ ಮಾಡದೆ ಬಳಸುವುದಕ್ಕೆ ಇರತಕ್ಕ ಒಂದೇ ಮಾರ್ಗ ಎಂದರೆ ಈ ಪಂಪ್‌ಸೆಟ್ಟುಗಳನ್ನು ಹಾಕಿ ನೀರನ್ನು ಸೇದುವುದು. ಆದ್ದರಿಂದ ಅಲ್ಲಿಗೆ ಹೆಚ್ಚಿಗೆ ಕೊಡಬೇಕೆಂದು ಕೇಳುತ್ತಿದ್ದೇನೆ.

ಇನ್ನು ಮಾನ್ಯ ಆರ್ಥಿಕ ಸಚಿವರು ನಗರ ಸಭೆಗಳ ಹಾಗೂ ಮುನಿಸಿಪಾಲಿಟಿಗಳ ವಿಚಾರವನ್ನೂ ಏನು ಹೇಳಿದ್ದಾರೆ ಅದು ತುಂಬಾ ಸ್ವಾಗತಾರ್ಹವಾದದ್ದು. ಈಗಿನ ಕಾಲದಲ್ಲಿ ರಾಜ್ಯಾದ್ಯಂತವೂ ಆಧುನಿಕ ಸೌಕರ್ಯ ಸೌಲಭ್ಯಗಳನ್ನು ಜನತೆಗೆ ಒದಗಿಸಬೇಕಾದ್ದು ಅವಶ್ಯಕವಾಗಿದೆ. ಅದರಿಂದ ಆ ಸಂಸ್ಥೆಗಳಿಗೆ ಹಣದ ಅಗತ್ಯವೂ ಕೂಡ ಜಾಸ್ತಿಯಾಗಿದೆ. ಅದಕ್ಕಾಗಿ ಸರ್ಕಾರದವರು ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಹಣವನ್ನೆತ್ತಬೇಕೆಂದು ಹೇಳಿರತಕ್ಕದ್ದು ಸ್ವಾಗತಾರ್ಹ. ಹಣದ ಸೌಕರ್ಯವೊಂದು ಅನುಕೂಲವಾದರೆ ಉಭಯ ಪ್ರದೇಶಗಳಿಗೂ ಏಕ ಕಾಲಕ್ಕೇ ಸೌಲಭ್ಯಗಳನ್ನು ನೀಡುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಸ್ಥಳೀಯ ಸಂಸ್ಥೆಗಳ ಆದಾಯ ಹೆಚ್ಚುವುದಕ್ಕೆ ಅನುಕೂಲವಾಗುವುದು; ಅವುಗಳ ಅಭಿವೃದ್ಧಿಯನ್ನೂ ಕೂಡ ಸಾಧಿಸಿದಂತಾಗುವುದು. ಮತ್ತು ಆ ಸಂಸ್ಥೆಗಳು ಪಡೆದ ಸಾಲವನ್ನು ಅವು ಮರುಪಾವತಿ ಮಾಡುವುದಕ್ಕೂ ಕೂಡ ಅನುಕೂಲವಾಗುವುದು ಆದರೆ ಈಗಾಗಲೇ ಸರ್ಕಾರದವರು ತಾಲ್ಲೂಕ್ ಬೋರ್ಡುಗಳಿಗೂ ಮತ್ತು ಗ್ರಾಮ ಪಂಚಾಯಿತಿಗಳಿಗೂ ರಾಜ್ಯಕ್ಕೆ ಬರತಕ್ಕ ಕಂದಾಯದ ವರಮಾನದಲ್ಲ ಇಂತಿಷ್ಟು ಭಾಗ ಎಂದು ತೀರ್ಮಾನ ಮಾಡಿ ಅದರಂತೆ ಈಗ ಕೊಡುತ್ತಾ ಬರುತ್ತಿದ್ದಾರೆ. ಇದೇ ಪ್ರಕಾರ ಸರ್ಕಾರದವರು ಇನ್ನು ತಮಗೆ ಬರತಕ್ಕ ಆ ಮೋಟಾರ್‌ವಾಹನಗಳ ತೆರಿಗೆಯಲ್ಲೂ ಕೂಡ ಒಂದು ಪಾಲನ್ನು ಈ ಸಂಸ್ಥೆಗಳಿಗೆ ಕೊಡಬೇಕಾದ್ದು ಅವಶ್ಯಕ. ಏಕೆಂದರೆ ತಾಲ್ಲೂಕ್ ಬೋರ್ಡು ಮತ್ತು ನಗರ ಕಾರ್ಪೊರೇಷನ್ ಪ್ರದೇಶದಲ್ಲಿರತಕ್ಕ ಮಾರ್ಗಗಳೆಲ್ಲಾ ಅವುಗಳ ಆಡಳಿತದಲ್ಲಿರುತ್ತವೆ. ಅಲ್ಲಿ ದಿನಂಪ್ರತಿ ಹೆವಿ ಮೋಟಾರ್ ವೆಹಿಕಲ್‌ಗಳು ಸಂಚಾರ ಮಾಡುತ್ತಿರುವುದರಿಂದ ಆ ಸಂಸ್ಥೆಗಳು ಬೇಗ ಹಾಳಾಗುವುದು ಸ್ವಾಭಾವಿಕ. ಆದ್ದರಿಂದ ಸರ್ಕಾರಕ್ಕೆ ಬರತಕ್ಕ ಈ ವಾಹನಗಳ ತೆರಿಗೆಯ ಹಣದಲ್ಲಿ ಒಂದು ಪಾಲನ್ನು ಸರ್ಕಾರ ಈ ಸ್ಥಳೀಯ ಸಂಸ್ಥೆಗಳಿಗೆ ಕೊಡತಕ್ಕದ್ದು ನ್ಯಾಯ ಮತ್ತು ಇದಕ್ಕೆ ಅವಕಾಶ ಮಾಡಿಕೊಟ್ಟರೆ ಆ ಸಂಸ್ಥೆಗಳಿಗೆ ತಮ್ಮ ಸಾಲಸೋಲಗಳನ್ನು ತೀರಿಸಿಕೊಳ್ಳುವುದಕ್ಕೂ ಸಹಾಯವಾಗುತ್ತದೆ.

ಇನ್ನು ಮಾನ್ಯ ಆರ್ಥಿಕ ಸಚಿವರು ಯುವಜನ ಚಟುವಟಿಕೆಗಳಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಒಂದು ಯೋಗ್ಯರೀತಿಯಲ್ಲಿ ಮನೋವಿಕಾಸವನ್ನು ಬೆಳೆಸುವುದಕ್ಕೆ ಅವಕಾಶ ಕೊಡಬೇಕಾದ್ದು ಅಗತ್ಯ; ಮತ್ತು ಅದು ಸ್ವಾಗತಾರ್ಹವಾದದ್ದು. ಅದೇ ರೀತಿ ರಾಜ್ಯದಲ್ಲಿ ಗರ್ಲ್‌ಗೈಡ್ಸ್ ಮತ್ತು ಸ್ಕೌಟ್ ಆಕ್ಟಿವಿಟೀಸ್‌ಗಳಿಗೂ ಒಂದು ಹೆಚ್ಚಿನ ಅವಕಾಶವನ್ನು ಕಲ್ಪಿಸಿದರೆ ಬಾಲ್ಯದಿಂದಲೂ ಒಟ್ಟಿಗೆ ಕೂಡಿ ಬಾಳತಕ್ಕ ಒಂದು ಸಹಕಾರಮನೋಭಾವನೆ ಬಾಲ್ಯದಲ್ಲೇ ಅವರಲ್ಲಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸರ್ಕಾರದವರು ಇದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ನಾನು ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ ಪಾಶ್ಚಾತ್ಯ ದೇಶಗಳಲ್ಲಿ ಆ ದೊಡ್ಡ ದೊಡ್ಡ ನಗರಗಳು ಅಲ್ಲಿ ಬೆಳೆದು ಪ್ರಖ್ಯಾತಿಗೆ ಬಂದಿದ್ದರೆ ಅದು ತೀರಾ ಅಲ್ಲಿನ ಪ್ರಕೃತಿದತ್ತವಾದ ಬಂದರುಗಳೇ ಕಾರಣವೆಂದು ನಾನು ತಿಳಿಯಬಯಸುತ್ತೇನೆ. ಅದೇ ರೀತಿ ನಮ್ಮಲ್ಲೂ ಪ್ರಕೃತಿದತ್ತವಾದ 19 ನದಿಗಳು ದ. ಕ. ಜಿಲ್ಲೆಯಲ್ಲಿ ಹರಿಯುತ್ತಿವೆ. ಆದಾಗ್ಯೂ ಸರ್ಕಾರದವರು ಇತ್ತಕಡೆಗೆ ಸಾಕಷ್ಟು ಗಮನವನ್ನು ಹರಿಸಿಲ್ಲ. ಅದಕ್ಕಾಗಿ ನಾನು ಬಹಳ ವಿಷಾದಪಡುತ್ತೇನೆ. ನಮ್ಮಲ್ಲಿ ಉತ್ತಮ ಬಂದರುಗಳ ಸೌಕರ್ಯವಿದ್ದರೂ ಅವುಗಳನ್ನು ಉತ್ತಮಪಡಿಸುವುದಕ್ಕೆ ಮನಸ್ಸನ್ನು ಮಾಡಿಲ್ಲ. ಬಳ್ಳಾರಿ ಮತ್ತು ಹೊಸ ಪೇಟೆಗಳಲ್ಲಿ ದೊರೆಯುತಕ್ಕ ಕಬ್ಬಿಣದ ಅದಿರು ಲೋಕ ಪ್ರಖ್ಯಾತಿಯಾದದ್ದು. ಅದನ್ನು ಈ ದಿವಸ ನಾವು ರಫ್ತು ಮಾಡಬೇಕಾಗಿದ್ದರೆ ಮದ್ರಾಸ್ ಅಥವಾ ಗೋವಾ ಬಂದರುಗಳಿಗೆ ಸಾಗಿಸಬೇಕಾಗಿದೆ. ನಮ್ಮ ಅದುರಿಗೆ ಪ್ರಪಂಚದ ಅನೇಕ ಭಾಗಗಳಿಂದ ಡಿಮ್ಯಾಂಡಿದೆ. ಆದರೆ ರವಾನ್ ಮಾಡುವುದಕ್ಕೆ ನಮ್ಮಲ್ಲಿ ಉತ್ತಮ ಬಂದರಿಲ್ಲ. ಮತ್ತು ಪರದೇಶದವರು ನಮ್ಮ ಸ್ಟೀಮರುಗಳಿಂದ ಡೆಲಿವರಿಯನ್ನು ತೆಗೆದುಕೊಳ್ಳುವುದಿಲ್ಲ. ಅವರಿಗೆ ಅವರ ಸ್ಟೀಮರಿನಿಂದಲೇ ಡೆಲಿವರಿಕೊಡಬೇಕು. ಇವಕ್ಕೆ ನಮ್ಮಲ್ಲಿ ಆಳವಾದ ಬಂದರುಗಳು ಬೇಕು. ಕೇಂದ್ರ ಸರ್ಕಾರದವರು ನಮ್ಮ ಮಂಗಳೂರ್ ಬಂದರಿನ ಆಳ 30 ಅಡಿಗಳಿದ್ದರೆ ಸಾಕೆಂದು ಹೇಳುತ್ತ ಈಗಾಗಲೇ ಮದ್ರಾಸ್ ಮತ್ತು ಗೋವಾ ಬಂದರುಗಳ ಆಳವನ್ನು ಹೆಚ್ಚಿಸುವುದಕ್ಕೆ ಅನುಮತಿ ನೀಡಿ ಅಲ್ಲಿ ಕೆಲಸ ನಡೆಯುತ್ತಿದೆ. ಈಗಾಗಲೆ ಗೋವಾದಲ್ಲಿ ಬಂದರಿನ ಆಳವನ್ನು 49 ಅಡಿಗೆ ಹೆಚ್ಚಿಸಲು 28 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ ಕೇಂದ್ರದವರು. ಆದರೆ ಇದೇ ರೀತಿ ಮನ್ನಣೆ ನಮ್ಮ ರಾಜ್ಯಕ್ಕೆ ದೊರೆಯದಿರುವುದು ವಿಷಾದಕರವಾದದ್ದು. ಇದರಲ್ಲಿಯೂ ತುಂಬಾ ರಾಜಕೀಯವಿದೆ.

(ಶ್ರೀ ಎಂ. ಶ್ರೀನಿವಾಸ ನಾಯಕ್)

ಆದರೆ ನಮ್ಮ ಮಂಗಳೂರು ಬಂದರು ಇಡೀ ಪ್ರಪಂಚದಲ್ಲೇ ಬಹಳ ಉತ್ತಮವಾದ ಬಂದರಾಗುತ್ತದೆಂದು ಜಪಾನಿನ ಮಿಡ್ಸ್ ಕಂಪೆನಿಯವರು ಬಹಳ ಒಳ್ಳೇ ರೀತಿಯ ಒಂದು ವರದಿಯನ್ನು ಈ ಬಂದರಿನ ಬಗ್ಗೆ ಕೊಟ್ಟಿದ್ದಾರೆ. ಇದಕ್ಕೆ ಮೊದಲನೇ ಹಂತದಲ್ಲಿ 6 ಕೋಟಿ ರೂಪಾಯಿಗಳೂ ಮತ್ತು ಎರಡನೇ ಹಂತದಲ್ಲಿ 10 ಕೋಟಿ ರೂಪಾಯಿಗಳೂ ಖರ್ಚಾಗಬಹುದೆಂದು ಅವರು ಅಂದಾಜು ಮಾಡಿದ್ದಾರೆ. ಇಲ್ಲಿ ಈ ಬಂದರನ್ನು ಅಭಿವೃದ್ಧಿಪಡಿಸಿದರೆ ಗಂಟೆ ಒಂದಕ್ಕೆ 4 ಸಾವಿರ ಟನ್ ಅದುರನ್ನು ಲೋಡ್ ಮಾಡಬಹುದೆಂದು ಮತ್ತು ಒಂದಾವರ್ತಿಗೆ 2 ಲಕ್ಷ ಮಿಲಿಯನ್ ಟನ್ ಅದುರನ್ನು ರಫ್ತು ಮಾಡಬಹುದೆಂದೂ ಅವರು ಹೇಳಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳುತ್ತೇನೆ. ಇಲ್ಲಿಂದ ನಾವು ಅದುರನ್ನು ರಫ್ತು ಮಾಡುವುದಕ್ಕೆ ಪ್ರಾರಂಭ ಮಾಡಿದರೆ ನಮಗೆ ಟನ್ ಒಂದಕ್ಕೆ 8 ರೂಪಾಯಿ ಕಡಿಮೆ ಖರ್ಚು ಬರುತ್ತೆಂದು ಹೇಳಿದ್ದಾರೆ. ನನಗೆ ಅಧ್ಯಕ್ಷರು ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. DEPUTY SPEAKER.—The House stands adjourned to meet again at 8-30 A.M. tomorrow.

———

The House adjourned at Ten Minutes past Seven of the Clock to meet again at Thirty Minutes past Eight of the Clock on Thursday, the 5th March, 1970.

———

WD 14668—GPB—520—28-7-1970